ಸಂಪುಟ: 14 Volume ಸಂಚಿಕೆ: 76 Issue ಪುಟಗಳು 08 Pages ಶುಕ್ರವಾರ 26 ಜೂನ್ 2026 ₹4 PRGINO.120927 (RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಜೀವನದಲ್ಲಿ ಬುದ್ಧಿವಂತಿಕೆಯೊಂದೇ ಸಾಲದು. ತಾಳ್ಮೆ ಮತ್ತು ವಿವೇಚನೆ ಕೂಡ ಮುಖ್ಯ.
–ವಿನೋಬಾ ಭಾವೆ



ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನೂತನ ಆಯುಕ್ತರಾಗಿ ಐಪಿಎಸ್ ಅಧಿಕಾರಿ ಎಂ.ಎನ್ ಅನುಚೇತ್ ಅವರು ಬೆಂಗಳೂರಿನಲ್ಲಿ ಅಧಿಕಾರ ಸ್ವೀಕರಿಸಿದ್ದಾರೆ. ಇದುವರೆಗೂ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಎಡಿಜಿಪಿ ಹೇಮಂತ್ ನಿಂಬಾಳ್ಕರ್ ಅವರು ಅನುಚೇತ್ ಅವರಿಗೆ ಅಧಿಕಾರ ಹಸ್ತಾಂತರಿಸಿದ್ದಾರೆ.

## ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿಗೆ ನಿರ್ಧಾರ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ತಾಲೂಕಿನ ಸುಕ್ಷೇತ್ರ ಯಲ್ಲಮ್ಮ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ದೇವಸ್ಥಾನ ಸಮಿತಿ, ಭಕ್ತರು ಹಾಗೂ ಗ್ರಾಮಸ್ಥರು ಮಹತ್ವದ ನಿರ್ಧಾರ ಕೈಗೊಂಡಿದ್ದಾರೆ. ದೇವಸ್ಥಾನದ ಮೂಲ ಸೌಕರ್ಯಗಳನ್ನು ವಿಸ್ತರಿಸುವುದು, ಭಕ್ತರಿಗೆ ಅನುಕೂಲವಾಗುವ ವ್ಯವಸ್ಥೆಗಳನ್ನು ಕಲ್ಪಿಸುವುದು ಹಾಗೂ ಕ್ಷೇತ್ರದ ಧಾರ್ಮಿಕ ಮಹತ್ವವನ್ನು ಮತ್ತಷ್ಟು ಹೆಚ್ಚಿಸುವ ಉದ್ದೇಶದಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ದೇವಸ್ಥಾನ ಆವರಣದಲ್ಲಿ ಕುಡಿಯುವ ನೀರು, ಶೌಚಾಲಯ, ವಿಶ್ರಾಂತಿ ಕೊಠಡಿ, ರಸ್ತೆ ಹಾಗೂ ವಿದ್ಯುತ್ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು. ಕ್ಷೇತ್ರಕ್ಕೆ ಆಗಮಿಸುವ ಭಕ್ತರ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಯೋಜನೆಗಳನ್ನು ಹಂತ ಹಂತವಾಗಿ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಈ



ಸಂದರ್ಭದಲ್ಲಿ ಮಾತನಾಡಿದ ಮುಖಂಡರು, ಕ್ಷೇತ್ರದ ಅಭಿವೃದ್ಧಿಗೆ ಸಾರ್ವಜನಿಕರು ಹಾಗೂ ದಾನಿಗಳು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ದೇವಸ್ಥಾನದ ಅಭಿವೃದ್ಧಿಯಿಂದ ಧಾರ್ಮಿಕ ಪ್ರವಾಸೋದ್ಯಮಕ್ಕೂ ಉತ್ತೇಜನ ದೊರೆಯಲಿದ್ದು, ಸ್ಥಳೀಯ ಜನರಿಗೆ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು. ಸಭೆಯಲ್ಲಿ ದೇವಸ್ಥಾನ ಸಮಿತಿಯ ಸದಸ್ಯರುಗಳಾದ ರಮೇಶರಡ್ಡಿ, ಸಿದ್ದಾರೆಡ್ಡಿ, ಮಾಣಿಕರಡ್ಡಿ, ಶಿವಾರೆಡ್ಡಿ, ರವಿರಡ್ಡಿ, ಮಹೋನರಡ್ಡಿ, ರಾಮರಡ್ಡಿ, ವೀರಾ–ರೆಡ್ಡಿ, ಶ್ರೀಮಲರಡ್ಡಿ, ಬ್ರಾಹ್ಮನಂದರಡ್ಡಿ, ಪುರಶೋತ್ತಮ ರಡ್ಡಿ, ಲಿಂಗಾರಡ್ಡಿ ಮಲ್ಲಿಕಾರ್ಜುನ ರಡ್ಡಿ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## ಪ್ರಿಯಾಂಕ್‌ಗೆ ಜೀವ ಬೆದರಿಕೆ: ಕ್ರಮಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ರಾಜ್ಯ ಸಚಿವ ಹಾಗೂ ಗೃಹ ಸಚಿವರಾದ ಪ್ರಿಯಾಂಕ್ ಖರ್ಗೆ ಅವರಿಗೆ ಜೀವ ಬೆದರಿಕೆ ಹಾಕಿರುವ ಘಟನೆಗಳನ್ನು ಖಂಡಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ಬೀದರ್ ಜಿಲ್ಲಾ ಸಂಚಾಲಕ ಸುನೀಲ ಸಂಗಮ ಅವರು ಪತ್ರಿಕಾ ಪ್ರಕಟಣೆ ಮೂಲಕ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಪ್ರಿಯಾಂಕ್ ಖರ್ಗೆ ಹಾಗೂ ಆರ್‌ಎಸ್‌ಎಸ್–ಬಿಜೆಪಿ ನಡುವಿನ ವಿಚಾರಸರಣಿ ಕುರಿತ ಚರ್ಚೆಗಳು ನಡೆ–ಯುತ್ತಿದ್ದು, ಈ ಸಂದರ್ಭದಲ್ಲಿ ಕೆಲವರು ಸಚಿವರಿಗೆ ಜೀವ ಬೆದರಿಕೆ ಹಾಕಿರುವುದು ಖಂಡನೀಯ ಎಂದು ಅವರು ತಿಳಿಸಿದ್ದಾರೆ. ಭಾರತದ ಎಲ್ಲ ಸಂಘಟನೆಗಳು ಹಾಗೂ ವ್ಯಕ್ತಿಗಳು ಸಂವಿಧಾನದ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸಬೇಕು ಎಂದು ಹೇಳಿರುವ ಸುನೀಲ ಸಂಗಮ, ಆರ್‌ಎಸ್‌ಎಸ್ ಸೇರಿದಂತೆ ಎಲ್ಲಾ ಸಂಘಟನೆಗಳು ಸಂವಿಧಾನದ ನಿಯಮಗಳಿಗೆ ಬದ್ಧರಾಗಿರಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಪ್ರಿಯಾಂಕ್ ಖರ್ಗೆ ಅವರು ಸಂವಿಧಾನದ ಅಡಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದು, ಅವರ ಹೇಳಿಕೆಗಳಲ್ಲಿ ವೈಯಕ್ತಿಕ ದ್ವೇಷ ಇಲ್ಲ ಎಂದು ಅವರು ತಿಳಿಸಿದ್ದಾರೆ.

ಪ್ರಿಯಾಂಕ್ ಖರ್ಗೆ ಅವರು ದಲಿತ ಸಮುದಾಯದ ಪ್ರಮುಖ ನಾಯಕರಾಗಿದ್ದು, ಅವರಿಗೆ ಯಾವುದೇ ರೀತಿಯ ಹಾನಿಯಾಗದಂತೆ ಸರ್ಕಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸುನೀಲ ಸಂಗಮ ಒತ್ತಾಯಿಸಿದ್ದಾರೆ.

## ಕೈಗೊಂಬೆಯಾದ ರಾಜ್ಯ ಚುನಾವಣಾ ಆಯೋಗ: ಛಲವಾದಿ

**ಬೆಂಗಳೂರು:** ರಾಜ್ಯದ ಕಾಂಗ್ರೆಸ್ ಸರ್ಕಾರದ ಕೈಗೊಂಬೆಯಾಗಿ ರಾಜ್ಯ ಚುನಾವಣಾ ಆಯೋಗವು ಬೆಂಗಳೂರಿನ 27 ವಾರ್ಡ್‌ಗಳಲ್ಲಿ ಎಸ್‌ಐಆರ್ ನಡೆಸುತ್ತಿದೆ. ಇದು ಕಾನೂನು ಬಾಹಿರ ಎಂದು ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಆಕ್ಷೇಪಿಸಿದ್ದಾರೆ.

ರಾಜ್ಯದ ಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ದೂರು ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಾಗಲೇ ಭಾರತ ಚುನಾವಣಾ ಆಯೋಗವು ವಿಶೇಷ ಮತಪಟ್ಟಿ ಪರಿಷ್ಕರಣೆ (ಎಸ್‌ಐಆರ್) ನಡೆಸುತ್ತಿದೆ. ಆದರೆ ಇದಕ್ಕೆ ಸಮಾನಾಂತರವಾಗಿ ರಾಜ್ಯ ಚುನಾವಣಾ ಆಯೋಗವು ಎಸ್‌ಐಆರ್ ನಡೆಸುತ್ತಿದೆ. ಇದು ತಪ್ಪು. ಈ ಬಗ್ಗೆ ರಾಜ್ಯ ಚುನಾವಣಾ ಆಯುಕ್ತ ಅನ್ಬುಕುಮಾರ್ ಅವರಿಗೆ ಮನವಿ ಸಲ್ಲಿಸಿರುವುದಾಗಿ ಹೇಳಿದರು. ಅನಧಿಕೃತವಾಗಿ ಈ ರೀತಿ ಎಸ್‌ಐಆರ್ ನಡೆಸುವುದು ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ. ಒಬ್ಬರ ಹೆಸರು ಬೇರೆ ಬೇರೆ ಕ್ಷೇತ್ರಗಳಲ್ಲಿ ಹೆಸರು ಇದ್ದರೆ ಅದನ್ನು ಎಸ್‌ಐಆರ್ ನಲ್ಲಿ ತೆಗೆಯಲಾಗುತ್ತದೆ. ಇಲ್ಲಿ ಪಕ್ಷಗಳ ಪ್ರಶ್ನೆ ಬರುವುದಿಲ್ಲ, ವ್ಯಕ್ತಿ ಮುಖ್ಯವಾಗುವುದಿಲ್ಲ. ಒಬ್ಬರ ಹೆಸರು ಒಂದೇ ಕಡೆ ಇರಬೇಕು ಎಂಬುದೇ ಇದರ ಪ್ರಮುಖ ಉದ್ದೇಶ ಎಂದು ವಿವರಿಸಿದರು.

## ಆತ್ಮಹತ್ಯೆ: ತನಿಖೆಗೆ ಆಗ್ರಹ

**ಬೀದರ್:** ಮೈಸೂರು ಜಿಲ್ಲೆಯ ಟಿ. ನರಸಿಪುರ ತಾಲ್ಲೂಕಿನ ಕೆಂಪಯ್ಯನಹುಂಡಿ ಗ್ರಾಮದಲ್ಲಿ ನಡೆದ ಉಪ್ಪಾರ ಸಮಾಜದ ಒಂದೇ ಕುಟುಂಬದ ಮೂವರ ಆತ್ಮಹತ್ಯೆ ಪ್ರಕರಣದ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷ ಡಾ. ತಾನಾಜಿ ಸಗರ್ ಆಗ್ರಹಿಸಿದ್ದಾರೆ.



ಉಲ್ಲಾಸಗೌಡ ಎಂಬಾತನ ಮಾನಸಿಕ ಕಿರುಕುಳ ಹಾಗೂ ಬೆದರಿಕೆಯಿಂದ ಮನ ನೊಂದು ಶಿವಣ್ಣ, ಅವರ ಪತ್ನಿ ನಾಗರತ್ನ ಹಾಗೂ ಹಸೆಮಣೆ ಏರಬೇಕಿದ್ದ ಮಗಳು ರಕ್ಷಿತಾಳೊಂದಿಗೆ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ತಿಳಿಸಿದ್ದಾರೆ. ಉಪ್ಪಾರ ಸಮಾಜದ ಮೇಲೆ ಮೇಲಿಂದ ಮೇಲೆ ಶೋಷಣೆ ನಡೆಯುತ್ತಿರುವುದು ಆಘಾತಕಾರಿಯಾಗಿದೆ. ಆತ್ಮಹತ್ಯೆ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಸಂತ್ರಸ್ತ ಕುಟುಂಬಕ್ಕೆ ರೂ. 75 ಲಕ್ಷ ಪರಿಹಾರ ಒದಗಿಸಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ.

# ಅಣೆಕಟ್ಟು ರಕ್ಷಣೆಗೆ ಬದ್ಧ

### ತುಂಗಭದ್ರಾ 33 ಸ್ಪಿಲ್‌ವೇ ಗೇಟ್‌ಗಳ ಲೋಕಾರ್ಪಣೆ | ಮೂರು ರಾಜ್ಯಗಳ ನೆರವು ಸ್ಮರಣೆ: ಸಿಎಂ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ತುಂಗಭದ್ರಾ ನದಿ ಪಾತ್ರದ ರೈತರ ಹಿತರಕ್ಷಣೆಗೆ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ಮೂರೂ ರಾಜ್ಯಗಳು ಸೇರಿ ಒಮ್ಮತದ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಕೊಪ್ಪಳ ಜಿಲ್ಲೆ ಮುನಿರಾಬಾದ್ ಸರಕಾರಿ ಹೈಸ್ಕೂಲ್ ಮೈದಾನದಲ್ಲಿ ತುಂಗಭದ್ರಾ ಅಣೆಕಟ್ಟೆಯ 33 ಸ್ಪಿಲ್ ವೇ ಗೇಟುಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಶಿವಕುಮಾರ್ ಅವರು ಗುರುವಾರ ಮಾತನಾಡಿದ್ದಾರೆ.

**ಆತಂಕ ವ್ಯಕ್ತಪಡಿಸಿದ್ದರು:** ಇದು ದಕ್ಷಿಣ ಭಾರತದ ಐತಿಹಾಸಿಕ ಕಾರ್ಯಕ್ರಮ. 19ನೇ ಗೇಟ್ ತುಂಡರಿಸಿದಾಗ ಈ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದ ಶಿವರಾಜ್ ತಂಗಡಗಿ, ಅಧಿಕಾರಿಗಳು ಮಧ್ಯರಾತ್ರಿ ನನಗೆ ಕರೆ ಮಾಡಿ, ಅಣೆಕಟ್ಟು ನಡುಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಕ್ಕೆ ಕ್ರಮ ಕೈಗೊಂಡಿರುವೆ ಎಂದಿದ್ದಾರೆ.

**ಬದಲಾಯಿಸಿದ ಗೇಟ್:** ನಾನು ಅಂದು ಬೆಳಗ್ಗೆ 8 ಗಂಟೆಗೆ ಸ್ಥಳಕ್ಕೆ ಭೇಟಿ ನೀಡಿದೆವು. ತಕ್ಷಣವೇ ಏನು ಮಾಡಬೇಕು ಎಂದು ತಜ್ಞರೊಂದಿಗೆ ಚರ್ಚಿಸಿ ಒಂದೇ ವಾರದಲ್ಲಿ ಗೇಟ್ ಬದಲಾವಣೆ ಮಾಡಲಾಯಿತು. ಆ ಮೂಲಕ ಈ ಭಾಗದ ರೈತರನ್ನು ರಕ್ಷಣೆ ಮಾಡಲಾಯಿತು ಎಂದು ತಿಳಿಸಿದ್ದಾರೆ.



ಗೇಟ್ ತುಂಡರಿಸಿದಾಗ ಪ್ರತಿಪಕ್ಷಗಳು ಟೀಕಿಸಿದ್ದವು. ಹುಲಿಗೆಮ್ಮ, ಅಜ್ಜಯ್ಯ ಅವರ ಪವಾಡ, ಹಂಪಿ ವಿರೂಪಾಕ್ಷನ ಕೃಪೆಯಿಂದಾಗಿ ಇಂತಹ ಮಹತ್ವದ ಕಾರ್ಯಕ್ರಮ ಮಾಡಲು ಸಾಧ್ಯವಾಯಿತು. 33 ಗೇಟ್ ಬದಲಾಯಿಸಲು ತೀರ್ಮಾನಿಸಿ ಈ ಮೂರು ರಾಜ್ಯಗಳ ರೈತರ ರಕ್ಷಣೆಗೆ ಭಗವಂತ ನಮಗೆ ಅವಕಾಶ ಮಾಡಿಕೊಟ್ಟಿದ್ದಾನೆ. ಅಂದು ನಾನು ನೀರಾವರಿ ಸಚಿವನಾಗಿದ್ದೆ. ಇಂದು ಮುಖ್ಯಮಂತ್ರಿಯಾಗಿದ್ದೇನೆ. ಆದರೂ ನಾನು ನಿಮ್ಮ ಸೇವಕ.
–ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ

### ತುಂಗಭದ್ರಾ ಅಣೆಕಟ್ಟು ರಕ್ಷಣೆ

ತುಂಗಭದ್ರಾ ಅಣೆಕಟ್ಟು ರಕ್ಷಣೆ ಮಾಡಲಾಗಿದೆ. ಇತಿಹಾಸ ಮರೆತವ ಇತಿಹಾಸ ಸೃಷ್ಟಿಸಲಾರ ಎಂಬ ಮಾತಿದೆ. ಇಂದು ಸಿ.ಆರ್ ಪಾಟೀಲ್ ಅವರ ನೇತೃತ್ವದಲ್ಲಿ ಚಂದ್ರಬಾಬು ನಾಯ್ಡು, ರೇವಂತ್ ರೆಡ್ಡಿ ಅವರು ಸೇರಿ ಮೂರು ರಾಜ್ಯಗಳ ಸಿಎಂಗಳಿಂದ ಇತಿಹಾಸ ನಿರ್ಮಾಣವಾಗಿದೆ. ನಾವು ಇತಿಹಾಸ ಓದುವುದು, ಸ್ಮರಿಸು ವುದಕ್ಕಿಂತ ಇತಿಹಾಸ ಸೃಷ್ಟಿಸುವುದು ನಮ್ಮ ಗುರಿ ಎಂದಿದ್ದಾರೆ ಸಿಎಂ.

### ಅಣೆಕಟ್ಟು ಇತಿಹಾಸ ಸ್ಮರಣೆ

ತುಂಗಭದ್ರಾ ನದಿಗೆ ಜಲಾಶಯ ನಿರ್ಮಿಸುವ ಆಲೋಚನೆಗೆ 1860 ರಲ್ಲೇ ಬ್ರಿಟಿಷ್ ಇಂಜಿನಿಯರ್ ಸರ್ ಆರ್ಥರ್ ಕಾಟನ್ ನಾಂದಿ ಹಾಡಿದ್ದರು. 1949 ರಲ್ಲಿ ಇದರ ಕಾಮಗಾರಿ ಆರಂಭಗೊಂಡು ಪೂರ್ಣಗೊಳ್ಳುವ ಹೊತ್ತಿಗೆ ಅನೇಕ ಮಹನೀಯರು ಇದಕ್ಕೆ ಸಾಕ್ಷಿಯಾಗಿದ್ದಾರೆ. ನಮಗೆ ಸಿಕ್ಕ ಅವಕಾಶದಲ್ಲಿ ನಿಮ್ಮ ಸೇವೆ ಮಾಡುತ್ತಿದ್ದೇವೆ ಎಂದು ವಿವರಿಸಿದ್ದಾರೆ ಸಿಎಂ.

### ರೈತ ಕುಟುಂಬ ರಕ್ಷಣೆ

ಈ ಅಣೆಕಟ್ಟಿನ 33 ಟಿಎಂಸಿ ನೀರನ್ನು ಉಳಿಸುವ ಬಗ್ಗೆ ರೈತ ಮುಖಂಡರು ಸಲ್ಲಿಸಿರುವ ಮನವಿ ಸೇರಿದಂತೆ ರೈತ ಕುಟುಂಬಗಳ ರಕ್ಷಣೆಗೆ ನಾವು ಚರ್ಚಿಸಿದ್ದೇವೆ. ನವಿಲಿ ಸಮನಾಂತರ ಜಲಾಶಯ, ಹೂಳೆತ್ತುವ ವಿಚಾರ ಸೇರಿ ಎಲ್ಲಾ ಅವಕಾಶಗಳ ಬಗ್ಗೆ ಸುದೀರ್ಘ ತರ್ಕದಿಂದ ನಾವೆಲ್ಲ ಒಮ್ಮತಕ್ಕೆ ಬಂದಿದ್ದು, ಈ ತೀರ್ಮಾನವನ್ನು ಕೇಂದ್ರ ಸಚಿವರೇ ಪ್ರಕಟಿಸಲಿದ್ದಾರೆ ಎಂದು ನುಡಿದಿದ್ದಾರೆ.

## ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಸಚಿವ ಈಶ್ವರ ಖಂಡ್ರೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಜಿಲ್ಲೆಯಲ್ಲಿ ಮಳೆ ವಿಳಂಬದಿಂದ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಇರುವುದರಿಂದ, ಗ್ರಾಮೀಣ ಕುಡಿಯುವ ನೀರಿನ ವ್ಯವಸ್ಥೆಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಬೀದರ್ ಜಿಲ್ಲಾ ಪ್ರಕೃತಿ ವಿಕೋಪ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ಅವರು ಗುರುವಾರ ನಗರದ ಜಿಲ್ಲಾ ಪಂಚಾಯತ ಕಚೇರಿ ಸಭಾಂಗಣದಲ್ಲಿ ಮುಂಗಾರು ವಿಳಂಬದ ಹಿನ್ನೆಲೆಯಲ್ಲಿ ತುರ್ತು ಪ್ರಗತಿ ಪರಿಶೀಲನೆ ಸಭೆ ನಡೆಸಿ ಮಾತನಾಡಿದರು.



ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಾರದು ಎಂಬುದು ಸರ್ಕಾರದ ಆದ್ಯತೆಯಾಗಿದ್ದು, ಅಗತ್ಯವಿದ್ದಲ್ಲಿ ಖಾಸಗಿ ನೀರಿನ ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಮಾಡಬೇಕು. ಅಗತ್ಯವಿರುವ ಕಡೆ ಹೊಸ ಕೊಳವೆಬಾವಿಗಳನ್ನು ಕೊರೆಸಿ ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ನೀರು ತಲುಪುವಂತೆ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಳೆ ವಿಳಂಬದಿಂದ ಜಿಲ್ಲೆಯ ರೈತರು ಆತಂಕದಲ್ಲಿದ್ದು ಕೃಷಿ ಅಧಿಕಾರಿಗಳು ರೈತರಿಗೆ ಅಗತ್ಯ ಮಾರ್ಗದರ್ಶನ ನೀಡಬೇಕು. ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಸಮರ್ಪಕ ಲಭ್ಯತೆ ಖಚಿತಪಡಿಸಿಕೊಂಡು ರೈತರಿಗೆ ಕೊರತೆ–ಯಾಗದಂತೆ ನೋಡಿಕೊಳ್ಳಬೇಕು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (MGNREGS) ಪ್ರಗತಿಯನ್ನೂ ಪರಿಶೀಲಿಸಿ, ಗ್ರಾಮೀಣ ಜನರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕೆಲಸ ಮಾಡಬೇಕು. ಸ್ವಚ್ಛ ಭಾರತ ಮಿಷನ್ (SBM) ಅಡಿಯಲ್ಲಿ ಕಸ ವಿಲೇವಾರಿ ಘಟಕಗಳ (SBM Sheds) ನಿರ್ಮಾಣ ಕಾಮಗಾರಿಗಳ ಪ್ರಗತಿಯ ಅಧಿಕಾರಿಗಳಿಂದ ಮಾಹಿತಿ ಪಡೆದ ಸಚಿವರು, ಬಾಕಿ ಉಳಿದಿರುವ ಎಲ್ಲಾ ಕಾಮಗಾರಿಗಳನ್ನು ತ್ವರಿತವಾಗಿ ಆರಂಭಿಸಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

## ಮಾವು ಬೆಳೆಗಾರರ ನೆರವಿಗೆ ಕೇಂದ್ರ..!

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಮಂತ್ರಿಗಳಾದ ಶಿವರಾಜ್ ಸಿಂಗ್ ಚೌಹಾಣ್ ಅವರೊಂದಿಗೆ ಚರ್ಚೆ ನಡೆಸಿದ ಫಲವಾಗಿ ಕೇಂದ್ರ ಸರಕಾರ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸಿದೆ.



ವಾತಾವರಣ ವೈಪರಿತ್ಯ ಮತ್ತು ಬೆಲೆ ಕುಸಿತದಿಂದ ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದ ಮಾವು ಬೆಳೆಗಾರರಿಗೆ ನೆರವಿನ ಹಸ್ತ ಚಾಚಿರುವ ಕೇಂದ್ರವು, ಮಾರುಕಟ್ಟೆ ಹಸ್ತಕ್ಷೇಪ ಯೋಜನೆ ಅಡಿಯಲ್ಲಿ 1.30 ಲಕ್ಷ ಮೆಟ್ರಿಕ್ ಟನ್ ಮಾವಿಗೆ ಪ್ರತಿ ಕ್ವಿಂಟಲ್‌ಗೆ ₹1,750 ನೆರವು ಘೋಷಿಸಿದೆ.

ಈ ಸಂಬಂಧ ಸಚಿವ ಕುಮಾರಸ್ವಾಮಿ ಅವರು ನವದೆಹಲಿಯಲ್ಲಿ ಬುಧವಾರ ಕೃಷಿ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದರು. ತ್ವರಿತವಾಗಿ ಮಾವು ಬೆಳೆಗಾರರ ರಕ್ಷಣೆಗೆ ಧಾವಿಸಬೇಕು ಎಂದು ಮನವಿ ಮಾಡಿದ್ದರು. ಕುಮಾರಸ್ವಾಮಿ ಅವರು ಮನವಿಗೆ ಸ್ಪಂದಿಸಿದ್ದ ಚೌಹಾಣ್ ಅವರು, ಮಾವು ಬೆಳೆಗಾರರಿಗೆ ಆರ್ಥಿಕ ನೆರವು ಘೋಷಿಸಿದ್ದಾರೆ.

ಅಲ್ಲದೆ, ಇದೇ ಜೂನ್ 17ರಂದು ಸಚಿವ ಚೌಹಾಣ್ ಅವರಿಗೆ ಪತ್ರ ಬರೆದಿದ್ದ ಬೃಹತ್ ಕೈಗಾರಿಕೆ ಸಚಿವರು, ಮಾವು ಬೆಳೆಗಾರರ ನೆರವಿಗೆ ಬರುವಂತೆ ಕೋರಿದರು. ಬೆಲೆ ಕೊರತೆ ಪಾವತಿ ಯೋಜನೆ (PDPS) ಯಡಿ ನೆರವಾಗುವಂತೆ ಕೇಳಿದ್ದರು. ತದನಂತರ ಕೋಲಾರ ಜಿಲ್ಲೆಯಲ್ಲಿ ಮಾವು ಬೆಳೆಗಾರರು ಪ್ರತಿಭಟನೆ ಶುರು ಮಾಡುತ್ತಿದ್ದಂತೆಯೇ ತುರ್ತಾಗಿ ಬುಧವಾರ ಸಂಜೆ ಕೃಷಿ ಸಚಿವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದರು. ಅದರ ಫಲವಾಗಿ ಆರ್ಥಿಕ ನೆರವಿನ ಘೋಷಣೆ ಹೊರಬಿದ್ದಿದೆ. ಕೇಂದ್ರ ಸರ್ಕಾರದ ಈ ಉಪಕ್ರಮದ ಮೂಲಕ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಮಂಡ್ಯ ಸೇರಿದಂತೆ ವಿವಿಧ ಜಿಲ್ಲೆಗಳ ಮಾವು ಬೆಳೆಗಾರರಿಗೆ ನೆರವಾಗಲಿದೆ.

ಕೃಷಿ ಸಚಿವರಿಗೆ ಧನ್ಯವಾದ ತಿಳಿಸಿರುವ ಸಚಿವ ಕುಮಾರಸ್ವಾಮಿ ಅವರು; ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ (MIS) ಯಡಿ ಬೆಲೆ ಕೊರತೆ ಪಾವತಿ ಯೋಜನೆ (PDPS) ಜಾರಿಗೆ ತ್ವರಿತವಾಗಿ ನಿರ್ಧಾರ ಕೈಗೊಂಡಿ–ದೆ. ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆಯ ಮಾರ್ಗಸೂಚಿಯಂತೆ ಪ್ರಸಕ್ತ ಹಂಗಾಮಿನಲ್ಲಿ ತೋತಾಪುರಿ ಮಾವಿಗೆ ಬೆಲೆ ಕೊರತೆ ಪಾವತಿ ಜಾರಿಗೆ ಬರಲಿದೆ. ಗರಿಷ್ಠ 1,30,000 ಮೆಟ್ರಿಕ್ ಟನ್ ವರೆಗೆ ಅನ್ವಯ ಆಗುವಂತೆ ಪ್ರತೀ ಕ್ವಿಂಟಲ್‌ಗೆ ₹1,750 ಸಹಾಯಧನ ಘೋಷಣೆ ಮಾಡಲಾಗಿದ್ದು, ಇದಕ್ಕೆ ಸಂಬಂಧಿಸಿದ ಮಾರ್ಗಸೂಚಿಯನ್ನು ಹೊರಡಿಸಿದೆ.




## ವಿದ್ಯಾರ್ಥಿಗಳು ಸತ್ತರೂ ಕುರ್ಚಿಗೆ ಅಂಟಿಕೊಂಡು ಕೂತಿರುವ ಧರ್ಮೇಂದ್ರ ಪ್ರಧಾನ್: ಮಲ್ಲಿಕಾರ್ಜುನ ಖರ್ಗೆ ಕಿಡಿ

## ನೊಂದ ರೈತರ ನೆರವಿಗೆ ಅಧಿಕಾರಿಗಳು ಮುಂದೆ ಬನ್ನಿ

ರಾಜ್ಯದ ಹಲವು ಭಾಗಗಳಲ್ಲಿ ಮಳೆ ಕೊರತೆ, ಬೆಳೆ ಹಾನಿ, ನೀರಿನ ಅಭಾವ ಹಾಗೂ ಕೃಷಿ ವೆಚ್ಚಗಳ ಏರಿಕೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೃಷಿಯನ್ನೇ ನಂಬಿಕೊಂಡಿರುವ ರೈತ ಕುಟುಂಬಗಳು ಆರ್ಥಿಕವಾಗಿ ತೊಂದರೆ ಅನುಭವಿಸುತ್ತಿದ್ದು, ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಅವರ ನೆರವಿಗೆ ಧಾವಿಸುವುದು ಅಗತ್ಯವಾಗಿದೆ.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**

ಕೃಷಿ, ತೋಟಗಾರಿಕೆ, ಕಂದಾಯ ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ರೈತರ ಸಮಸ್ಯೆಗಳನ್ನು ಆಲಿಸಬೇಕು. ಬೆಳೆ ಹಾನಿಯ ಸಮೀಕ್ಷೆಯನ್ನು ಪಾರದರ್ಶಕವಾಗಿ ನಡೆಸಿ, ಅರ್ಹ ರೈತರಿಗೆ ಪರಿಹಾರವನ್ನು ತ್ವರಿತವಾಗಿ ವಿತರಿಸುವ ಕ್ರಮ ಕೈಗೊಳ್ಳಬೇಕು. ರೈತರು ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಅಗತ್ಯ ಮಾರ್ಗದರ್ಶನ ಮತ್ತು ಸಹಕಾರ ನೀಡಬೇಕು.

ಬ್ಯಾಂಕ್ ಸಾಲ, ಬೆಳೆ ವಿಮೆ, ಬಿತ್ತನೆ ಬೀಜ ಹಾಗೂ ಗೊಬ್ಬರದ ಸಮಸ್ಯೆಗಳ ಬಗ್ಗೆ ವಿಶೇಷ ಗಮನ ಹರಿಸಿ ರೈತರ ಸಂಕಷ್ಟ ನಿವಾರಣೆಗೆ ಕ್ರಮ ಕೈಗೊಳ್ಳುವುದು ಕಾಲದ ಅಗತ್ಯವಾಗಿದೆ. ರೈತರು ದೇಶದ ಬೆನ್ನೆಲುಬಾಗಿರುವುದರಿಂದ ಅವರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವುದು ಆಡಳಿತದ ಜವಾಬ್ದಾರಿಯಾಗಿದೆ.

ನೊಂದ ರೈತರ ಕಣ್ಣೀರು ಒರೆಸಲು ಸರ್ಕಾರ ಮತ್ತು ಅಧಿಕಾರಿಗಳು ಮಾನವೀಯತೆ ಹಾಗೂ ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು. ರೈತರ ಬದುಕು ಸುಧಾರಿಸಿದಾಗ ಮಾತ್ರ ಗ್ರಾಮೀಣ ಆರ್ಥಿಕತೆ ಬಲಗೊಳ್ಳಲು ಸಾಧ್ಯ. ಆದ್ದರಿಂದ ಅಧಿಕಾರಿಗಳು ರೈತರ ನೆರವಿಗೆ ಮುಂದೆ ಬಂದು ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕಾಗಿದೆ.



## ಮಹತ್ವದ ಕಾಮಗಾರಿಗಳಿಗೆ ಭೂಮಿ ಪೂಜೆ



**ಹಗರಿಬೊಮ್ಮನಹಳ್ಳಿ:** ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿ, ಒಟ್ಟು ▯6 ಕೋಟಿ (600 ಲಕ್ಷ) ವೆಚ್ಚದ ಎರಡು ಪ್ರಮುಖ ಅಭಿವೃದ್ಧಿ ಕಾಮಗಾರಿಗಳಿಗೆ ಗುರುವಾರ ಭೂಮಿ ಪೂಜೆ ನೆರವೇರಿತು. ಕ್ಷೇತ್ರದ ಶಾಸಕ ಶ್ರೀ ಕೆ. ನೇಮಿರಾಜ ನಾಯ್ಕ ಅವರು ಎರಡೂ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಮೊದಲ ಕಾರ್ಯಕ್ರಮದಲ್ಲಿ, ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ 2024–25 ಹಾಗೂ 2025–26ನೇ ಸಾಲಿನ ಮೈಕ್ರೋ ಯೋಜನೆಯಡಿ ಹಗರಿಬೊಮ್ಮನಹಳ್ಳಿ ಪಟ್ಟಣದ ತೇರುಬೀದಿ ಬದಿ ರಸ್ತೆಯಿಂದ ಗುರುಭವನ ರಸ್ತೆಯವರೆಗೆ ಸಿ.ಸಿ. ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ರಾಮನಗರದ ತೇರುಬೀದಿಯಲ್ಲಿ ನಡೆದ ಈ ಕಾರ್ಯಕ್ರಮದ ಕಾಮಗಾರಿಯನ್ನು ಕೆ.ಕೆ.ವಿ.ಡಿ.ಎಲ್. ಉಪವಿಭಾಗ ಹೂವಿನಹಡಗಲಿ ವತಿಯಿಂದ ₹2 ಕೋಟಿ ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆಕೈಗೆತ್ತಿಕೊಳ್ಳಲಾಗಿದೆ.

ಇದೇ ದಿನ, ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ (ಕೆ.ಕೆ.ಆರ್.ಡಿ.ಬಿ.) ಯೋಜನೆಯಡಿ ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಮೇಲಿನಕಣಿವೆ–ನಾಗತಿಬಸಾಪುರ ರಾಜ್ಯ ಹೆದ್ದಾರಿ–215ರ ಕಿ.ಮೀ. 68.00 ರಿಂದ 74.00ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಗೂ ಕೆಟ್ಟನಬಂದಿ ಕ್ರಾಸ್‌ನಲ್ಲಿ ಭೂಮಿ ಪೂಜೆ ನೆರವೇರಿತು. ಲೋಕೋಪಯೋಗಿ ಇಲಾಖೆ ಉಪವಿಭಾಗ, ಹಗರಿಬೊಮ್ಮನಹಳ್ಳಿ ವತಿಯಿಂದ ಅನುಷ್ಠಾನಗೊಳ್ಳಲಿರುವ ಈ ಕಾಮಗಾರಿಯ ಅಂದಾಜು ವೆಚ್ಚ ₹4 ಕೋಟಿ ಆಗಿದೆ.

ಈ ಎರಡೂ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡ ಬಳಿಕ ಪಟ್ಟಣದ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಸುಧಾರಣೆಯಾಗುವುದರ ಜೊತೆಗೆ ಗ್ರಾಮೀಣ ಸಂಪರ್ಕ ರಸ್ತೆಗಳ ಗುಣಮಟ್ಟ ಹೆಚ್ಚಾಗಿ, ಸಾರ್ವಜನಿಕರಿಗೆ ಸುಗಮ ಸಂಚಾರ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಅನುಕೂಲವಾಗಲಿದೆ.

ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು, ಬಾದಮಿ ಮೃಂತುಜಯ ಜಿಲ್ಲಾ ಅದ್ಯಕ್ಷರು ಕೆಎಸ್. ಪ್ರಕಾಶ್ ಬಿಜೆಪಿ ಮಂಡಲ್ ಅಧ್ಯಕ್ಷರರ.ಜೆಡಿಎಸ್. ವೈ ಮಲ್ಲಿಕಾರ್ಜುನ ತಾಲೂಕು ಅದ್ಯಕ್ಷರು ಜೆಡಿಎಸ್. ಚಂದ್ರಶೇಖರ್ ಮುಖಂಡರು, ಸಂದೀಪ್ ಶಿವಮೊಗ್ಗ, ಸಿದ್ದಪ್ಪ ಬಡಿಗೇರ್. ಧರ್ಮನಾಯ್ಕ ಸಿದ್ದರಾಸಿದ್ದರಾಜು ಮುಖಂಡರು. ಬ್ಯಾಟಿ ನಾಗರಾಜ ಅಪ್ತ ಸಹಾಯಕ. ಕನಕಪ್ಪ ಮುಖಂಡರು. ವಿ.ದೊಡ್ಡ ಬಸಪ್ಪ ಗುತ್ತಿಗೆದಾರರು. ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಪ್ರಗತಿ ಕಾಮಗಾರಿಗಳಿಗೆ ಶಾಸಕ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಹೊಕ್ರಾಣಾ (ಕೆ) ಹಾಗೂ ಹೊಕ್ರಾಣಾ (ಬಿ) ಗ್ರಾಮಗಳ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿ ವಿವಿಧ ಮೂಲಭೂತ ಸೌಕರ್ಯಗಳ ನಿರ್ಮಾಣ ಕಾಮಗಾರಿಗಳಿಗೆ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ರಾಜಗೀರಾ ಗ್ರಾಮದಿಂದ ಹೊಕ್ರಾಣಾ (ಕೆ) ಹಾಗೂ ಹೊಕ್ರಾಣಾ (ಬಿ) ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸುಮಾರು ₹10 ಕೋಟಿ ವೆಚ್ಚದ ರಸ್ತೆ ಡಾಂಬರೀಕರಣ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದ್ದು, ಈ ರಸ್ತೆ ನಿರ್ಮಾಣದಿಂದ ಎರಡು ಗ್ರಾಮಗಳ ಜನರಿಗೆ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲಾಗಿದೆ. ಹಲವು ವರ್ಷಗಳ ಬೇಡಿಕೆಯಾಗಿದ್ದ ಈ ರಸ್ತೆ ಪೂರ್ಣಗೊಂಡಿರುವುದರಿಂದ ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಅನುಕೂಲ ಪಡೆಯುತ್ತಿದ್ದಾರೆ.

ಇದೀಗ ಹೊಕ್ರಾಣಾ (ಕೆ) ಗ್ರಾಮದಲ್ಲಿ ₹35 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ, ಬಸವೇಶ್ವರ ದೇವಸ್ಥಾನಕ್ಕೆ ₹5 ಲಕ್ಷ ವೆಚ್ಚದ ಭವನ ನಿರ್ಮಾಣ ಕಾಮಗಾರಿ ಹಾಗೂ ಹೊಕ್ರಾಣಾ (ಬಿ) ಗ್ರಾಮದ ಭೀಮಾಶಂಕರ ದೇವಸ್ಥಾನದ ಬಳಿ ₹5 ಲಕ್ಷ ವೆಚ್ಚದ ಭವನ ನಿರ್ಮಾಣ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು, ಈ ವೇಳೆ ಗ್ರಾಮಸ್ಥರು ಮಾತನಾಡಿ, "ರಾಜಗೀರಾದಿಂದ ಹೊಕ್ರಾಣಾ (ಕೆ) ಹಾಗೂ ಹೊಕ್ರಾಣಾ (ಬಿ) ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ ಹಲವು ವರ್ಷಗಳ ಕನಸಾಗಿತ್ತು. ಇಂದು ರಸ್ತೆ ನಿರ್ಮಾಣ ಪೂರ್ಣಗೊಂಡಿರುವುದರ ಜೊತೆಗೆ ಗ್ರಾಮದ ಒಳಾಂಗಣ ರಸ್ತೆ, ಚರಂಡಿ ಹಾಗೂ ದೇವಸ್ಥಾನ ಭವನ ನಿರ್ಮಾಣ ಕಾಮಗಾರಿಗಳೂ ಆರಂಭವಾಗಿರುವುದು ಸಂತಸದ ವಿಷಯ. ನಮ್ಮ ಗ್ರಾಮದ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸಿ ನಿರಂತರ ಅನುದಾನ ತಂದು ಕಾಮಗಾರಿಗಳನ್ನು ಕೈಗೊಳ್ಳುತ್ತಿರುವ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರಿಗೆ ಗ್ರಾಮಸ್ಥರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು," ಎಂದು ಸಂತಸ ವ್ಯಕ್ತಪಡಿಸಿದರು.

ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಶಾಸಕರು, ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ಯಾವುದೇ ನಿರ್ಲಕ್ಷ್ಯಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಗುರುನಾಥ ರಾಜಗೀರ ಮುಖಂಡರಾದ ವೀರಶೆಟ್ಟಿ ಪಾಟೀಲ್, ಸುರೇಶ ಮಾಶೆಟ್ಟಿ, ಚಂದ್ರಯ್ಯ ಸ್ವಾಮಿ, ವಿಶ್ವನಾಥ ಬೆಮಳಗಿ, ಬಾಬುರಾವ ಮೇತ್ರಿ, ಚಂದ್ರಕಾಂತ ಕೊಹೀರ, ಮಲ್ಲಿಕಾರ್ಜುನ ಪಾಟೀಲ, ಶಿವಕುಮಾರ ಪಾಟೀಲ, ಗೋಪಾಲ ರೆಡ್ಡಿ, ಪರಮೇಶ ಪಾಟೀಲ, ಮಲ್ಲಿಕಾರ್ಜುನ ಕುಂಬಾರ, ಸಂಗಯ್ಯ ಸ್ವಾಮಿ, ತುಕಪ್ಪ ಮೇತ್ರಿ, ಸಂಜುಕುಮಾರ ಕುಂಬಾರ, ಜಗನಾಥ್ ಉಪಾರ, ಅಶೋಕ ಮೇತ್ರಿ, ಸುಧಾಕರ ವರ್ಮಾ, ಫಾಳೇಪ್ಪ ರಾಜಗೀರ, ಮಲ್ಲಿಕಾರ್ಜುನ ಮುಲಗಿ, ಬಸವರಾಜ ಪವಾರ್, ಶಿವಕಾಂತ ಶೇಖಾಪುರ, ಫಾಳೇಪ್ಪ ಬಾಲಬಡಿ, ಸನ್ನಿಯೋದಿನ್ ಮಂಗಲಗಿಕರ, ವಿಜಯಕುಮಾರ ಸ್ವಾಮಿ, ಅಮೃತಪ್ಪ, ಮನೋಹರ, ಚನ್ನಪ್ಪ ಮುಮಡಿ, ಚಂದ್ರಶೇಖರ, ಪ್ರಭು ಸುತಾರ, ವೀರಭದ್ರಪ್ಪ ಕೊಹೀರ, ನರಸಪ್ಪ ಚಿಂತಲಗೇರಾ, ಸಂಗಪ್ಪ ಫಾಳಗೊಂಡ ಸೇರಿದಂತೆ ಅನೇಕ ಗ್ರಾಮಸ್ಥರು ಉಪಸ್ಥಿತರಿದ್ದರು.

> **ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ವಿಶೇಷ ಆದ್ಯತೆ ನೀಡಲಾಗುತ್ತಿದೆ. ರಸ್ತೆ, ಚರಂಡಿ, ಸಮುದಾಯ ಭವನ ಸೇರಿದಂತೆ ಸಾರ್ವಜನಿಕ ಉಪಯೋಗದ ಕಾಮಗಾರಿಗಳು ಗ್ರಾಮಗಳ ಅಭಿವೃದ್ಧಿಗೆ ಹೊಸ ದಿಕ್ಕು ನೀಡಲಿದ್ದು, ಜನರ ಜೀವನಮಟ್ಟವನ್ನು ಇನ್ನಷ್ಟು ಉತ್ತಮಗೊಳಿಸಲಿವೆ**
> **–ಡಾ.ಶೈಲೇಂದ್ರ ಬೆಲ್ದಾಳೆ**
> **ಶಾಸಕರು, ಬೀದರ ದಕ್ಷಿಣ ಕ್ಷೇತ್ರ**

## ಶಾಸಕ ರಹೀಂಖಾನ್‌ಗೆ ಸಚಿವ ಸ್ಥಾನಕ್ಕೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಶಾಸಕ ರಹೀಂಖಾನ್ ಅವರಿಗೆ ರಾಜ್ಯ ಸರ್ಕಾರದಲ್ಲಿ ಸಂಪುಟ ದರ್ಜೆ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಕಿಸಾನ್ ವಿಭಾಗದ ರಾಷ್ಟ್ರೀಯ ಜಂಟಿ ಸಂಯೋಜಕ ಜಾನಸನ್ ಘೋಡೆ ನವದೆಹಲಿಯಲ್ಲಿ ಗುರುವಾರ ರಾಜ್ಯಸಭೆ ಸದಸ್ಯೆ ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರಿಗೆ ಪ್ರತ್ಯೇಕ ಮನವಿ ಪತ್ರ ಸಲ್ಲಿಸಿದ್ದಾರೆ. ಪೌರಾಡಳಿತ ಸಚಿವರಾಗಿ ರಹೀಂಖಾನ್ ಅವರು ಬಹಳಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ದೀನ-ದಲಿತರು, ಬಡವರು, ಅಲ್ಪಸಂಖ್ಯಾತರ ಏಳಿಗೆಗೆ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ ಎಂದು ತಿಳಿಸಿದ್ದಾರೆ.

ಬೀದರ್ ನಗರಸಭೆಯನ್ನು ಮಹಾನಗರ ಪಾಲಿಕೆಯಾಗಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಬೀದರ್ ನಗರದ ರಸ್ತೆಗಳನ್ನು ಡಾಂಬರೀಕರಣ ಮಾಡಿಸಿದ್ದಾರೆ. ಜಿಲ್ಲಾ ಆಡಳಿತ ಕಚೇರಿಗಳ ಸಂಕೀರ್ಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ.

ಕಳೆದ ಲೋಕಸಭೆ ಚುನಾವಣೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಐದು ಸ್ಥಾನ ಗೆಲ್ಲುವಲ್ಲಿ ಅವರ ಪರಿಶ್ರಮ ಅಪಾರವಾಗಿದೆ. ಸಚಿವ ಸಂಪುಟದಲ್ಲಿ ಮೊದಲ ಹಂತದಲ್ಲಿ ರಹೀಂಖಾನ್ ಅವರಿಗೆ ಸ್ಥಾನ ದೊರೆಯದಿರುವುದರಿಂದ ಕ್ಷೇತ್ರದ ಮತದಾರರರು, ಅಭಿಮಾನಿಗಳು, ಬೆಂಬಲಿಗರು ಹಾಗೂ ಕಾರ್ಯಕರ್ತರು ಅಸಮಾಧಾನಗೊಂಡಿದ್ದಾರೆ. ಅಸಮಾಧಾನ ಹೋಗಲಾಡಿಸಲು ಅವರಿಗೆ ಸಚಿವ ಸ್ಥಾನ ಕಲ್ಪಿಸಬೇಕು ಎಂದು ಮನವಿ ಮಾಡಿದ್ದಾರೆ.

## ಗಾಂಜಾ ನಶೆ ಮುಕ್ತ ವಸ್ತು ನಾಶ: ಎಸ್‌ಪಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್





ಜಿಲ್ಲಾ ಪೊಲೀಸರು ಜಿಲ್ಲೆಯಾದ್ಯಂತ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಎನ್‌ಡಿಪಿಎಸ್ ಕಾಯ್ದೆ ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ ₹9.41 ಕೋಟಿ ಮೌಲ್ಯದ ನಶೆ ಮುಕ್ತ ವಸ್ತುಗಳನ್ನು ಜಿಲ್ಲಾ ಪೊಲೀಸರು ಗುರುವಾರ ನಾಶಪಡಿಸಿದೆ.

ಜಿಲ್ಲೆಯಾದ್ಯಂತ ಎನ್‌ಡಿಪಿಎಸ್ ಕಾಯ್ದೆಯಡಿ 22 ಪ್ರಕರಣ ದಾಖಲಿಸಿ 997.764 ಕೆಜಿ ಗಾಂಜಾ, 51,638 ನಶೆ ಗುಳಿಗೆ, 743 ಮಾದಕ ಸಿರಪ್‌ಗಳನ್ನು ಜಪ್ತಿ ಮಾಡಲಾಗಿತ್ತು. ಇದು ಭಾಲ್ಕಿ ತಾಲ್ಲೂಕಿನ ಧನ್ನೂರ ಸಮೀಪದ ಇನ್ವೆರೊ ಬಯೋಟೆಕ್ ಜೈವಿಕ ತ್ಯಾಜ್ಯ ವಿಲೇವಾರಿ ಘಟಕದ ಕುಲುಮೆಯಲ್ಲಿ ಹಾಕಿ ನಾಶಪಡಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ.

ಮಾದಕ ದ್ರವ್ಯವನ್ನು ಜಿಲ್ಲಾ ಡ್ರಗ್ಸ್ ವಿಲೇವಾರಿ ಸಮಿತಿಯ ನಿಯಮಗಳನ್ವಯ ನಾಶಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಡಿವೈಎಸ್ಪಿಗಳಾದ ದುದ ಪೀರ್ ಹುಸೇನಸಾಬ ಮುಲ್ಲಾ, ಭಾಲ್ಕಿ ಡಿವೈಎಸ್ಪಿ, ಸಿಪಿಐ ಹನುಮರೆಡ್ಡೆಪ್ಪಾ, ಧನ್ನೂರಾ ಪೊಲೀಸ್ ಠಾಣೆಯ ಪಿಎಸ್‌ಐ, ಪೊಲೀಸ್ ಸಿಬ್ಬಂದಿಗಳು, ಇನ್ವೆರೊ ಬಯೋಟೆಕ್ ಜೈವಿಕ ತ್ಯಾಜ್ಯ ವಿಲೇವಾರಿ ಘಟಕದ ಸಿಬ್ಬಂದಿಗಳು ಭಾಗವಹಿಸಿದರು.

## ಬೆಂಗಳೂರಿನಲ್ಲಿ ದಲಿತ ಜನಾಗ್ರಹ ಸಮಾವೇಶ: ರಮೇಶ ಡಾಕುಳಗಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್




ಭೂಮಿ, ವಸತಿ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ, ಉದ್ಯೋಗ ನೇಮಕಾತಿ ಹಾಗೂ ವಿಶೇಷ ಘಟಕ ಯೋಜನೆಗೆ ಏಕಗವಾಕ್ಷಿ ನೀತಿ ಜಾರಿಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ವತಿಯಿಂದ ಜುಲೈ 3ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ದಲಿತ ಜನಾಗ್ರಹ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಮುಖಂಡ ಹಾಗೂ ಹುಮನಾಬಾದ್ ಮಾಜಿ ತಾಲೂಕು ಪಂಚಾಯತ್ ಅಧ್ಯಕ್ಷ ರಮೇಶ ಡಾಕುಳಗಿ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶೋಷಿತ ಸಮುದಾಯಗಳ ಹಕ್ಕುಗಳ ರಕ್ಷಣೆ ಹಾಗೂ ಸಮಗ್ರ ಸಬಲೀಕರಣಕ್ಕಾಗಿ ಈ ಸಮಾವೇಶ ಆಯೋಜಿಸಲಾಗುತ್ತಿದೆ ಎಂದರು.

ದಲಿತ ಸಮುದಾಯಗಳ ಅಭಿವೃದ್ಧಿಗಾಗಿ ಜಾರಿಯಲ್ಲಿರುವ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಗಳ ಅನುದಾನವನ್ನು ಉದ್ದೇಶಿತ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಿಸಬೇಕು. ಭೂರಹಿತ ಕುಟುಂಬಗಳಿಗೆ ಭೂಮಿ ಒದಗಿಸಬೇಕು, ವಸತಿ ಹೀನರಿಗೆ ಮನೆ ಕಲ್ಪಿಸಬೇಕು ಹಾಗೂ ಸರ್ಕಾರಿ ಇಲಾಖೆಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು ಎಂದು ಅವರು ಆಗ್ರಹಿಸಿದರು.

ವಿಶೇಷ ಘಟಕ ಯೋಜನೆಯ ಅನುದಾನವನ್ನು ನಿಯಮ ಬಾಹಿರವಾಗಿ ಬೇರೆ ಉದ್ದೇಶಗಳಿಗೆ ಬಳಸುವುದನ್ನು ನಿಲ್ಲಿಸಿ, ಏಕಗವಾಕ್ಷಿ ನೀತಿ ಜಾರಿಗೊಳಿಸುವ ಮೂಲಕ ದಲಿತರ ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣಕ್ಕೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು. ಸಮಾವೇಶದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸಲಿದ್ದು, ಎಲ್ಲ ದಲಿತಪರ ಸಂಘಟನೆಗಳ ಮುಖಂಡರು ಹಾಗೂ ಸಮಾನ ಮನಸ್ಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಡಾಕುಳಗಿ ಮನವಿ ಮಾಡಿದರು.

ಹಿರಿಯ ದಲಿತ ಮುಖಂಡರಾದ ಅನಿಲಕುಮಾರ ಬೆಲ್ದಾರ ಮಾತನಾಡಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚಿನ ಶೈಕ್ಷಣಿಕ ಸೌಲಭ್ಯಗಳು, ಹಾಸ್ಟೆಲ್ ಕ್ಯಾಂಪಸ್‌ಗಳ ನಿರ್ಮಾಣ, ಭೂ ಒಡೆತನ ಯೋಜನೆ ಜಾರಿ, ಪಿ.ಟಿ.ಸಿ.ಎಲ್. ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ಸೇರಿದಂತೆ 20 ವಿವಿಧ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕೆಂದು ಬೆಲ್ದಾರ ಹೇಳಿದರು. ಬಾಬುರಾವ ಪಾಸ್ವಾನ ಮಾತನಾಡಿ, ಬಿಜೆಪಿ ಕೋಮುವಾದಿ ಹಾಗೂ ಮನುವಾದಿ ಪಕ್ಷ ಎಂದು ಅದನ್ನು ಧಿಕ್ಕರಿಸಿ ಕಾಂಗ್ರೆಸ್ ನಮ್ಮ ಹಿತ ಕಾಯುತ್ತದೆ ಎಂದು ಸ್ವತಂತ್ರ ಬಂದಾಗಿನಿಂದ ಹಿಡಿದು ಇಲ್ಲಿಯ ವರೆಗೆ ಅದನ್ನೆ ನಂಬಿ ಬಂದೆವು. ಅದಕ್ಕೆ ನಮ್ಮ ಮತ ಚಲಾಯಿಸಿ ಕಾಂಗ್ರೆಸ್ ಪಕ್ಷವನ್ನು ಬಲಿಷ್ಠವನ್ನಾಗಿ ಮಾಡಿದ್ದೇವೆ. ಪದೆ ಪದೆ ನಮ್ಮ ಸಮಾಜವನ್ನು ಅನ್ಯಾಯ ಮಾಡಲು ಹೊರಟಿರುವ ರಾಜ್ಯ ಸರ್ಕಾರಕ್ಕೆ ಜುಲೈ 3ರಂದು ಡಿ.ಎಸ್.ಎಸ್ ಹಿರಿಯ ಮುಖಂಡರಾದ ಮಾವಳ್ಳಿ ಶಂಕರ ಹಾಗೂ ಇತರೆ ಮುಖಂಡರ ನೇತೃತ್ವದಲ್ಲಿ ಬೃಹತ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ಮುಂಬರುವ ದಿನಗಳಲ್ಲಿ ನಮ್ಮ ಬೇಡಿಕೆ ಈಡೇರಿಸದಿದ್ದರೆ ಹಿಂದೆ ಎಸ್.ಎಂ.ಕೃಷ್ಣ ಅವರ ಅವಧಿಯಲ್ಲಿ ಪಾಠ ಕಲಿಸಿದಂತೆ 2028 ರಲ್ಲಿ ಅದೆ ಮತ್ತೊಮ್ಮೆ ಪುನರಾವರ್ತಿಸಲಾಗುವುದೆಂದು ಎಚ್ಚರಿಸಿದರು.

ಶೋಷಿತ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಬಸವರಾಜ ಮಾಳಗೆ, ದಲಿತ ಸಂಘರ್ಷ ಸಮಿತಿಯ ವಿವಿಧ ಪದಾಧಿಕಾರಿಗಳಾದ ರಮೇಶ ಮಂದಕನಳ್ಳಿ, ಆರ್.ಪಿ ರಾಜಾ, ಸುನಿಲ ಸಂಗಮ, ರಾಜಕುಮಾರ ಬನ್ನೇರ ಹಾಗೂ ಇತರರು ಉಪಸ್ಥಿತರಿದ್ದರು.

# ಜನಪದ ಕಲಾವಿದರೇ ಸಂಸ್ಕೃತಿಯ ನಿಜವಾದ ರಾಯಭಾರಿಗಳು

• ಮಲ್ಲಮ್ಮ ನುಡಿ ವಾರ್ತೆ ಬೀದರ್





ಜನಪದ ಕಲಾವಿದರು ಎಂದ ತಕ್ಷಣ ಮನೋಖಿನ್ನತೆಯನ್ನು ಬದಿಗಿಟ್ಟು ಆತ್ಮವಿಶ್ವಾಸದಿಂದ ಮುಂದೆ ಸಾಗಬೇಕು. ಜನಪದ ಕಲಾವಿದರೇ ಜಗತ್ತನ್ನು ಕಟ್ಟಿದವರು, ಸಂಸ್ಕೃತಿಯನ್ನು ಉಳಿಸಿದವರು ಹಾಗೂ ಜೋಗುಳ ಹಾಡುವ ಮೂಲಕ ವಿಶ್ವವನ್ನು ಬೆಳಗಿಸಿದವರು. ಆದ್ದರಿಂದ ಜನಪದ ಕಲಾವಿದರು ಶ್ರೇಷ್ಠರು ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಶಿವಪ್ರಸಾದ್ ಗೊಲ್ಲಹಳ್ಳಿ ಹೇಳಿದರು.

ಅವರು ಬುಧವಾರ ನಗರದ ನೆಹರು ಸ್ಟೇಡಿಯಂ ಸಭಾಂಗಣದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಜನಪದ ಕಲಾವಿದರ ಮಾಸಾಶನ ಅರ್ಹತಾ ಪರಿಶೀಲನಾ ಸಂದರ್ಶನ ಕಾರ್ಯಕ್ರಮಕ್ಕೆ ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಕಲಾವಿದರು ಯಾವುದೇ ಮಧ್ಯವರ್ತಿಗಳ ಮಾತಿಗೆ ಕಿವಿಗೊಡಬಾರದು. ನಿಜವಾದ ಕಲಾವಿದರ ದಾಖಲೆಗಳು ಸರಿಯಾಗಿದ್ದರೆ ಅವರಿಗೆ ಖಂಡಿತವಾಗಿಯೂ ಮಾಸಾಶನ ದೊರೆಯುತ್ತದೆ ಎಂದು ಅವರು ತಿಳಿಸಿದರು.

ಈ ಹಿಂದೆ ಮಾಸಾಶನದ ಸಂದರ್ಶನಗಳು ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿಯೇ ನಡೆಯುತ್ತಿದ್ದವು. ಆದರೆ ರಾಜ್ಯದ ವಿವಿಧ ಭಾಗಗಳಿಂದ ಬೆಂಗಳೂರಿಗೆ ಬರುವುದು ಕಲಾವಿದರಿಗೆ ಕಷ್ಟಕರವಾಗಿದ್ದ ಹಿನ್ನೆಲೆಯಲ್ಲಿ, ಕಲಾವಿದರಿರುವ ಸ್ಥಳದಲ್ಲಿಯೇ ಸಂದರ್ಶನ ನಡೆಸುವ ಉದ್ದೇಶದಿಂದ ಈ ಬಾರಿ ಜಿಲ್ಲಾ ಮಟ್ಟದಲ್ಲಿ ಸಂದರ್ಶನಗಳನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ ಮಾತನಾಡಿ, ಜನಪದ ಕಲಾವಿದರು ತಮ್ಮ ಕಲೆ, ನಾಡಿನ ನೆಲ, ಜಲ ಹಾಗೂ ಸಂಸ್ಕೃತಿಯನ್ನು ಉಳಿಸಿಕೊಂಡು ಬದುಕುತ್ತಿರುವ ಅಮೂಲ್ಯ ಸಂಪತ್ತುಗಳಾಗಿದ್ದಾರೆ. ಕಲಾವಿದರು ಯಾವುದೇ ಗೊಂದಲಗಳಿಗೆ ಒಳಗಾಗದೆ ಆತ್ಮವಿಶ್ವಾಸದಿಂದ ಸಂದರ್ಶನದಲ್ಲಿ ಭಾಗವಹಿಸಬೇಕು. ಸಂದರ್ಶನ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕವಾಗಿ ಹಾಗೂ ಸಮರ್ಪಕವಾಗಿ ನಡೆಯಲಿದ್ದು, ನಿಜವಾದ ಕಲಾವಿದರಿಗೆ ನ್ಯಾಯ ದೊರೆಯುತ್ತದೆ ಎಂದು ಹೇಳಿದರು.

ರಾಜ್ಯದ ಜನಪದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುತ್ತಿರುವ ಕಲಾವಿದರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಅಕಾಡೆಮಿ ಕಾರ್ಯನಿರ್ವಹಿಸುತ್ತಿದ್ದು, ಅರ್ಹ ಕಲಾವಿದರಿಗೆ ಯಾವುದೇ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

ಕರ್ನಾಟಕ ಜಾನಪದ ಅಕಾಡೆಮಿ ರಜಿಸ್ಟ್ರಾರ್ ಶ್ರೀಮತಿ ಎನ್. ನಮ್ರುತಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅಕಾಡೆಮಿ ಸದಸ್ಯರಾದ ರಾಯಚೂರಿನ ರಂಗಪ್ಪ ಮಾಸ್ಟರ್, ಕೊಪ್ಪಳದ ಮಹೇಬೂಬ್ ಸಾಬ್, ಕನ್ನಡ ಜಾಗೃತಿ ಸಮಿತಿ ಸದಸ್ಯ ಸುನೀಲ ಭಾವಿಕಟ್ಟಿ ಸೇರಿದಂತೆ ವಿವಿಧ ತಜ್ಞರು ಹಾಗೂ ಸಮಿತಿ ಸದಸ್ಯರು ವೇದಿಕೆಯಲ್ಲಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಸಿಂಥೆ ಸ್ವಾಗತಿಸಿ ಪ್ರಸ್ತಾವಿಕ ಮಾತನಾಡಿದರು.

ಕಲ್ಯಾಣ ಕರ್ನಾಟಕ ಭಾಗದ ಕಲಬುರ್ಗಿ, ಬೀದರ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ ಒಟ್ಟು 88 ಜಾನಪದ ಕಲಾವಿದರು ಸಂದರ್ಶನದಲ್ಲಿ ಭಾಗವಹಿಸಿ ತಮ್ಮ ಕಲಾ ಪ್ರತಿಭೆ ಹಾಗೂ ಸಾಧನೆಗಳ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ಭಾಗದ ವಿವಿಧ ಜಿಲ್ಲೆಗಳ ಜನಪದ ಕಲಾವಿದರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಅಕಾಡೇಮಿ ಸಿಬ್ಬಂದಿ ಉಪಸ್ಥಿತರಿದ್ದರು.

## ಶರಣಬಸವ ವಿವಿಯಿಂದ ಮಹಾಂತೇಶ್ವರ ಹೂಗಾರಗೆ ಪಿಎಚ್. ಡಿ.



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಶ್ರೀ ಮಹಾಂತೇಶ್ವರ ಹೂಗಾರ ಅವರು ಮಂಡಿಸಿದ "ಎ ಸ್ಟಡಿ ಆನ್ ಕ್ವಾಲಿಟಿ ಆಫ್ ಹೆಲ್ತ್‌ಕೇರ್ ಸರ್ವಿಸೆಸ್ ಪ್ರೊವೈಡೆಡ್ ಬೈ ಪ್ರೈವೇಟ್ ಹಾಸ್ಪಿಟಲ್ಸ್ ಇನ್ ಕಲಬುರಗಿ ಆಂಡ್ ಬೀದರ್ ಸಿಟೀಸ್" ಎಂಬ ಮಹಾಪ್ರಭಂದಕ್ಕೆ ಕಲಬುರಗಿಯ ಶರಣಬಸವ ವಿಶ್ವವಿದ್ಯಾಲಯದಿಂದ ಪಿಎಚ್. ಡಿ. ಪದವಿ ಪಡೆದಿದ್ದಾರೆ. ವ್ಯವಹಾರ ಅಧ್ಯಯನ ನಿಕಾಯದ ಡಾ. ಶ್ರೀನಾಥ ಎಚ್. ಶಹಾಪುರೆ ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದಾರೆ.

## ಪಟ್ಟದ್ದೇವರು ನಿರ್ಗತಿಕರ ಆಶ್ರಯದಾತರು



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಗಡಿಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ನಿರ್ಗತಿಕರು, ಬಡವರು, ದುರ್ಬಲ ವರ್ಗದವರಿಗೆ ಅನ್ನ, ಅಕ್ಷರ ಮತ್ತು ಆಶ್ರಯ ಕಲ್ಪಿಸಿ ಜೀವನದಲ್ಲಿ ಹೊಸ ಭರವಸೆ ಮೂಡಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ನಗರದ ಕುಂಬಾರ ಗುಂಡಯ್ಯ ಕಲ್ಯಾಣ ಮಂಟಪದಲ್ಲಿ ಹಿರೇಮಠ ಸಂಸ್ಥಾನದ ವತಿಯಿಂದ ಗುರುವಾರ ನಡೆದ ದಿವ್ಯಾಂಜಲಿ ಮತ್ತು ಪವನಕುಮಾರ ಅವರ ಕಲ್ಯಾಣ ಮಹೋತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪರಮ ಪೂಜ್ಯರು ಮಾಡುತ್ತಿರುವ ಸಮಾಜಪರ ಕಳಕಳಿ, ಸೇವೆ ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿದೆ. ಹೆತ್ತವರಿಗೆ ಬೇಡವಾದ ಮಕ್ಕಳನ್ನು ಕರೆತಂದು ಪಾಲನೆ, ಪೋಷಿಸಿ ಗುಣಾತ್ಮಕ ಶಿಕ್ಷಣ ಮತ್ತು ಸಂಸ್ಕಾರ ನೀಡಿ ಸಮಾಜಕ್ಕೆ ಉತ್ತಮ ನಾಗರಿಕರನ್ನಾಗಿ ಕೊಡುಗೆ ನೀಡುತ್ತಿದ್ದಾರೆ.

ಪರಮ ಪೂಜ್ಯರ ಆಶ್ರಯದಲ್ಲಿ ಬೆಳೆದಿರುವ ದಿವ್ಯಾಂಜಲಿ ರಿಯಾಲಿಟಿ ಟಿವಿ ಶೋನಲ್ಲಿ ರಾಜ್ಯದ ಮನೆ ಮಗಳಾಗಿ ಬೆಳೆದಿದ್ದಾಳೆ. ಮುಂದೆಯು ಉತ್ತಮ ಸಾಧನೆ ಕೈಗೊಂಡು ಈ ಭಾಗದ ಕೀರ್ತಿ ಪಸರಿಸಲಿ ಎಂದು ಶುಭ ಹಾರೈಸಿದರು.

ಸಾನ್ನಿಧ್ಯ ವಹಿಸಿದ್ದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ದಿವ್ಯಾಂಜಲಿಗೆ ಬಾಲ್ಯದಿಂದಲೇ ಕಲೆ, ನಾಟಕ, ಅಭಿನಯದ ಬಗ್ಗೆ ಅಭಿರುಚಿ ಇತ್ತು. ಅದನ್ನು ಗುರುತಿಸಿ ಬೆಳಕಿಗೆ ತರುವ ಪ್ರಯತ್ನ ಮಾಡಿದ್ದೇವೆ. ಆಕೆಯು ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ತಮ್ಮ ಪ್ರತಿಭೆ ತೋರುವ ಪ್ರಯತ್ನ ಮಾಡುತ್ತಿದ್ದಾಳೆ. ಮಹಾನಟಿ ಶೋ ಮೂಲಕ ಕನ್ನಡಿಗರ ಮನಸ್ಸು ಗೆದ್ದು ತಮ್ಮದೇ ಅಭಿಮಾನಿ ಬಳಗವನ್ನು ಸಂಪಾದಿಸಿದ್ದಾಳೆ ಎಂದು ಹೆಮ್ಮೆ ವ್ಯಕ್ತ ಪಡಿಸಿದರು.

ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ನೇತೃತ್ವ ವಹಿಸಿದ್ದರು.

ಮಹಾಲಿಂಗ ಸ್ವಾಮೀಜಿ, ಸಿದ್ಧಬಸವ ಸ್ವಾಮೀಜಿ, ಪ್ರಭುಲಿಂಗ ಸ್ವಾಮೀಜಿ, ಬಸವಪ್ರಿಯ ಸ್ವಾಮೀಜಿ ಸಮ್ಮುಖ ವಹಿಸಿದ್ದರು.

ಈ ಸಂದರ್ಭದಲ್ಲಿ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಹಣಮಂತರಾವ ಚವ್ಹಾಣ, ಸೋಮನಾಥಪ್ಪ ಅಷ್ಟೂರೆ, ಚನ್ನಬಸವ ಬಳತೆ, ಚಂದ್ರಕಾಂತ ಪಾಟೀಲ್, ಧನರಾಜ ಬಂಬುಳಗೆ, ಮೋಹನ ರೆಡ್ಡಿ, ಗಣಪತಿ ಬಾವುಗೆ, ಅನಿಲ ಹಾಲಕುಡೆ, ಜಯಕ್ಕ ಗಾಂವಕರ್ ಸೇರಿದಂತೆ ಹಲವರು ಇದ್ದರು. ಹಾಸ್ಯ ಕಲಾವಿದ ನವಲಿಂಗ ಪಾಟೀಲ್ ನಿರೂಪಿಸಿದರು. ದೀಪಕ ಠಮಕೆ ವಂದಿಸಿದರು.

### ಹಸೆಮಣೆ ಏರಿದ ದಿವ್ಯಾಂಜಲಿ

ಮಹಾಮಟಿ ಸೀಸನ್–2ರ ನಟಿ ದಿವ್ಯಾಂಜಲಿಗೆ ಗುರುವಾರ ಕಂಕಣ ಭಾಗ್ಯ ಲಭಿಸಿದೆ. ಮೈಸೂರು ಮೂಲದ ಯುವಕ ಪವನಕುಮಾರ ವೈ ಎಂಬುವರೊಂದಿಗೆ ವಿವಾಹ ನೆರವೇರಿದೆ. 2005ರಲ್ಲಿ ಹೆತ್ತವರಿಗೆ ಬೇಡವಾಗಿ ಚನ್ನಬಸವೇಶ್ವರ ಗುರುಕುಲ ಪ್ರವೇಶಿಸಿದ ದಿವ್ಯಾಂಜಲಿಗೆ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಆಶ್ರಯ ನೀಡಿದರು. ಬಾಲ್ಯದಿಂದಲೇ ಆಕೆಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ ನೀಡಿದರು. ಪದವಿ ವರೆಗೂ ವಿಧ್ಯಾಭ್ಯಾಸ ಮಾಡಿದ ದಿವ್ಯಾಂಜಲಿಯ ಕಲೆ, ಅಭಿನಯ ಆಸಕ್ತಿ ಗುರುತಿಸಿ ನಾಟಕ, ನಟನೆ ತರಬೇತಿಗಾಗಿ ಸಾಣೇಹಳ್ಳಿ ಮಠಕ್ಕೆ ಸೇರಿಸಿದರು.

ನಂತರ ಅಲ್ಲಿ ತರಬೇತಿ ಪಡೆದ ಈ ಯುವತಿ ಮಹಾನಟಿ ಸೀಸನ್–2ರ ಸ್ಪರ್ಧೆಗೆ ಆಯ್ಕೆಗೊಂಡು ತನ್ನ ಅಭಿನಯದ ಮೂಲಕ ಉತ್ತಮ ಪ್ರದರ್ಶನ ತೋರಿ ರಾಜ್ಯದ ಜನರ ಗಮನ ಸೆಳೆದಳು.

ಇದೀಗ ಧಾರವಾಹಿ, ಸಿನಿಮಾಗಳಲ್ಲಿ ನಟನೆಗೆ ಅವಕಾಶ ಗಿಟ್ಟಿಸಿಕೊಂಡಿರುವ ದಿವ್ಯಾಂಜಲಿ ಗುರುವಾರ ಹಸೆಮಣೆ ಏರಿದಳು. ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ಸಾನ್ನಿಧ್ಯದಲ್ಲಿ ಬಸವತತ್ವ ವಿಧಿ ವಿಧಾನದಂತೆ ಸಂಭ್ರಮದಿಂದ ಕಲ್ಯಾಣ ಮಹೋತ್ಸವ ಜರುಗಿತು. ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ವಿವಾಹ ಮಹೋತ್ಸವದಲ್ಲಿ ಪಾಲ್ಗೊಂಡು ವಧು–ವರರಿಗೆ ಶುಭ ಕೋರಿದರು. ವಿವಾಹ ಮಹೋತ್ಸವದಲ್ಲಿ ಪಾಲ್ಗೊಂಡ ಜನರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

‘ ಡಾ.ಬಸವಲಿಂಗ ಪಟ್ಟದ್ದೇವರು ತಮ್ಮ ಇಡೀ ಬದುಕು ಸಮಾಜ ಸೇವೆಗಾಗಿ ಧಾರೆಯೆರೆದಿದ್ದಾರೆ. ಅನಾಥರು, ನಿರಾಶ್ರಿತರು, ನಿರ್ಗತಿಕರ ಬಗ್ಗೆ ಪರಮ ಪೂಜ್ಯರಿಗೆ ಎಲ್ಲಿಲ್ಲದ ಕಾಳಜಿಯಿದೆ. ಪೂಜ್ಯರ ಆಶ್ರಯದಲ್ಲಿ ಬೆಳೆದ ದಿವ್ಯಾಂಜಲಿ ಉತ್ತಮ ಶಿಕ್ಷಣ, ಸಂಸ್ಕಾರ ಪಡೆದು ತನ್ನ ಅಭಿನಯದ ಮೂಲಕ ರಾಜ್ಯದ ಜನರ ಮೆಚ್ಚುಗೆ ಪಾತ್ರರಾಗಿದ್ದಾಳೆ. ಇದೀಗೆ ಆಕೆಗೆ ವಿವಾಹ ನೆರವೇರಿಸಿ ಮಾನವೀಯತೆ ಮೆರೆದಿದ್ದಾರೆ.

**– ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

# ಹಾವು ಕಚ್ಚುವಿಕೆ ತಡೆಗೆ ಆರೋಗ್ಯ ಇಲಾಖೆಯ ಎಚ್ಚರಿಕೆ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿಜೂ.25– ಹಾವು ಕಡಿತದ ಪ್ರಕರಣವನ್ನು " ಘೋಷಿತ ಕಾಯಿಲೆ: ಎಂದು ಘೋಷಿಸಲಾಗಿದೆ. ಹಾಗೂ ಹಾವು ವಿಷಪೂರಿತ ಹಾವುಗಳ ಕಚ್ಚುವಿಕೆಯಿಂದ ಸಾವಿನ ಸಂಭವ ಹೆಚ್ಚಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಶರಣಪ್ಪ ಖ್ಯಾತನಾಳ ಪ್ರಕಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ 2026ರ ಜನವರಿಯಿಂದ ಮೇ ತಿಂಗಳವರೆಗೆ ಒಟ್ಟು 89 ಹಾವು ಕಡಿತ ಪ್ರಕರಣಗಳು ದಾಖಲಾಗಿದ್ದು, 6 ಜನ ಮೃತಪಟ್ಟಿದ್ದಾರೆ ಎಂದು ಇಲಾಖೆ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಹಾವು ಕಚ್ಚುವಿಕೆ ಸಂಭವಿಸಿದಾಗ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಜನಜಾಗೃತಿ ಮೂಡಿಸಲಾಗುತ್ತಿದೆ.

ಹಾವು ಕಚ್ಚಿದ ಸಂದರ್ಭದಲ್ಲಿ ವ್ಯಕ್ತಿಯನ್ನು ಶಾಂತವಾಗಿರಿಸಿ, ಕಚ್ಚಿದ ಭಾಗವನ್ನು ಅಲುಗಾಡಿಸದೆ ತಕ್ಷಣ ಸಮೀಪದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಬೇಕು. ಕಚ್ಚಿದ ಭಾಗದಲ್ಲಿರುವ ಉಂಗುರ, ಗಡಿಯಾರ, ಬೆಲ್ಟ್ ಸೇರಿದಂತೆ ಬಿಗಿಯಾದ ವಸ್ತುಗಳನ್ನು ತೆಗೆದುಹಾಕಬೇಕು. ಗಾಯವನ್ನು ಕತ್ತರಿಸುವುದು, ವಿಷವನ್ನು ಹೀರಲು ಪ್ರಯತ್ನಿಸುವುದು, ಬಿಗಿಯಾಗಿ ಕಟ್ಟುವುದು ಅಥವಾ ನಾಟಿ ಔಷಧಿಗಳಿಗೆ ಮೊರೆ ಹೋಗುವುದು ಅಪಾಯಕಾರಿ ಎಂದು ಇಲಾಖೆ ಎಚ್ಚರಿಸಿದೆ.

ಮನೆ ಸುತ್ತಮುತ್ತ ಹಾಗೂ ಹೊಲಗಳಲ್ಲಿ ಸ್ವಚ್ಛತೆ ಕಾಪಾಡುವುದು, ಗಿಡಗಂಟಿಗಳ ಪ್ರದೇಶಗಳಲ್ಲಿ ಎಚ್ಚರಿಕೆಯಿಂದ ಸಂಚರಿಸುವುದು ಮತ್ತು ರಬ್ಬರ್ ಬೂಟುಗಳ ಬಳಕೆ ಮಾಡುವುದು ಹಾವು ಕಚ್ಚುವಿಕೆ ತಡೆಗೆ ಸಹಕಾರಿ ಎಂದು ತಿಳಿಸಲಾಗಿದೆ.




ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾವು ವಿಷ ನಿರೋಧಕ (ASV) ಔಷಧ ಉಚಿತವಾಗಿ ಲಭ್ಯವಿದ್ದು, ಹಾವು ಕಚ್ಚಿದ ತಕ್ಷಣ ಸಮಯ ವ್ಯರ್ಥ ಮಾಡದೆ ಚಿಕಿತ್ಸೆ ಪಡೆಯುವಂತೆ ಸಾರ್ವಜನಿಕರಿಗೆ ಸೂಚಿಸಲಾಗಿದೆ.

ಹಾವು ಕಡಿದಾಗ ಗಾಬರಿಯಾರಬಾರದು, ರಕ್ತ ಬಂಧಕ ಪಟ್ಟಿ, ಬಿಗಿಯಾದ ಬಟ್ಟೆಯನ್ನು ಕಟ್ಟಬಾರದು, ಗಾಯದವನ್ನು ಕೊಯ್ಯಬೇಡಿ ಹಾಗೂ ಏನನ್ನು ಹಚ್ಚಬಾರದು, ನಿಮ್ಮ ಬಾಯಿಯಿಂದ ವಿಷವನ್ನು ಹೀರಬೇಡಿ, ಗಿಡ ಗಂಟಿ ಪ್ರದೇಸಗಳು ಹಾಗೂ ಎತ್ತರದ ಹುಲ್ಲಿನ ಜಾಗದಲ್ಲಿ ಬರಿಗಾಲಿನಲ್ಲಿ ಓಡಾಡಬಾರದು. ಹಾವು ಕಚ್ಚಿದ ವ್ಯಕ್ತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ನಾಟಿ ಮದ್ದು, ಸೇರಿದಂತೆ ಇನ್ನಾವುದೇ ಅಸುರಕ್ಷಿತ ಚಿಕಿತ್ಸಾ ಪದ್ಧತಿಯನ್ನು ಅವಲಂಬಿಸಬಾರದು. ಹಾವನ್ನು ಹಿಡಿಯುವ ಅಥವಾ ಕೊಲ್ಲುವ ಪ್ರಯತ್ನ ಮಾಡದಿರಿ ಇದರಿಂದ ಅಮೂಲ್ಯೋ ಸಮಯ ವ್ಯರ್ಥವಾಗುತ್ತದೆ.

ಇದೇ ವೇಳೆ ಹಾವು ಕಚ್ಚಿದವರಿಗೆ ವೈಜ್ಞಾನಿಕ ಆಧಾರವಿಲ್ಲದ ನಾಟಿ ಚಿಕಿತ್ಸೆ ನೀಡುವವರ ವಿರುದ್ಧ ಸಂಬಂಧಿತ ಕಾನೂನುಗಳಡಿ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎಚ್ಚರಿಕೆ ನೀಡಿದೆ.




# ಡಾ.ಜಯದೇವಿತಾಯಿ ಲಿಗಾಡೆ ರಾಷ್ಟ್ರೀಯ ಪುರಸ್ಕಾರಕ್ಕೆ ಡಾ.ಗುರಮ್ಮ ಸಿದ್ದಾರೆಡ್ಡಿ ಆಯ್ಕೆ ಜೂ.30 ರಂದು ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಪ್ರದಾನ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ವಿಶ್ವಬಸವಧರ್ಮ ಟ್ರಸ್ಟ್ ಅನುಭವಮಂಟಪ ಬಸವಕಲ್ಯಾಣ ವತಿಯಿಂದ ಕೊಡಮಾಡುವ ಪ್ರಸಕ್ತ 2026ನೇ ಸಾಲಿನ ಡಾ.ಜಯದೇವಿತಾಯಿ ಲಿಗಾಡೆ ರಾಷ್ಟ್ರೀಯ ಪುರಸ್ಕಾರಕ್ಕೆ ಬೀದರ್ ನಗರದ ಹಿರಿಯ ಸಮಾಜ ಸೇವಕಿ ಡಾ.ಗುರಮ್ಮ ಸಿದ್ದಾರೆಡ್ಡಿ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪುರಸ್ಕಾರವನ್ನು ಜೂ.30ರಂದು ಸಾಯಂಕಾಲ 5 ಗಂಟೆಗೆ ಬಸವಕಲ್ಯಾಣದ ಅನುಭವ ಮಂಟಪದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಪ್ರದಾನ ಮಾಡಲಿದ್ದಾರೆ ಎಂದು ವಿಶ್ವಬಸವಧರ್ಮ ಟ್ರಸ್ಟ್ ಅನುಭವಮಂಟಪದ ಕಾರ್ಯದರ್ಶಿ ಡಾ.ಎಸ್.ಬಿ.ದುರ್ಗೆ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.



ಪ್ರಶಸ್ತಿ ಪುರಸ್ಕೃತರ ಪರಿಚಯ: ಡಾ.ಗುರಮ್ಮ ಸಿದ್ದಾರೆಡ್ಡಿ ಅವರು ಬೀದರ ಜಿಲ್ಲೆಯಲ್ಲಿ ನಡೆಯುವ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಿಕ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ, ಜಿಲ್ಲಾ ಆಯುಕ್ತರಾಗಿ ಸುದೀರ್ಘ ಕಾಲದಿಂದ ಸೇವೆ ಸಲ್ಲಿಸುತ್ತಿದ್ದಾರೆ. ರಾಷ್ಟ್ರೀಯ ಏಕತೆ, ಸಾಂಸ್ಕೃತಿಕ ಚಟುವಟಿಕೆಗಳು, ಕುಟುಂಬ ಯೋಜನೆ, ಕೈಗಾರಿಕೆ, ನ್ಯಾಯಾಂಗ ಸೇವೆ, ಅಂಗವಿಕಲರ ಪುನರ್‌ವಸತಿ ಮುಂತಾದ ಕ್ಷೇತ್ರಗಳಲ್ಲಿ ಇವರು ಸಲ್ಲಿಸುತ್ತಿರುವ ಸೇವೆ ಅಭಿನಂದನಾರ್ಹವಾಗಿದೆ. ವಯಸ್ಕರ ಶಿಕ್ಷಣ ಹಾಗೂ ಆರೋಗ್ಯ ಮತ್ತು ಗ್ರಾಮೀಣ ಪ್ರದೇಶ ಅಭಿವೃದ್ಧಿಗಾಗಿ ವಿಶೇಷ ಕಾರ್ಯ ಮಾಡುತ್ತಿದ್ದಾರೆ. ಅನೇಕ ಸಂಘಸಂಸ್ಥೆಗಳನ್ನು ಸ್ಥಾಪಿಸಿ, ನಿರಂತರ ಸಮಾಜಸೇವೆಯಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ. ಗುರುಲಿಂಗ–ಜಂಗಮ ಪ್ರೇಮಿಗಳಾದ ಇವರು ದಾಸೋಹಭಾವವುಳ್ಳವರಾಗಿದ್ದಾರೆ. ಇವರ ಸಮಗ್ರ ಸೇವೆಯನ್ನು ಗುರುತಿಸಿ, ಪ್ರಸಕ್ತ ಸಾಲಿನ ಡಾ. ಜಯದೇವಿತಾಯಿ ಲಿಗಾಡೆ ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

# ಬಡ್ಡಿ ದಂಧೆ ಲಾಟರಿ,ಗಾಂಜಾ,ಅಕ್ರಮ ಮದ್ಯ ವ್ಯಾಪಾರ ವಿರುದ್ಧ ಕ್ರಮ:ಎಸ್.ಪಿ ಎಚ್ಚರಿಕೆ

• ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ

ಬಡ್ಡಿ ದಂಧೆ ಲಾಟರಿ ಹಾಗೂ ಗಾಂಜಾ ವ್ಯಾಪಾರ ಅಕ್ರಮ ಮದ್ಯ ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಎಚ್ಚರಿಕೆ ನೀಡಿದರು.

ಪಟ್ಟಣದಲ್ಲಿರುವ ಡಿ ದೇವರಾಜ ಅರಸು ಭವನದಲ್ಲಿ ಬುಧವಾರ ಏರ್ಪಡಿಸಿದ್ದ ಸಾರ್ವಜನಿಕರೊಂದಿಗೆ ಕುಂದು ಕೊರತೆ ಕುರಿತು ದೂರುಗಳು ಆಹ್ವಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಬಕಾರಿ ಇಲಾಖೆ ಮತ್ತು ಕೆ ಎಸ್ ಆರ್ ಟಿ ಸಿ ಬಸ್ ಗಳ ನಿಲುಗಡೆ ಬಗ್ಗೆ ಹಾಗೂ ಮೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹಲವಾರು ಸಮಸ್ಯೆಗಳು ಕೇಳಿ ಬಂದಿದ್ದು ಅವುಗಳನ್ನು ಕೂಡಲೇ ಸರಿಪಡಿಸುವುದಾಗಿ ಬರವಸೆ ನೀಡಿದರು.

ಕೆ ಸಿ ಶಶಿ ಶೇಖರ್ ಎಂಬ ರೈತ ತಾಲೂಕಿನ ಬೆಟ್ಟದಪುರ ಹೋಬಳಿ ಕೋಣಸೂರು ಗ್ರಾಮದ ಸ. ನಂ 71/2 ರಲ್ಲಿ 2 ಎಕರೆ 71/1ರಲ್ಲಿ 1 ಎಕರೆ 71/4 ರಲ್ಲಿ 2 ಎಕರೆ 5 ಗುಂಟೆ ಮತ್ತು 73/1 ರಲ್ಲಿ 15 ಗುಂಟೆ ಒಟ್ಟು 3 ಎಕರೆ ಜಮೀನನ್ನು ಕಳೆದ 2004ನೇ ಸಾಲಿನಲ್ಲಿ ಕೆ ಆರ್ ನಗರ ತಾಲೂಕಿನ ಮಾಯಗೌಡನಹಳ್ಳಿ ಗ್ರಾಮದ ಶಿವರಾಜ ಶೆಟ್ಟಿ ಗೆ 2 ಲಕ್ಷ ರೂಗಳಿಗೆ ಮತ್ತು ಇದೇ ತಾಲೂಕಿನ ಚರ್ ಪುರ ಗ್ರಾಮದ ಸ್ವಾಮಿ ನಾಯಕ ಎಂಬುವರಿಗೆ 2006 ನೇ ಸಾಲಿನಲ್ಲಿ ಸ ನಂ 71/4 ರಲ್ಲಿ 2 ಎಕರೆ 5 ಗಂಟೆ ಸ ನಂ 73/1ರಲ್ಲಿ 15 ಗುಂಟೆಯನ್ನು 1,70, ಲಕ್ಷ ರೂಗಳಿಗೆ ಹಣಕಾಸಿನ ಲ್ಯಾವಧಿವಿ ವ್ಯವಹಾರದಲ್ಲಿ ಬಡ್ಡಿ ಮೇಲಿನ ಸಾಲಕ್ಕಾಗಿ ತಾವು ಭೋಗ್ಯ ಮಾಡಲಾಗಿತ್ತು.

ಆದರೆ ಇತ್ತೀಚಿನ ದಿನಗಳಲ್ಲಿ ವಾಪಸ್ ದಾಖಲೆ ಕೊಡದೆ ಮೈಮುಲ್ ಮಾಜಿ ಅಧ್ಯಕ್ಷರಾದ ಪಿಎಂ ಪ್ರಸನ್ನ ರವರಿಗೆ 1, ಕೋಟಿ 33 ಲಕ್ಷ ರೂ ಗಳಿಗೆ ಶುದ್ಧಕ್ರಾಯದ ಅಗ್ರಿಮೆಂಟ್ ಆಗಿರುವ ಬಗ್ಗೆ ಮಾಹಿತಿ ತಿಳಿದು ನಾವು ಗ್ರಾಮಸ್ಥರೊಂದಿಗೆ ಸತ್ಯವನ್ನು ಹಂಚಿಕೊಂಡ ಪರಿಣಾಮ ಪ್ರಸನ್ನ ರವರ ಈ ವ್ಯವಹಾರವನ್ನು ತಿರಸ್ಕರಿಸಿದರು.



ಆದರೆ ಇದೇ ತಿಂಗಳು 11ನೇ ತಾರೀಖಿನಂದು ದಲಿತ ಸಂಘಟನೆಯ ಮುಖಂಡರು ಎಂದು ಹೇಳಿಕೊಂಡು ಇನ್ನೊಬ್ಬರ ಪರವಾಗಿ ಜಮಿನಿಗೆ ಅಕ್ರಮ ಪ್ರವೇಶ ಮಾಡಿ ಬೆಳೆ ಬಾವಿ ತೋಟ ನಾಶ ಮಾಡಿ ಕುಟುಂಬಸ್ಥರ ಮೇಲೆ ಹಲ್ಲೆ ನಡೆಸಲಾಗಿದೆ ಆದರೂ ಸಹ ಅವರ ವಿರುದ್ಧ ಬೆಟ್ಟದಪುರ ಪೊಲೀಸ್ ಠಾಣೆಯ ದೂರು ನೀಡಿದರು ಸಹ ಯಾವುದೇ ಕ್ರಮ ಕೈಗೊಂಡಿಲ್ಲ ಕ್ರಮ ಕೈಗೊಳ್ಳಬೇಕು ಎಂದು ವರಿಷ್ಠಾಧಿಕಾರಿಗೆ ನೀಡಿದ ದೂರಿನಲ್ಲಿ ಮನವಿ ಮಾಡಿಕೊಂಡರು.

ದಲಿತ ಮುಖಂಡರಾದ ಕೆಬಿ ಮೂರ್ತಿ ತಾಲೂಕಿನಲ್ಲಿ ವಿವಿಧ ದಲಿತ ಸಂಘಟನೆಗಳ ಹೆಸರು ಹೇಳಿಕೊಂಡು ಸಂಘ ವಿರೋಧಿ ಚಟುವಟಿಕೆ ಯೊಂದಿಗೆ ದೀನ ದಲಿತರ ಮೇಲೆ ಒಂದಲ್ಲ ಒಂದು ರೀತಿ ದಬ್ಬಾಳಿಕೆ ಮಾಡುತ್ತಿರುವುದಲ್ಲದೆ ದಲಿತ ಮುಖಂಡರಿಂದಲೇ ಬಡ್ಡಿ ದಂಧೆ ನಡೆಸಿ ಅಕ್ರಮವಾಗಿ ಜಮೀನು ಬರೆಸಿಕೊಂಡು ಬಡ ಕುಟುಂಬಗಳನ್ನು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಬೀದಿಪಾಲು ಮಾಡಲಾಗುತ್ತಿದೆ.

ಅಂತವರುಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿಕೊಂಡರು.

ಭೂ ರಸ್ತೆ ಸಮಸ್ಯೆ ಆಕ್ಸಿಡೆಂಟ್ ವಿಷಯಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಈ ಸಂದರ್ಭದಲ್ಲಿ ಹುಣಸೂರು ಉಪ ವಿಭಾಗದ ಪೊಲೀಸ್ ಉಪ ಅಧೀಕ್ಷಕರಾದ ರವಿ ಪೊಲೀಸ್ ಸರ್ಕಲ್ ಇನ್ಸ್ಪೆಕ್ಟರ್ ಗಳಾದ ದೀಪಕ್ ಮತ್ತು ಗೋವಿಂದರಾಜು ಸಬ್ ಇನ್ಸ್ಪೆಕ್ಟರ್ಗಳಾದ ರವಿಕುಮಾರ್ ಮತ್ತು ಅಜಯ್ ಕುಮಾರ್ ಹಾಗೂ ಕೆ ಎಸ್ ಆರ್ ಟಿ ಸಿ ವ್ಯವಸ್ಥಾಪಕರು. ಅಬಕಾರಿ ಇಲಾಖೆಯ ಅಧಿಕಾರಿಗಳು.ಸಂಘ ಸಂಸ್ಥೆಯ ಮುಖಂಡರುಗಳು ಜನಪ್ರತಿನಿಧಿಗಳು ಸಾರ್ವಜನಿಕರು ಹಾಜರಿದ್ದರು.

# ಒಳಬಳ್ಳಾರಿ ರಸ್ತೆಯ ತೆರೆದ ಒಳಚರಂಡಿ ಗುಂಡಿ:ಮೈಮರೆತರೆ ಜೀವಕ್ಕೇ ಸಂಚಕಾರ



• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಜೂ.25.ನಗರದ ಪಿಡಬ್ಲ್ಯೂಡಿ ಕ್ಯಾಂಪ್ ಹತ್ತಿರವಿರುವ ಒಳಬಳ್ಳಾರಿ ರಸ್ತೆಯ ವಾರ್ಡ್ ನಂಬರ್ 30ರಲ್ಲಿ ಒಳಚರಂಡಿ ಮ್ಯಾನ್ ಹೋಲ್‌ನ ಮುಚ್ಚಳ ಕಿತ್ತುಹೋಗಿದ್ದು, ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ಮರಣಕೂಪವಾಗಿ ಪರಿಣಮಿಸಿದೆ. ಈ ಅಪಾಯಕಾರಿ ಗುಂಡಿ ಕಾಣದೆ ಬೈಕ್ ಸವಾರರೊಬ್ಬರು ಬಿದ್ದು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುವ ಘಟನೆ ನಡೆದಿದೆ.

ಈ ಕುರಿತು ಸ್ಥಳೀಯರು ಮತ್ತು ಜೆಡಿಎಸ್ ಯುವ ಮುಖಂಡ ವೀರ ಬಾಬು ಅವರು ನಗರಸಭೆಯ ಅಧಿಕಾರಿಗಳಿಗೆ ಹಲವು ಬಾರಿ ದೂರವಾಣಿ ಕರೆ ಮಾಡಿ ದೂರು ನೀಡಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸುತ್ತಿಲ್ಲ ಎಂದು ಆರೋಪಿಸಲಾಗಿದೆ.

ಈ ಮಾರ್ಗವು ಅತ್ಯಂತ ಜನನಿಬಿಡವಾಗಿದ್ದು, ಸುತ್ತಮುತ್ತ ಶಾಲೆಗಳು ಇರುವುದರಿಂದ ಪ್ರತಿದಿನ ನೂರಾರು ವಿದ್ಯಾರ್ಥಿಗಳು, ಹಳ್ಳಿಯ ಜನರು ಮತ್ತು ವಾಹನ ಸವಾರರು ಇದೇ ರಸ್ತೆಯಲ್ಲಿ ಸಂಚರಿಸುತ್ತಾರೆ. ರಸ್ತೆಯ ಮಧ್ಯೆಯೇ ತೆರೆದಿರುವ ಈ ಡ್ರೈನೇಜ್ ಹೋಲ್‌ನಿಂದಾಗಿ ಇನ್ನೊಂದು ದೊಡ್ಡ ಅವಘಡ ಸಂಭವಿಸುವ ಆತಂಕ ಎದುರಾಗಿದೆ.

ನಗರಸಭೆಯ ಬೇಜವಾಬ್ದಾರಿಯಿಂದಾಗಿ ಈಗಾಗಲೇ ಒಬ್ಬರು ಬಿದ್ದು ಗಾಯಗೊಂಡಿದ್ದಾರೆ. ಇನ್ನು ಮುಂದೆ ಯಾವುದೇ ದೊಡ್ಡ ಅನಾಹುತ ಅಥವಾ ಪ್ರಾಣಹಾನಿ ಸಂಭವಿಸಿದಲ್ಲಿ, ಅದಕ್ಕೆ ಸ್ಥಳೀಯ ಆಡಳಿತ ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೇ ನೇರ ಹೊಣೆಯಾಗುತ್ತಾರೆ ಎಂದು ಎಚ್ಚರಿಸಿದ್ದಾರೆ.

ತಕ್ಷಣವೇ ನಗರಸಭೆ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು, ದುರಂತ ಸಂಭವಿಸುವ ಮುನ್ನವೇ ತೆರೆದಿರುವ ಡ್ರೈನೇಜ್ ಹೋಲ್ ಅನ್ನು ದುರಸ್ತಿಗೊಳಿಸಿ, ಹೊಸ ಮುಚ್ಚಳವನ್ನು ಅಳವಡಿಸಬೇಕೆಂದು ಒತ್ತಾಯಿಸಿದ್ದಾರೆ.

## ಜೂ. 27 ರಂದು ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜೂ.25–ಕಲಬುರಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವುಗಳ ಸಂಯುಕ್ತಾಶ್ರಯದಲ್ಲಿ ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ ಆಚರಣೆ ಕಾರ್ಯಕ್ರಮವನ್ನು ಜೂನ್ 27 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿ ನಗರದ ಡಾ. ಎಸ್. ಎಂ. ಪಂಡಿತ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಮಾನ್ಯ ಗೃಹ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಇಲಾಖೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಉಪಸ್ಥಿತರಿರುವರು.. ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ಆರ್. ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಡಾ. ಅವಿನಾಶ ಜಾಧವ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಸುನೀಲ್ ವಲ್ಲ್ಯಾಪುರೆ, ಡಾ. ತಳವಾರ ಸಾಬಣ್ಣ, ಜಗದೇವ ಗುತ್ತೇದಾರ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಬ್ದುಲ್ ರಶೀದ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರಪಾಲಿಕೆ ಮಹಾಪೌರ ವರ್ಷಾ ರಾಜೀವ ಜಾನೆ ಅವರು ಅತಿಥಿಗಳಾಗಿ ಪಾಲ್ಗೊಳ್ಳುವರು. ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಕಲಬುರಗಿ ಈಶಾನ್ಯ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ ಶಾಂತನು ಸಿನ್ಹಾ, ಕಲಬುರಗಿ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಶಿಧರ್ ಕುರೇರ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕಲಬುರಗಿ ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ, ರಾಹುಲ್ ಶರಣಪ್ಪ ಸಂಕನೂರ, ಕಲಬುರಗಿ ಕುಡು ಒಕ್ಕಲಿಗ ಅಭಿವೃದ್ಧಿ ಸೇವಾ ಸಂಘ, ಜಿಲ್ಲಾ ಅಧ್ಯಕ್ಷರಾದ ಶಿವಯೋಗಪ್ಪ ಬಿ. ಚಿತ್ತಾಪುರ ಗುಂಡಗುರ್ತಿ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

# ಮಕ್ಕಳೊಂದಿಗೆ ಮಗುವಾದ ಶಾಸಕ ಶರಣಗೌಡ ಕಂದಕೂರು



• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್**

ಜೂ 25: ಪಟ್ಟಣದ ನ್ಯೂ ಸ್ಮಾರ್ಟ್ ಕಿಡ್ಸ್ ಶಾಲೆಯಲ್ಲಿ 2026–27ನೇ ಶೈಕ್ಷಣಿಕ ವರ್ಷದ ಅಂಗವಾಗಿ ಆಯೋಜಿಸಿದ್ದ ಪಠ್ಯಕ್ರಮ ದಿನಾಚರಣೆ ಹಾಗೂ ಪುಸ್ತಕ ವಿತರಣಾ ಕಾರ್ಯಕ್ರಮ ಗುರುವಾರ ಸಂಭ್ರಮ ಹಾಗೂ ಸಡಗರದಿಂದ ನಡೆಯಿತು.

ಕಾರ್ಯಕ್ರಮವು ಪೂಜ್ಯ ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಮಹಾಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು ಶಾಸಕ ಶರಣಗೌಡ ಕಂದಕೂರು ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಶರಣಗೌಡ ಕಂದಕೂರು ಅವರು, "ಮಕ್ಕಳೊಂದಿಗೆ ಸಮಯ ಕಳೆಯುವುದು ಅತ್ಯಂತ ಸಂತಸದ ವಿಷಯ. ಅವರ ಮುಗ್ಧತೆ, ಉತ್ಸಾಹ ಮತ್ತು ಕಲಿಕೆಯ ಆಸಕ್ತಿ ನಮ್ಮನ್ನೂ ಮಕ್ಕಳನ್ನಾಗಿಸುತ್ತದೆ. ಇಂತಹ ಕ್ಷಣಗಳು ಜೀವನದಲ್ಲಿ ವಿಶೇಷ ಅನುಭವ ನೀಡುತ್ತವೆ. ಸ್ಮಾರ್ಟ್ ಕಿಡ್ ಸಂಸ್ಥೆ ಯಾವುದೇ ಲಾಭದ ಅಪೇಕ್ಷೆ ಇಲ್ಲದೇ ಉತ್ತಮ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ನೀಡುತ್ತಿದೆ, ತಿಂಗಳಿಗೆ 25 ದಿನ ಆಟ ಪಾಠಗಳೊಂದಿಗೆ ಕಲಿಕಾ ಚಟುವಟಿಕೆ ನೀಡುತ್ತಿರುವದು ಬೇರೆ ಶಾಲೆಗಳಿಗೆ ಮಾದರಿ ಎಂದು ಸಂಸ್ಥೆಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಪೂಜ್ಯಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಮಹಾಸ್ವಾಮೀಜಿಗಳು ಆಶೀರ್ವಚನ ನೀಡಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು. ಪಟ್ಟಣದಲ್ಲಿ ತಮ್ಮ ಮನೆಯ ಮಹಡಿಯನ್ನೇ ಜ್ಞಾನ ದೇಗುಲವನ್ನಾಗಿ ಪರಿವರ್ತನೆ ಮಾಡಿರುವ ಅನಂತರೆಡ್ಡಿಯವರ ಕುಟುಂಬಕ್ಕೆ ಒಳಿತಾಗಲಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕ ರವೀಂದ್ರ ಚವ್ಹಾಣ, ಸಮಾಜದ ಮುಖಂಡರಾದ ನಾಗಭೂಷಣ ಅವಂಟಿ, ನರಸಾರೆಡ್ಡಿ ಪಾಟೀಲ್, ಪರಮಾರೆಡ್ಡಿ ದೊಡ್ಡ, ಸುಭಾಷ್ ಕಟಕಟಿ, ಕ್ರಾಂತಿ ರೆಡ್ಡಿ, ವೈಷ್ಣವಿ, ಸೇರಿದಂತೆ ಗಣ್ಯರು ಶಾಲಾ ಸಿಬ್ಬಂದಿ, ಮಕ್ಕಳು ಉಪಸ್ಥಿತರಿದ್ದರು.

# ಭೋವಿ ಜನಾಂಗದ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಸಕಾಲಕ್ಕೆ ತಲುಪಿಸಿ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**



ಜೂ:25: ಭೋವಿ ಜನಾಂಗದ ಅನುಕೂಲಕ್ಕಾಗಿ ಇರುವ ಸರ್ಕಾರದ ಯೋಜನೆಗಳ ಲಾಭ ಸಕಾಲಕ್ಕೆ ದೊರಕಿಸುವಂತೆ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ರಾಮಪ್ಪ .ಎಂ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ಭೋವಿ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಅತ್ಯಂತ ಕಡು ಬಡ, ಕಷ್ಟದಲ್ಲಿ ದುಡಿಯುವ ಸಮಾಜ ಇದಾಗಿದೆ. ನೇರ ಸಾಲ, ಗಂಗಾ ಕಲ್ಯಾಣ, ಉದ್ಯಮಶೀಲತಾ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆಗಳಡಿಯ ಸೌಲಭ್ಯ ಸಕಾಲಕ್ಕೆ ತಲುಪಿಸುವ ಕಾರ್ಯ ಸಂಬಂಧಿಸಿದ ಅಧಿಕಾರಿಗಳು ಮಾಡುವಂತೆ ಅವರು ಸೂಚನೆ ನೀಡಿದರು.

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಹಾಗೂ ನಿಗಮದ ಎಂಟು ಗ್ಯಾರಂಟಿ ಯೋಜನೆಗಳ ಲಾಭ ಅರ್ಹ ಫಲಾನುಭವಿಗಳಿಗೆ ತಲುಪಿಸಲಾಗುತ್ತಿದೆಯೇ ಎಂಬುದರ ಬಗ್ಗೆ ಪರಿಶೀಲನೆ ನಡೆಸುತ್ತಿರುವುದಾಗಿ ತಿಳಿಸಿದ ಅವರು ,ಬಟ್ಟೆ,ಚಪ್ಪಲಿ ಇಲ್ಲದೆ ಕುಲ ಕಸುಬುಗಳ ಮೂಲಕ ಕಷ್ಟದ ಜೀವನ ನಡೆಸುತ್ತಿರುವ ಈ ಸಮಾಜಕ್ಕೆ ಅವರ ಆರ್ಥಿಕ ಸಬಲೀಕರಣಗೊಳಿಸುವ ಯೋಜನೆಗಳ ಲಾಭ ದೊರಕಿಸಲು ಪ್ರಯತ್ನಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಕಲ್ಲು ಒಡೆಯುವ,ಮಣ್ಣು ಹೊರುವ ಸಮಾಜ ಇದಾಗಿದೆ.ಕುಲ ಕಸಬು ಮಾಡುವ ಸಂದರ್ಭದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳಿಂದ ತೊಂದರೆಯಾಗದಂತೆ ನೋಡಿಕೊಳ್ಳಬೇಕು.ಪೋಲಿಸ್ ಇಲಾಖೆಯಿಂದಲೂ ನಿಗಾ ಇಡುವಂತೆ ತಿಳಿಸಿದ ಅವರು ಸಿಬಿಲ್ ಸ್ಕೋರ್ ನೋಡದೆ,ಶುರಿಟಿ ಪಡೆಯದೆ ಸಾಲ ಸೌಲಭ್ಯ ದೊರಕಿಸಬೇಕು. ಲೀಡ್ ಬ್ಯಾಂಕ್ ಅಧಿಕಾರಿಗಳು ಈ ಕುರಿತು ಗಮನ ನೀಡಬೇಕು ಎಂದು ತಿಳಿಸಿದರು.

ಭೋವಿ ಸಮಾಜಕ್ಕೆ ಟ್ರಾಕ್ಟರ್ ಟ್ರೈಲರ್, ಗೂಡ್ಸ್ ವಾಹನ, ಸೆಂಟ್ರಿಂಗ್ ಸಲಕರಣೆಗಳು ಈ ವರ್ಷದಿಂದ ನಿಗಮದಿಂದ ನೀಡಲಾಗುತ್ತಿದೆ. ಹೈನುಗಾರಿಕೆ,ಪಶು ಸಂಗೋಪನೆ, ಕೋಳಿ ಸಾಕಾಣಿಕೆಗೆ ಒತ್ತು ನೀಡಲಾಗುತ್ತಿದೆ. ಭೋವಿ ಸಮಾಜವೂ ಕೂಡ ಆರ್ಥಿಕವಾಗಿ ಸಬಲರಾಗಲು ಮುಂದೆ ಬರಬೇಕು ಎಂದು ಹೇಳಿದರು.

ಭೋವಿ ಜನಾಂಗದ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳು ದೊರೆಯಬೇಕು.ಜಾತಿ ಪ್ರಮಾಣ ಪತ್ರ ದುರುಪಯೋಗಪಡಿಸಿಕೊಂಡು, ಇತರರು ಇದರ ಲಾಭ ಪಡೆಯದಂತೆ ಎಚ್ಚರಿಕೆ ವಹಿಸಬೇಕು.

ಸ್ಥಳ ಮಹಜರು,ಅಧಿಕೃತ ದಾಖಲಾತಿ, ಆಧಾರದ ಮೇಲೆ ಜಾತಿ ಪ್ರಮಾಣ ಪತ್ರ ನೀಡಬೇಕು. ವಿಎ ಗಳು ತಾಲೂಕಾ ದಂಡಾಧಿಕಾರಿಗಳು ಈ ಕುರಿತು ಅವಶ್ಯಕ ಗಮನ ನೀಡಬೇಕು. ಆರ್ಥಿಕವಾಗಿ ಸಬಲರನ್ನಾಗಿಸಲು ಹೆಚ್ಚಿನ ಮಹಿಳಾ ಸಂಘಗಳನ್ನು ರಚಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಅದರಂತೆ ಆರ್ಥಿಕವಾಗಿ ಮುಂಚೂಣಿಗೆ ಬರಲು ಈ ಸಮಾಜದ ಮಕ್ಕಳು ವಿದ್ಯಾವಂತರಾಗಬೇಕು. ಪಾಲಕರು ಕೂಡ ಶಾಶ್ವತ ಪರಿಹಾರಕ್ಕಾಗಿ ಮಕ್ಕಳನ್ನು ಸುಶಿಕ್ಷಿತರನ್ನಾಗಿಸಬೇಕು. ವಿದ್ಯಾರ್ಥಿಗಳು ಶಾಲೆಗಳಿಂದ ದೂರ ಉಳಿಯದಂತೆ ನೋಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಭೋವಿ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರುವ ಯೋಜನೆಗಳಡಿ ಸೌಲಭ್ಯ ಕಲ್ಪಿಸಲು ಮಧ್ಯವರ್ತಿಗಳ ಹಾವಳಿ ತಪ್ಪಿಸಬೇಕು.ಈ ಕುರಿತು ಸಾಕ್ಷ್ಯಾಧಾರ ಸಮೇತ ದೂರು ನೀಡಿದಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ ಅರ್ಹ ಫಲಾನುಭವಿಗಳಿಗೆ ನೀಡಬಹುದಾದ ಸೌಲಭ್ಯಗಳ ಕುರಿತ ಬಾಕಿ ಇರುವ ಅರ್ಜಿಗಳನ್ನು ಜುಲೈ 30 ರೊಳಗೆ ಪರಿಹರಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಸಭೆಯಲ್ಲಿ ನಿಗಮದ ಅಧ್ಯಕ್ಷರು ಭೋವಿ ಸಮಾಜದವರೊಂದಿಗೆ ಸಂವಾದ ನಡೆಸಿ, ಅಹವಾಲುಗಳನ್ನು ಆಲಿಸಿದರು. ಜಿಲ್ಲಾಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ನಿಗಮದ ಜನರಲ್ ಮ್ಯಾನೇಜರ್ ಶಿವಸ್ವಾಮಿ,ಸಮಾಜದ ಹಿರಿಯ ಮುಖಂಡ ರವಿ ಪೂಜಾರಿ,ರಾಜು ಗುತ್ತೇದಾರ್, ಉಪಸ್ಥಿತರಿದ್ದರು. ನಿಗಮದ ಜಿಲ್ಲಾ ವ್ಯವಸ್ಥಾಪಕರು ಶ್ರೀಮತಿ ಸರೋಜ ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

# ಬಸ್ ಪಾಸ್ ಶುಲ್ಕ ವಾಪಸ್‌ಗಾಗಿ ಸೇವಾಸಿಂಧು ಬಳಸಿ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಜೂ:25: ಹಣ ಪಾವತಿಸಿ ಬಸ್ ಪಾಸ್ ಪಡೆದಿರುವ ವಿದ್ಯಾರ್ಥಿಗಳು, ಪಾಸ್‌ನ ಹಣ ಮರುಪಾವತಿಗೆ ಕಚೇರಿಗೆ ಸರ್ಕಾರದ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಕೆ.ಎಸ್.ಆರ್.ಟಿ.ಸಿ , ಯಾದಗಿರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀ ಜಿ.ಬಿ. ಮಂಜುನಾಥ ಅವರು ತಿಳಿಸಿದ್ದಾರೆ.

sevasindhuservices.karnataka.gov.in/buspassservices/ ಸೇವಾಸಿಂಧು ಪೋರ್ಟಲ್ ಐಡಿಯಲ್ಲಿ ಮೊಬೈಲ್ ಸಂಖ್ಯೆ ನಮೂದಿಸಬೇಕು. ಆಧಾರ್ ಆಧಾರಿತ ಇ–ಕೆವೈಸಿ ಪೂರ್ಣಗೊಳಿಸಬೇಕು. ವಿದ್ಯಾರ್ಥಿಗಳು ತಮ್ಮ ಅಥವಾ ಪೋಷಕರ ಬ್ಯಾಂಕ್ ಖಾತೆ ವಿವರಗಳನ್ನು ನಮೂದಿಸಬೇಕು. ಅರ್ಜಿ ಸಲ್ಲಿಸಿದ 7 ದಿನಗಳ ಒಳಗೆ ಮೊತ್ತ ಮರು ಪಾವತಿಯಾಗಲಿದೆ. ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರದಲ್ಲಿ ಆಯೋಜಿಸಲಾದ ಸೇವಾ ಸಿಂಧು ಸೇವೆಗಳು ವಿದ್ಯುತ್ ಮೂಲಸೌಕರ್ಯ ನಿರ್ವಹಣಾ ಕಾರ್ಯಕ್ಕಾಗಿ ದಿನಾಂಕ 25.06.2026 ರ 08.00 ಕಿಓ ರಿಂದ 26.06.2026 10.00 ಕಿಓ ವರೆಗೆ, ಈ ನಿರ್ವಹಣಾ ವಿಂಡೋದಲ್ಲಿ ಎಲ್ಲಾ ಸೇವಾ ಸಿಂಧು ಸಂಬಂಧಿತ ಸೇವೆಗಳು ಲಭ್ಯವಿರುವುದಿಲ್ಲ. ಕಾರಣ ಶಾಲಾ ಕಾಲೇಜು ವಿದ್ಯಾರ್ಥಿಗಳು /ಸಾರ್ವಜನಿಕರು ಸಹಕರಿಸಲು ವಿಭಾಗೀಯ ನಿಯಂತ್ರಣಾಧಿಕಾರಿಗಳು, ಯಾದಗಿರಿ, ವಿಭಾಗ ಇವರು ಪ್ರಕಟಣೆ ಮೂಲಕ ಕೋರಿದ್ದಾರೆ.

# 5 ವರ್ಷದೊಳಗಿನ 1,66,928 ಮಕ್ಕಳಿಗೆ ಬೂತ್‌ಗಳು, ಮನೆಗಳಿಗೆ ತೆರಳಿ ಲಸಿಕೆ ಹಾಕುವ ಅಭಿಯಾನ: ಮಹೇಶ್

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**



ಜೂ:25:ಪೋಲಿಯೋ ಮುಕ್ತ ಜಿಲ್ಲೆಯನ್ನಾಗಿಸಲು ಪಣತೊಟ್ಟಿರುವ ಆರೋಗ್ಯ ಇಲಾಖೆ, ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಎರಡು ಹಂತದಲ್ಲಿ ನಾಲ್ಕು ದಿನಗಳ ಕಾಲ 5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ ಬಿರಾದಾರ ಹೇಳಿದರು.

ಗುರುವಾರ ಡಿಎಚ್ ಒ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಜು.28ರಂದು ಜಿಲ್ಲೆಯ ಎಲ್ಲಡೆ ರಚಿಸಲಾದ 665 ಕೇಂದ್ರಗಳಲ್ಲಿ ಮಕ್ಕಳಿಗೆ ಲಸಿಕೆ ಹಾಕಲಾಗುವುದು, ನಂತರ ಜು.29ರಿಂದ ಜುಲೈ1 ರವರೆಗೂ ಜಿಲ್ಲೆಯ ಮನೆ,ಮನೆಗೂ ತೆರಳಿ ಐದು ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕಲಾಗುವುದೆಂದರು.

ಜಿಲ್ಲೆಯ ಒಟ್ಟು 2.47,507 ಮನೆಗಳಲ್ಲಿ 13,75,679 ಲಕ್ಷ ಜನಸಂಖ್ಯೆಯಿದ್ದು, ಇದರಲ್ಲಿ 1,66,928 ಐದು ವರ್ಷದೊಳಗಿನ ಮಕ್ಕಳು ಇದ್ದಾರೆ. ಮನೆ ಭೇಟಿ ತಂಡ, ಟ್ರಾಂಜಿಟ ತಂಡ ಮತ್ತು ಸಂಚಾರಿ ತಂಡ ಹೀಗೆ ವಿವಿಧ ರೀತಿಯ ಮೂರು ತಂಡಗಳನ್ನು ರಚಿಸಲಾಗಿದ್ದು, ಒಟ್ಟು 704 ಸಿಬ್ಬಂದಿ ಈ ಕಾರ್ಯಕ್ರಮದಲ್ಲಿ ಕೆಲಸ ಮಾಡಲಿದ್ದಾರೆಂದರು. ಇವರ ಜತೆಯಲ್ಲಿ 134 ಮೇಲ್ವಿಚಾರಕು ಮತ್ತು 1391 ಜನರು ಲಸಿಕೆ ಹಾಕುವವರು ಇದ್ದು ಯಾವುದೇ ಕಾರಣಕ್ಕೂ ಒಂದೂ ಮಗು ಕೂಡಾ ಇದರಿಂದ ವಂಚಿತರಾಗದಂತೆಯೇ ನೋಡಿಕೊಂಡು ಈ ಕಾರ್ಯಕ್ರಮ ಯಶಸ್ವಿ ಮಾಡಲಾಗುವುದೆಂದು ಡಾ.ಬಿರಾದಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿದ್ದ ಆರ್‌ಸಿಎಚ್ ಅಧಿಕಾರಿ ಡಾ.ಮಲ್ಲಪ್ಪ ನಾಯ್ಕಲ್ ಅವರು ಮಾತನಾಡಿ, ಕಳೆದ ಹದಿನಾಲ್ಕು ವರ್ಷಗಳಿಂದ ಭಾರತ ಪೋಲಿಯೋ ಮುಕ್ತದೇಶವನ್ನಾಗಿಸಿದೆ. ಆದರೆ ಪಕ್ಕದ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶಗಳಲ್ಲಿ ಇದು ಕಾಣಿಸಿಕೊಂಡಿದ್ದರಿಂದ ಅಲ್ಲಿನವರು ಇಲ್ಲಿಗೆ ಬಂದು ಹೋಗುವುದು ಮಾಡುವುದರಿಂದ ಇದು ಮತ್ತೇ ಇಲ್ಲಿ ಹರಡಬಹುದೆಂಬ ಮುಂದಾಲೋಚನೆಯಿಂದ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ತಾಲೂಕುವಾರು ಮಾಹಿತಿ ಹಾಗೂ ಪೋಲಿಯೋ ಲಸಿಕೆ ಗುರಿ:

ಜನಸಂಖ್ಯೆ ವಿವರ : ಶಹಾಪುರ ತಾಲೂಕು 4,17,953 ಲಕ್ಷ, ಸುರಪುರ ತಾಲೂಕು 4,70,609 ಲಕ್ಷ, ಯಾದಗಿರಿ ತಾಲೂಕು –4,85,941 ಲಕ್ಷ ಜನಸಂಖ್ಯೆ ಇದ್ದು, ಮನೆಗಳ ವಿವರ : ಶಹಾಪುರ – 77911, ಸುರಪುರ –87195, ಯಾದಗಿರಿ – 82401 ಮನೆಗಳಿವೆ. ಮಕ್ಕಳ ವಿವರ : ಶಹಾಪುರ – 47915, ಸುರಪುರ –57944. ಯಾದಗಿರಿ–61069 ಮಕ್ಕಳಿಗೆ ಲಸಿಕೆ ಹಾಕಿಸಲಾಗುತ್ತಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಲಾಯಿತು. ಆರೋಗ್ಯ ಶಿಕ್ಷಣಾಧಿಕಾರಿ ಜಗನ್ನಾಥ ಕೋಟೆ, ಆರ್ ಸಿ ಹೆಚ್ ಕಚೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಎನ್ ಸಿ ಇ ಆರ್ ಟಿ ಪುಸ್ತಕ ತಿರಸ್ಕರಿಸಬೇಕೆಂದು ಎಐಡಿಎಸ್‌ಓ ಸಂಚಾಲಕಿ ಶಿಲ್ಪಾ ಬಿ.ಕೆ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**



ಎನ್‌ಸಿಇಆರ್‌ಟಿಯು ಸಿಬಿಎಸ್‌ಇಯ 6ನೇ ತರಗತಿಯ ಕನ್ನಡ ಪುಸ್ತಕವನ್ನು ಬಿಡುಗಡೆ ಮಾಡಿದೆ. ಈ ಪುಸ್ತಕಕ್ಕೆ ಕೃಷ್ಣ' ಎಂದು ಹೆಸರಿಟ್ಟಿದೆ. ಕನ್ನಡದ ವೈಚಾರಿಕ ಪರಂಪರೆ, ಸಂಸ್ಕೃತಿಯನ್ನು ಬದಿಗೆ ಸರಿಸಿ ಈ ಪುಸ್ತಕವನ್ನು ಪ್ರಕಟಿಸುವ ಮೂಲಕ ಎನ್‌ಸಿಇಆರ್‌ಟಿ ರಾಜಕೀಯ–ಸಾಂಸ್ಕೃತಿಕ ದಬ್ಬಾಳಿಕೆ ನಡೆಸಿದೆ. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ' ಪ್ರಕಟಿಸಿದ ಪಠ್ಯಪುಸ್ತಕಗಳಿದ್ದರೂ ಅವುಗಳನ್ನು ಪರಿಗಣಿಸದೇ, ಕನ್ನಡದ ಅಸ್ಮಿತೆಗೆ ಅಪಚಾರವೆಸಗುವ ಈ ಪುಸ್ತಕವನ್ನು ಎನ್‌ಸಿಇಆರ್‌ಟಿಯು ನಾಡಿನ ವಿದ್ಯಾರ್ಥಿಗಳ ಮೇಲೆ ಹೇರುತ್ತಿದೆ. ಈ ದಾಳಿಯು ಎನ್‌ಇಪಿ–2020ರ ಹೇರಿಕೆಯ ಭಾಗವಾಗಿದೆ ಎಂದು ಎಐಡಿಎಸ್‌ಓ ಜಿಲ್ಲಾ ಸಮಿತಿ ಜಿಲ್ಲಾ ಸಂಚಾಲಕಿ ಶಿಲ್ಪಾ ಬಿ.ಕೆ ಹೇಳಿದರು.ಪತ್ರಿಕೆಗೆ ಹೇಳಿಕೆ ನೀಡಿರುವ ಅವರು ಈ ಪಠ್ಯ ಪುಸ್ತಕದ ತಯಾರಿಯಲ್ಲಿ ಕೂಡ ನಾಡಿನ ಯಾವುದೇ ಶಿಕ್ಷಣ ತಜ್ಞರು ಹಾಗೂ ಚಿಂತಕರೊಂದಿಗೆ ಸಮಾಲೋಚನೆ ನಡೆಸಿಲ್ಲ. ಎನ್ ಸಿ ಈ ಆರ್ ಟಿಯ ಈ ಅಪ್ರಜಾತಾಂತ್ರಿಕ ಮತ್ತು ದಮನಕಾರಿ ನಡೆಯನ್ನು ಎಐಡಿಎಸ್‌ಓ ಅತ್ಯುಗ್ರಪದಗಳಲ್ಲಿ ಖಂಡಿಸುತ್ತದೆ. ಅಲ್ಲದೆ, ?ಸಮತೋಲನ ಆಹಾರ' ಪಾಠದಲ್ಲಿ ಉದ್ದೇಶಪೂರ್ವಕವಾಗಿ ಮೊಟ್ಟೆ, ಮೀನು, ಮಾಂಸದ ವಿಷಯಗಳನ್ನು ಕೈಬಿಟ್ಟು ಕೇವಲ ಸಸ್ಯಹಾರಗಳನ್ನಷ್ಟೇ ಉಲ್ಲೇಖಿಸಲಾಗಿದೆ. ಕೂಡಲೇ ಎನ್‌ಸಿಇಆರ್‌ಟಿ ಈ ಪುಸ್ತಕವನ್ನು ಹಿಂಪಡೆಯಬೇಕೆಂದು ಎಐಡಿಎಸ್‌ಓ ಯಾದಗಿರಿ ಜಿಲ್ಲಾ ಸಮಿತಿಯು ಆಗ್ರಹಿಸುತ್ತದೆ.ಕನ್ನಡದ ಶ್ರೀಮಂತ ಸಾಹಿತ್ಯ ಪರಂಪರೆಯ ಚಹರೆ ಈ ಪಠ್ಯ ಪುಸ್ತಕದಲ್ಲಿ ಎಳ್ಳಷ್ಟೂ ಇಲ್ಲ ಎಂಬುದು ವಿಷಾದನೀಯ. ರಾಜ್ಯ ಸರ್ಕಾರ, ಆಚಾರ–ವಿಚಾರಗಳನ್ನು ಒಳಗೊಂಡ, ಸಾಹಿತ್ಯ–ಸಾಂಸ್ಕೃತಿಕ ಪರಂಪರೆಯ ಪರಿಚಯ ಮಾಡಿಕೊಡುವ ಪುಸ್ತಕವನ್ನು ಸಿದ್ಧಪಡಿಸಿ, ವಿದ್ಯಾರ್ಥಿಗಳಿಗೆ ಒದಗಿಸಬೇಕು. ಶಿಕ್ಷಣದ ವಿಷಯದಲ್ಲಿ ರಾಜ್ಯ ಸರ್ಕಾರವು ನಿರ್ಣಾಯಕ ಪಾತ್ರ ಹೊಂದಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಸ್ಪಷ್ಟ ನಿಲುವು ತೆಗೆದುಕೊಂಡು ಎನ್ ಸಿ ಇ ಆರ್ ಟಿ ಪುಸ್ತಕವನ್ನು ತಿರಸ್ಕರಿಸಬೇಕೆಂದು ಎಐಡಿಎಸ್‌ಓ ಯಾದಗಿರಿ ಜಿಲ್ಲಾ ಸಮಿತಿಯು ಮಾನ್ಯ ಮುಖ್ಯಮಂತ್ರಿಗಳನ್ನು ಆಗ್ರಹಿಸುತ್ತದೆ.

# ಮಾತಾ ಮಾಣಿಕೇಶ್ವರಿ ಧ್ಯಾನ ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆ ಮೌಲಾಲಿ ದರ್ಗಾದಲ್ಲಿ ಪ್ರಾಣಿ ಹಿಂಸೆ: ಆರೋಪ





• **ಮಲ್ಲಮ್ಮ ನುಡಿ ವಾರ್ತೆ ಸೇಡಂ**

ಜೂ 25: ಕಲಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಯಾನಾಗುಂದಿ ಸುಕ್ಷೇತ್ರ ಮಾತಾ ಮಾಣಿಕೇಶ್ವರಿ ಅಮ್ಮನವರ ಧ್ಯಾನ ಕ್ಷೇತ್ರ ವ್ಯಾಪ್ತಿಯಲ್ಲಿರುವ ಮೌಲಾಲಿ ದರ್ಗಾದಲ್ಲಿ ಪ್ರಾಣಿ ಹಿಂಸೆ ನಡೆಯುತ್ತಿದ್ದು, ಪವಿತ್ರ ಕ್ಷೇತ್ರದ ಪಾವಿತ್ರ್ಯತೆಗೆ ಧಕ್ಕೆ ಉಂಟಾಗುತ್ತಿದೆ ಎಂದು ಆಶ್ರಮದ ಟ್ರಸ್ಟಿ ಸದಸ್ಯ ಜಗಜೀವನ್ ರೆಡ್ಡಿ ಆರೋಪಿಸಿದರು.

ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾತಾ ಮಾಣಿಕೇಶ್ವರಿ ಅಮ್ಮನವರು ಅಹಿಂಸೆಯ ಸಂದೇಶ ಸಾರಿದ್ದು, ಯಾವುದೇ ಜೀವಿಗೆ ಹಾನಿ ಮಾಡಬಾರದು ಎಂದು ಉಪದೇಶಿಸಿದ್ದಾರೆ. ಆದರೆ ಮೊಹರಂ ಸಂದರ್ಭದಲ್ಲಿ ದರ್ಗಾ ಆವರಣದಲ್ಲಿ ಮಾಂಸ ತಂದು ಪ್ರಾಣಿ ಹಿಂಸೆ ನಡೆಸಲಾಗುತ್ತಿದೆ ಎಂದು ದೂರಿದರು.ಇದಲ್ಲದೆ, ದರ್ಗಾದಲ್ಲಿ ಹೆಚ್ಚಿನ ಶಬ್ದ ಮಾಡುವುದರಿಂದ ಧ್ಯಾನ ಕ್ಷೇತ್ರದ ಶಾಂತಿ ಹಾಗೂ ಧ್ಯಾನ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ. ಆಶ್ರಮದಿಂದ ವಿದ್ಯುತ್ ಹಾಗೂ ನೀರಿನ ಸೌಲಭ್ಯ ಒದಗಿಸಲಾಗಿದ್ದರೂ ಆಶ್ರಮದ ವ್ಯವಸ್ಥೆಗೆ ಅಡ್ಡಿಪಡಿಸುವ ಘಟನೆಗಳು ನಡೆಯುತ್ತಿವೆ ಎಂದು ಆರೋಪಿಸಿದರು.

ದರ್ಗಾದಲ್ಲಿನ ಪೂಜೆ–ಪುನಸ್ಕಾರ ಸೇರಿದಂತೆ ಹಲವು ವ್ಯವಸ್ಥೆಗಳನ್ನು ಆಶ್ರಮವೇ ನಿರ್ವಹಿಸುತ್ತಿದ್ದು, ಕೆಲವರು ನ್ಯಾಯಾಲಯದ ಆದೇಶಗಳನ್ನು ಪಾಲಿಸದೆ ವರ್ತಿಸುತ್ತಿದ್ದಾರೆ ಎಂದು ಅವರು ಹೇಳಿದರು.ಈ ಕುರಿತು ತಹಶೀಲ್ದಾರ್, ಪೊಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತ ತಕ್ಷಣ ಗಮನಹರಿಸಿ, ಮೊಹರಂ ಅವಧಿಯಲ್ಲಿ ಕಟ್ಟುನಿಟ್ಟಿನ ನಿಗಾ ವಹಿಸಬೇಕು. ಯಾವುದೇ ರೀತಿಯ ಪ್ರಾಣಿ ಹಿಂಸೆ ಅಥವಾ ಮಾಂಸ ತರುವುದಕ್ಕೆ ಅವಕಾಶ ನೀಡಬಾರದು. ನ್ಯಾಯಾಲಯದ ಆದೇಶ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಜಗಜೀವನ್ ರೆಡ್ಡಿ ಒತ್ತಾಯಿಸಿದರು.

ಆಶ್ರಮದ ಪಾವಿತ್ರ್ಯತೆ ಮತ್ತು ಶಾಂತ ವಾತಾವರಣ ಕಾಪಾಡಲು ಜಿಲ್ಲಾಡಳಿತ ತುರ್ತು ಕ್ರಮ ಜರುಗಿಸಬೇಕೆಂದು ಅವರು ಮನವಿ ಮಾಡಿದರು. ಈ ಸಂದರ್ಭದಲ್ಲಿ ಆಶ್ರಮದ ಟ್ರಸ್ಟ್ ಅಧ್ಯಕ್ಷ ಶಿವಯ್ಯ ಸ್ವಾಮಿ, ಸೇರಿದಂತೆ ವ್ಯವಸ್ಥಾಪಕ ಗೋಪಾಲ್ ಚಂಡರಿಕಿ, ಸುಮನ್ ಸೇರಿದಂತೆ ಅನೇಕ ಭಕ್ತರು ಇದ್ದರು.

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಜೂ.25–ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ ಅವರು ಬೆಂಗಳೂರಿನಿಂದ ರೈಲಿನ ಮೂಲಕ ಜೂನ್ 26 ರಂದು ಶುಕ್ರವಾರ ಬೆಳಿಗ್ಗೆ 7.40 ಗಂಟೆಗೆ ಕಲಬುರಗಿಗೆ ಆಗಮಿಸುವರು. ಜೂನ್ 27, ಶನಿವಾರದಂದು ಸಂಜೆ 5 ಗಂಟೆಗೆ ಸೇಡಂ ರಸ್ತೆಯ ಸಿ.ಪಿ.ಎಂ. ಬಾಯ್ಸ್ ಹಾಸ್ಟೆಲ್ ಆವರಣದ ಸ್ಟೂಡೆಂಟ್ ಆಕ್ಟಿವಿಟಿ ಸೆಂಟರ್‌ನಲ್ಲಿ ನಡೆಯಲಿರುವ ಮಹಾದೇವಪ್ಪ ರಾಂಪುರೆ ವೈದ್ಯಕೀಯ ಕಾಲೇಜಿನ (MRMC) ಪದವಿ ಪ್ರದಾನ ಸಮಾರಂಭದ ಅಂಗವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಜೂನ್ 28 ಭಾನುವಾರದಂದು ಬೆಳಿಗ್ಗೆ 8.10 ಗಂಟೆಗೆ ಕಲಬುರಗಿ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

# ಐದು ವರ್ಷದ ಒಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಹಾಕಿಸಿ:ನಾಗೇಶ್

• **ಮಲ್ಲಮ್ಮ ನುಡಿ ವಾರ್ತೆ ಕುಕನೂರು**



ಪಟ್ಟಣದಲ್ಲಿರುವ 5 ವರ್ಷದ ಒಳಗಿನ ಪ್ರತಿಯೊಬ್ಬ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಿ ಪೋಲಿಯೋ ಮುಕ್ತ ಭಾರತ ನಿರ್ಮಾಣಕ್ಕೆ ಸಹಕರಿಸಿ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಶ್ ಹೇಳಿದರು. ಪಟ್ಟಣದಲ್ಲಿರುವ ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮುಖ್ಯ ಅಧಿಕಾರಿ ನಾಗೇಶ್ ಬುಧವಾರ ಮಾತನಾಡುತ್ತಾ ಕರ್ನಾಟಕ ಸರ್ಕಾರದ ಆದೇಶದಂತೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲೂಕ ಆರೋಗ್ಯ ಇಲಾಖೆ, ತಾಲೂಕ ಆಡಳಿತ ಹಾಗೂ ಪಟ್ಟಣ ಪಂಚಾಯಿತಿ ಸಹಯೋಗದಲ್ಲಿ ಇದೆ ಜೂನ್ 28ರ ಭಾನುವಾರ ಆರೋಗ್ಯ ಇಲಾಖೆ ಸೂಚಿಸುವ ಸ್ಥಳಗಳಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಪಟ್ಟಣ ಪಂಚಾಯತಿ ವ್ಯಾಪ್ತಿಯ 14 ಕಡೆಗಳಲ್ಲಿ ಪೋಲಿಯೋ ಬೂತ್ ಗಳನ್ನು ತೆರೆಯಲಾಗಿದ್ದು, ಇವುಗಳಲ್ಲಿ 77 ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸಲಿದ್ದು ಪ್ರತಿಯೊಬ್ಬ ಪಾಲಕರು ನಿಗಾ ವಹಿಸಿ ತಮ್ಮ ಐದು ವರ್ಷದ ಒಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸುವುದರೊಂದಿಗೆ ಸರ್ಕಾರದ ಕಾರ್ಯಕ್ರಮವಾದ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು 100% ಯಶಸ್ವಿಗೊಳಿಸುವುದರೊಂದಿಗೆ ದೇಶವನ್ನು ಪೋಲಿಯೋ ಮುಕ್ತ ಭಾರತವನ್ನಾಗಿಸುವಲ್ಲಿ ಪಾಲಕರು ಸಹಕರಿಸಬೇಕೆಂದು ತಿಳಿಸಿರುತ್ತಾರೆ..

# ಸಾರ್ವಜನಿಕರಿಂದ ಆಕ್ಷೇಪಣೆ ಸಲ್ಲಿಸಲು ಅವಕಾಶ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಜೂ.25–ಅಫಜಲಪೂರ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸಿ.ಎ. ನಿವೇಶನ (ಸಾರ್ವಜನಿಕ ಉಪಯೋಗಕ್ಕಾಗಿ) ಕಾಯ್ದಿರಿಸಿದ ನಿವೇಶನಗಳನ್ನು ವಿವಿಧ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡುವ ಶ್ರೀ ಮಾತೋಶ್ರೀ ಕಾಶಿಬಾಯಿ ವಿಧ್ಯಾ ಮಂದಿರ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಆಸ್ತಿ ಸಂಖ್ಯೆ 5–7–68ರ ಅಳತೆ 956.40 ಚಮೀ ಅಳತೆಯುಳ್ಳಲಾಗಿದ್ದು ಸದರಿ ಆಸ್ತಿಗೆ ಸಂಬಂಧಿಸಿದಂತೆ, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ ಈ ಸಾರ್ವಜನಿಕ

# ನರೇಗಾ ಯೋಜನೆಯಡಿ ಕರ್ತವ್ಯ ಲೋಪವೆಸಗಿದ ಪಿಡಿಒ,ಸಿಬ್ಬಂದಿಗಳ ವಿರುದ್ಧ, ಈಚನಾಳ ಗ್ರಾಪಂ ಕಚೇರಿಗೆ ನರೇಗಾ ಕೂಲಿಕಾರರ ಮುತ್ತಿಗೆ

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ

ತಾಲೂಕಿನ ಈಚನಾಳ ತಾಂಡಾ ದಲ್ಲಿ ಜೂ.18 ರಿಂದ ಜೂ. 25 ವರೆಗೆ ಈರಪ್ಪ ಇವರ ಹೊಲದಿಂದ ಚಂದಪ್ಪ ಇವರ ಹೊಲದ ವರೆಗೆ ಸರಕಾರಿ ನಾಲಾ ಹೂಳು ತೆಗೆಯುವ ಕಾಮಗಾರಿ ಗೆ 100 ಕ್ಕೂ ಅಧಿಕ ಕೂಲಿಕಾರರಿಗೆ ಕೆಲಸ ನೀಡಿ, ಸದರಿ ಕೂಲಿಕಾರರಿಗೆ ಕಳೆದ ಐದು ದಿನಗಳಿಂದ ಗ್ರಾಮ ಪಂಚಾಯತ ಪಿಡಿಒ ಹಾಗೂ ಸಂಬಂಧಪಟ್ಟ ನರೇಗಾ ಸಿಬ್ಬಂದಿಗಳು ಕೆಲಸ ಮಾಹಿತಿ ನೀಡದೇ ಬೆಜವಬ್ದಾರಿ ಮೆರೆದಿದ್ದು, ಇದರಿಂದ ಕೂಲಿಕಾರರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತೆ ಗ್ರಾಮ ಪಂಚಾಯತ ಅಧಿಕಾರಿಗಳ ನಿರ್ಲಕ್ಷದಿಂದ ಹಾಜರಿಯೂ ವ್ಯರ್ಥ,ಕೂಲಿಯೂ ಇಲ್ಲದಂತಾಗಿದೆ ಎಂದು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಏಳು ದಿನಗಳ ಕೂಲಿ ಹಣ ಪಾವತಿಸುವಂತೆ ಬಿಗಿಪಟ್ಟು ಹಿಡಿದರು. ನಂತರ ಬಿಗಿಪಟ್ಟು ಸಡಿಲ ಮಾಡಿದ ಕೂಲಿಕಾರರು ಜೂ.26 ರಿಂದ ನರೇಗಾ ಕೆಲಸ ನೀಡುವಂತೆ ಒತ್ತಾಯಿಸಿದರು.ಈ ವೇಳೆ ಪಿಡಿಒ ಮಹೇಶ್ ಬನ್ನಿಗೊಳ ಕೂಲಿಕಾರರ ಒತ್ತಡಕ್ಕೆ ಮಣಿದು



ಕೆಲಸ ನೀಡುವ ಭರವಸೆ ನೀಡಿದ ಹಿನ್ನಲೆ ಕೂಲಿಕಾರರು ಪ್ರತಿಭಟನೆ ಕೈಬಿಟ್ಟರು.ಆದರೆ ಈಚನಾಳ ಗ್ರಾಮದಲ್ಲಿ ಜೂ.21ರಿಂದ ಜೂ.29 ವರೆಗೆ ಲಿಂಗರೆಡ್ಡೆಪ್ಪ ಮೇಟಿ ಹೊಲದಿಂದ ನಾಗಪ್ಪ ಚಿತ್ತವಾಡಗಿ ಇವರ ಹೊಲದ ವರೆಗೆ ಹಳ್ಳ ಹೂಳೆತ್ತುವ ಕೆಲಸ ಕ್ಕೆ ಎನ್ ಎಂ ಆರ್ ಸೃಜನೆಯಾಗಿದೆ.

ಇಂದಿನವರೆಗೂ ಕೂಲಿಕಾರರ ಎನ್. ಎಂ.ಆರ್.ಪ್ರತಿ ಸಂಬಂಧಪಟ್ಟ ಮೇಟ್ ಕೈ ತಲುಪದ ಕಾರಣ ಕೂಲಿಕಾರರಿಗೆ ಕೆಲಸ ಮಾಹಿತಿ ಸಿಗದೇ ಹಾಜರಾತಿ ಶೂನ್ಯವಾಗಿದ್ದು, ನರೇಗಾ ಯೋಜನೆಯ ನಿಯಮ ಉಲ್ಲಂಘನೆ, ಪಿಡಿಓ ಮಹೇಶ್ ಬನ್ನಿಗೊಳ ನೀರ್ಲಕ್ಷ ಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಪ್ರತಿಭಟನೆಯಲ್ಲಿ ರವಿ ರಾಥೋಡ್, ರಮೇಶ್ ರಾಥೋಡ್, ಮೋತಿಲಾಲ್ ತುಕಾರಾಂ, ಶೆಟ್ಟಿ ಪವಾರ್, ಚಂದಪ್ಪ ರಾಥೋಡ್, ಈರಪ್ಪ ರಾಥೋಡ್, ಕೃಷ್ಣ ರಾಥೋಡ್, ಶಾಂತಮ್ಮ,ಮಾನಿಬಾಯಿ, ಪಾರ್ವತಿ,ಉಮಿ ಬಾಯಿ, ಸೀತಾಬಾಯಿ, ಲಕ್ಷೀ ಬಾಯಿ, ಲಕ್ಷ್ಮಿ,ರುಕ್ಮವ್ವ,ಮಾನಮ್ಮ, ಸೇರಿದಂತೆ ಇತರರಿದ್ದರು.

## ಅನಾಥ, ಬಡ ಮಕ್ಕಳ ಪ್ರಸಾದ ನಿಲಯಕ್ಕೆ 6.50 ಲಕ್ಷ ಮೌಲ್ಯದ ಕಿರಾಣಿ ಸಾಮಗ್ರಿ ದಾನ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ಹೂವಿನಶಿಗ್ಲಿಯ ಶ್ರೀ ವಿರಕ್ತಮಠದ ಶ್ರೀ ಗುರುಕುಲ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅನಾಥ ಹಾಗೂ ಬಡ ಮಕ್ಕಳ ನಿರಂತರ ಅನ್ನದಾಸೋಹಕ್ಕಾಗಿ (ಪ್ರಸಾದ) ಕಮಲನಗರ ತಾಲೂಕಿನ ಸೋನಾಳ ಗ್ರಾಮದ ಹೆಸರಾಂತ ಉದ್ಯಮಿ ಹಾಗೂ ಇದೇ ಸಂಸ್ಥೆಯ ಹಳೆಯ ವಿದ್ಯಾರ್ಥಿಯಾದ ಶ್ರೀ ವಿಜಯಕುಮಾರ್ ಸೂರ್ಯಕಾಂತ್ ಬಿರಾದಾರ್ ಅವರು ಬರೋಬ್ಬರಿ ?6,50,000/– (ಆರು ಲಕ್ಷದ ಐವತ್ತು ಸಾವಿರ ರೂ.) ಮೌಲ್ಯದ ಕಿರಾಣಿ ಸಾಮಗ್ರಿಗಳನ್ನು ಉಚಿತವಾಗಿ ದಾನ ನೀಡುವ ಮೂಲಕ ತಮ್ಮ ಗುರುಭಕ್ತಿ ಹಾಗೂ ಮಾನವೀಯತೆಯನ್ನು ಮೆರೆದಿದ್ದಾರೆ.ತಾವೂ ಓದಿದ ಸಂಸ್ಥೆಯ ಬಡ ಮಕ್ಕಳ ಹಸಿವು ನೀಗಿಸಬೇಕೆಂಬ ಉದಾತ್ತ ಉದ್ದೇಶದಿಂದ ವಿಜಯಕುಮಾರ ಅವರು ಪ್ರತಿ ವರ್ಷವೂ ತಪ್ಪದೇ ಈ ಸೇವೆಯನ್ನು ಅತ್ಯಂತ ಶ್ರದ್ಧೆಯಿಂದ ಮಾಡಿಕೊಂಡು ಬರುತ್ತಿದ್ದಾರೆ. ಪ್ರಸ್ತುತ ಸಾಲಿನಲ್ಲಿಯೂ ಮಠದ ಪ್ರಸಾದ ನಿಲಯಕ್ಕೆ ಅಗತ್ಯವಿರುವ ಬೃಹತ್ ಪ್ರಮಾಣದ ಕಿರಾಣಿ ದಿನಸಿ ಸಾಮಗ್ರಿಗಳನ್ನು ಅವರು ಸಂಸ್ಥೆಗೆ ಹಸ್ತಾಂತರಿಸಿದ್ದಾರೆ.ಸಂಸ್ಥೆಯಿಂದ ಕೃತಜ್ಞತೆ:ತಮ್ಮ ಸ್ವಂತ ಶ್ರಮದಿಂದ ಉದ್ಯಮಿಯಾಗಿ ಬೆಳೆದು, ?ತಾವು ಕಲಿತ ಗುರುಕುಲದ ಋಣವನ್ನುಮರೆಯದೇ, ಇಲ್ಲಿ ಆಶ್ರಯ ಪಡೆದಿರುವ ನೂರಾರು ಬಡ ಮತ್ತು ಅನಾಥ ಮಕ್ಕಳ ಹಸಿವನ್ನು ನೀಗಿಸಲು ಪ್ರತಿ ವರ್ಷ ಅನ್ನದಾಸೋಹಕ್ಕೆ ಇಷ್ಟೊಂದು ದೊಡ್ಡ ಮಟ್ಟದ ಧಾನ್ಯ–ದಿನಸಿ ಸಹಾಯ ಮಾಡುತ್ತಿರುವುದು ಶ್ರೀ ವಿಜಯಕುಮಾರ್ ಬಿರಾದಾರ್ ಅವರ ಉದಾತ್ತ ಗುಣಕ್ಕೆ ಸಾಕ್ಷಿಯಾಗಿದೆ. ವಿದ್ಯೆ ನೀಡಿದ ಸಂಸ್ಥೆ ಹಾಗೂ ಅನ್ನ ನೀಡುವ ಮಠವನ್ನು ಗೌರವಿಸುವ ಇಂತಹ ಸದ್ಭಕ್ತರು ಸಮಾಜಕ್ಕೆ ಮಾದರಿಯಾಗಿದ್ದಾರೆ. ಭಗವಂತನು ಮತ್ತು ಶ್ರೀಮಠದ ಗುರು ಪರಂಪರೆಯು ಅವರಿಗೆ ಹಾಗೂಅವರ ಕುಟುಂಬಕ್ಕೆ ಆಯುಷ್ಯ, ಆರೋಗ್ಯ ಹಾಗೂ ಉದ್ಯಮದಲ್ಲಿಮತ್ತಷ್ಟು ಯಶಸ್ಸನ್ನು ಕರುಣಿಸಲಿಎಂದು ಹರಸುತ್ತೇವೆ,"ಎಂದು ಪೂಜ್ಯಶ್ರೀಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದ್ದಾರೆ. ಶ್ರೀ ಮಠದ ಪೀಠಧಿಪತಿಶ್ರೀ ಮ.ನಿ. ಪ್ರ. ಚನ್ನವಿರ ಮಹಾಸ್ವಾಮಿಗಳು, ಸದ್ಭಕ್ತರು, ಹಾಗೂ ಶ್ರೀ ಗುರುಕುಲ ಶಿಕ್ಷಣ ಸಂಸ್ಥೆಯ ಆಡಳಿತಮಂಡಳಿ,ಸಿಬ್ಬಂದಿ ವರ್ಗದವರು ಹೃದಯಪೂರ್ವಕ ಧನ್ಯವಾದಗಳನ್ನು ಅರ್ಪಿಸಿ, ಅವರ ಉದ್ಯಮ ಇನ್ನು ಹೆಚ್ಚಿನ ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದ್ದಾರೆ.

## ಹುಬ್ಬಳ್ಳಿಯಲ್ಲಿ ಧರ್ಮದರ್ಶಿ ಎಚ್. ಆರ್.ನಾಯ್ಕ ಅವರಿಗೆ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಹುಬ್ಬಳ್ಳಿ–ಧಾರವಾಡ ನಾಮಧಾರಿ ಸಮಾಜ ಹಿತವರ್ಧಕ ಸಂಘದ ವತಿಯಿಂದ ಅಮರಗೋಳದಲ್ಲಿ ಹಮ್ಮಿಕೊಂಡ ನೂತನ ಸಭಾಭವನ,ವಿದ್ಯಾರ್ಥಿನಿಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಜಿರೆಯ ಶ್ರೀರಾಮ ಕ್ಷೇತ್ರದ ಟ್ರಸ್ಟಿ ಹಾಗೂ ಕುಮಟಾ ಕೋನಳ್ಳಿಯ ಶ್ರೀ ವನದುರ್ಗಾ ದೇವಿಯ ದೇವಸ್ಥಾನದ ಧರ್ಮದರ್ಶಿ ಎಚ್.ಆರ್.ನಾಯ್ಕ ಇವರನ್ನು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಸೋಲೂರು ಮಠದ ಶ್ರೀ ವಿಖ್ಯಾತನಂದ ಸ್ವಾಮೀಜಿ ಸಂಘದ ಅಧ್ಯಕ್ಷ ಟಿ.ಡಿ.ನಾಯ್ಕ, ಕಾರ್ಯದರ್ಶಿ ಲೋಕಪಾಲ ನಾಯ್ಕ, ಉಪಾಧ್ಯಕ್ಷ ಎಂ.ಎನ್.ನಾಯ್ಕ, ಮಹಿಳಾ ಮಂಡಳದ ಅಧ್ಯಕ್ಷೆ ಸಾವಿತ್ರಿ ವಿ. ನಾಯ್ಕ, ಕಾರ್ಯದರ್ಶಿ ಶಾರದಾ ಎಂ. ನಾಯ್ಕ, ಸಿದ್ಧರೂಢ ಮಠದ ಧರ್ಮದರ್ಶಿ ಹಾಗೂ ಸಂಘದ ಸದಸ್ಯ ಉದಯಕುಮಾರ ಡಿ. ನಾಯ್ಕ ಸೇರಿದಂತೆ ಸಂಘದ ಸದಸ್ಯರು ಉಪಸ್ಥಿತರಿದ್ದರು.



## ದಿಕ್ಕು ತಪ್ಪಿದ ಪಿ. ಎಂ. ವಿಶ್ವಕರ್ಮ ಯೋಜನೆ : ಕ್ರಮಕ್ಕೆ ಸುಜಯ ಶೆಟ್ಟಿ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆಗೋಕರ್ಣ





ಕೇಂದ್ರ ಸರಕಾರವು ಸಾಂಪ್ರದಾಯಿಕ ಕುಶಲಕರ್ಮಿಗಳಿಗೆ ಕೌಶಲ್ಯ ತರಬೇತಿ, ಉಚಿತ ಟೂಲ್‌ಕಿಟ್‌ಗಳು ಮತ್ತು ರಿಯಾಯಿತಿ ಬಡ್ಡಿ ದರದಲ್ಲಿ 1 ರಿಂದ 3 ಲಕ್ಷದವರೆಗೆ ಮೇಲಾಧಾರ–ಮುಕ್ತ ಸಾಲವನ್ನು ಒದಗಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯು ಯಾಕೋ ದಿಕ್ಕು ತಪ್ಪಿದೆ ಎನ್ನುವ ಸಂಶಯ ತರಬೇತಿ ಪಡೆದವರಲ್ಲಿ ಕಾಡುತ್ತಿದೆ. ಕೇಂದ್ರ ಸರಕಾರವು ಬಡಗಿ, ದೋಣಿ, ಮೀನು ಬಲೆ, ಬುಟ್ಟಿ, ಚಾಪೆ, ಅಸ್ತ್ರ, ಬೊಂಬೆ ಮತ್ತು ಆಟಿಕೆ, ಕಮ್ಮಾರ, ಹ್ಯಾಮರ್ ಮತ್ತು ಟೂಲ್ ಕಿಟ್, ಬೀಗ ತಯಾರಕರು, ಕುಂಬಾರ, ಶಿಲ್ಪಿ, ಕಲ್ಲು ಕೆತ್ತುವವರು, ಚಮ್ಮಾರ, ಮೇಸ್ತ್ರಿ, ಕ್ಷೌರಿಕ, ಹೂವು ಮಾರುವವರು, ದೋಬಿ, ದರ್ಜಿ, ಚಿನ್ನದ ಕೆಲಸ, ಟೈಲರಿಂಗ್, ಟೈಲ್ಸ್ ಜೋಡನೆ ಹೀಗೆ ಹತ್ತಾರು ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಿ ಜೀವನ ನಿರ್ವಹಣೆಯ ಹಾದಿ ತೋರಿಸುವ ಕಾರ್ಯವು ಪಿ. ಎಂ. ವಿಶ್ವಕರ್ಮ ಯೋಜನೆಯ ಉದ್ದೇಶವಾಗಿದೆ.ಅಲ್ಲದೆ ಶಿಬಿರಾರ್ಥಿಗಳಿಗೆ ಐದರಿಂದ ಏಳು ದಿನಗಳ ತನಕ ತರಬೇತಿ ಮುಂದಿನ ದಿನಗಳಲ್ಲಿ ಅಗತ್ಯವಿದ್ದರೆ ಹದಿನೈದು ದಿನಗಳ ತನಕ ತರಬೇತಿ ನೀಡಿ ಪ್ರತಿ ದಿನ ಐದುನೂರು ರೂಪಾಯಿಗಳ ತರಬೇತಿ ಭತ್ಯೆ ನೀಡುವುದರ ಜತೆಗೆ ತರಬೇತಿ ಪಡೆದ ಪ್ರತಿಯೊಬ್ಬರಿಗೆ ಒಂದು ಲಕ್ಷದಿಂದ ಮೂರು ಲಕ್ಷದವರೆಗೆ ರಿಯಾಯತಿ ಬಡ್ಡಿ ದರದಲ್ಲಿ ಸಾಲ ನೀಡಿ ಜನರ ಜೀವನ ಮಟ್ಟ ಹೆಚ್ಚಿಸುವ ಜನಪರ ಕಾಯಕ ಈ ಯೋಜನೆ ಹೊಂದಿದೆ.

ತರಬೇತಿ ಪಡೆದ ಹೆಚ್ಚಿನ ಶಿಬಿರಾರ್ಥಿಗಳಿಗೆ ವರುಷಗಳೇ ಕೆಳೆದರೂ 15,000 ರೂ ಬೆಲೆಯ ಟೂಲ್ ಕಿಟ್ ಬಂದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ತರಬೇತಿ ಪಡೆದ ಜಿಲ್ಲೆಯ ಬಹುತೇಕ ಶಿಬಿರಾರ್ಥಿಗಳಿಗೆ ಎರಡು ಮೂರು ವರ್ಷ ಕಳೆದರೂ ಹದಿನೈದು ಸಾವಿರ ರೂಪಾಯಿ ಮೌಲ್ಯದ ಟೂಲ್ ಕಿಟ್ ಕೆಲವರಿಗೆ ಮಾತ್ರ ಬಂದಿದ್ದು ಹೆಚ್ಚಿನ ಜನರಿಗೆ ಬರುತ್ತಿಲ್ಲ ಎನ್ನುವ ಅಪವಾದ ಕೇಳಿಬಂದಿದೆ. ಇನ್ನೂ ಮೊದಲಿನಂತೆ ಸರಿಯಾಗಿ ತರಬೇತಿಯನ್ನು ಸಹ ನಡೆಸುತ್ತಿಲ್ಲ.ಇನ್ನೂ ಟೂಲ್ ಕಿಟ್ ವೋಚರ್ ಮೊಬೈಲ್ ನಂಬರ್‌ಗೆ ಬರುತ್ತಿದ್ದು ಪ್ರತಿ ಆರು ತಿಂಗಳು ನಂತರ ಮತ್ತೆ 6 ತಿಂಗಳು ದಿನಾಂಕ ಮುಂದೂಡಿ ಸಂದೇಶ (ಮೆಸೇಜ್) ಬರುತ್ತಿದೆ. ಈ ಬಗ್ಗೆ ಪತ್ರಿಕಾ ಹೇಳಿಗೆ ನೀಡಿರುವ ಸಾಮಾಜಿಕ ಕಾರ್ಯಕರ್ತ ಸುಜಯ ಶೆಟ್ಟಿ ಗೋಕರ್ಣ ಅವರು ಈ ಕೂಡಲೇ ಸಂಭಂದಪಟ್ಟ ಇಲಾಖೆ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲಾಧಿಕಾರಿಗಳು, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸಂಬಂಧಪಟ್ಟ ಕೇಂದ್ರ ಸಚಿವರೊಂದಿಗೆ ಚರ್ಚಿಸಿ ಪಿ.ಎಂ. ವಿಶ್ವಕರ್ಮ ಯೋಜನೆಯನ್ನು ಸರಿಯಾದ ದಾರಿಗೆ ತಂದು, ತರಬೇತಿ ಪಡೆದ ಪ್ರತಿಯೊಬ್ಬ ಶಿಬಿರಾರ್ಥಿಗಳಿಗೆ ಕೂಡಲೇ 15,000 ರೂ ಮೌಲ್ಯದ ಟೂಲ್ ಕಿಟ್ ಒದಗಿಸಬೇಕು. ಹಾಗೂ ಈ ಯೋಜನೆ ಯಶಸ್ವಿಯಾಗಿ ಪ್ರಧಾನಮಂತ್ರಿಗಳ ಹಾಗೂ ಶಿಬಿರಾರ್ಥಿಗಳ, ಕುಶಲಕರ್ಮಿಗಳ ಕನಸು ನನಸು ಮಾಡಬೇಕಾಗಿದೆ ಎಂದು ಸುಜಯ ಸುಧೀರ ಶೆಟ್ಟಿ ಆಗ್ರಹಿಸಿದ್ದಾರೆ.

## ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ನೂತನ ಅಧ್ಯಕ್ಷರಾಗಿ ಬದ್ದಿ ಮರಿಸ್ವಾಮಿ ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆಕೊಟ್ಟೂರು

ಪಟ್ಟಣದ ಪ್ರವಾಸಿ ಮಂದಿರದಲ್ಲಿ ದಿನಾಂಕ 25–06 –2026 ನೇ ಗುರುವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ತಾಲೂಕು ಅಧ್ಯಕ್ಷರ ಆಯ್ಕೆ ಪ್ರಕ್ರೀಯೆ ನಡೆಸಲಾಯಿತು.,

ಈ ಹಿಂದೆ ತಾಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಬಂಗ್ಲೆ ಮಲ್ಲಿಕಾರ್ಜುನ ಇವರ ರಾಜ್ಯದ್ಯಕ್ಷತೆಯಲ್ಲಿ ನಡೆಯುತ್ತಿರುವ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಮೂರನೇ ವರ್ಷದಲ್ಲಿ ನಡೆಯುವ ಧ್ವನಿ ಸಂಘಟನೆಯ ಹಿಂದಿನ ಅಂದರೆ 2024–25 ಸಾಲಿನಲ್ಲಿ ಶ್ರೀ ಜಯಪ್ಪ ಚಿಗಟೇರಿ ರವರ ಅಧ್ಯಕ್ಷತೆಯಲ್ಲಿ ಸಂಘಟನೆಯ ಎಲ್ಲಾ ಆಗುಹೋಗುಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅಚ್ಚು ಕಟ್ಟಾಗಿ ರಾಜ್ಯಾದ್ಯಕ್ಷರು ನೀಡಿದ ಅಧ್ಯಕ್ಷ ಗಿರಿಯನ್ನು ನಿಭಾಯಿಸಿ 2025–26 ನೇ ಸಾಲಿನಲ್ಲಿ ಕಾರಣಾಂತರಗಳಿಂದ ಧ್ವನಿ ಸಂಘಟನೆಯ ಅಧ್ಯಕ್ಷ ಸ್ಥಾನಕ್ಕೆರಾಜೀನಾಮೆಯನ್ನು ನೀಡಿದ್ದರು,ತದನಂರದಲ್ಲಿ ಸದ್ರಿ ಸಂಘದ ಅಧ್ಯಕ್ಷಗಿರಿಯನ್ನು ಕೊಟ್ಟೂರಿನವರೇ ಆದ ಯುವ ಉತ್ಸಾಹಿ ಶಿವರಾಜ್ ಕನಾಕಟ್ಟೆ ರವರು ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿದ್ದರು.

ಅವರೂ ಕೂಡಾ ಸಂಘಟನೆಗೆ ಎಲ್ಲಿಯೂ ಯಾವುದೇ ರೀತಿಯ ಚ್ಯುತಿ ಬಾರದೆ ಅಧ್ಯಕ್ಷ ಗಿರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು, ನಂತರ ಕಾರಣಾಂತರಗಳಿಂದ ಶಿವರಾಜ್ ಕನ್ನಕಟ್ಟೆ ಅವರು 25–06–2026 ನೇ ಗುರುವಾರ ತಮ್ಮ ಅಧ್ಯಕ್ಷಗಿರಿಗೆ ರಾಜೀನಾಮೆ ನೀಡಿದರು, ಅಂದೇ ಅಧ್ಯಕ್ಷ ಸ್ಥಾನವನ್ನು ರಾಜ್ಯಾದ್ಯಕ್ಷರಾದ ಬಂಗ್ಲೆ ಮಲ್ಲಿಕಾರ್ಜುನ ಇವರ ಅನುಮತಿಯ ಮೇರೆಗೆ ಸಂಘದ ಎಲ್ಲಾ ಪದಾಧಿಕಾರಿಗಳ ಸಮ್ಮುಖದಲ್ಲಿ ಬದ್ದಿ ಮರಿಸ್ವಾಮಿ ಇವರನ್ನು ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಅಧ್ಯಕ್ಷರನ್ನಾಗಿ ಆಯ್ಕೆಮಾಡಲಾಯಿತು.,

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದ ನಂತರ ,ಸಂಘಟನೆಯ ನೂತನ ಅಧ್ಯಕ್ಷರಾದ ಬದ್ದಿ ಮರಿಸ್ವಾಮಿ ರವರು ಮಾತನಾಡಿ ಪತ್ರಿಕೋದ್ಯಮ ಇದು ಒಂದು ಸಂವಿಧಾನದಲ್ಲಿ ಪವಿತ್ರವಾದ ನಾಲ್ಕನೆಯ ಅಂಗವಾಗಿದೆ ಇದರಲ್ಲಿ ಕಾರ್ಯನಿರ್ವಹಿಸುವುದು ಒಂದು ಹೆಮ್ಮಯ ಸಂಗತಿಯೇ ಸರಿ, ಇದು ಒಂದು ಸಮಾಜಮುಖಿ ಕಾರ್ಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವುದಿದೆಯಲ್ಲಾ ಅದು ಸಂತಸದ ಸಂಗತಿ ಎಂದು ಹೇಳಿದರು. ಹಾಗೂಸಂಘದ ಪದಾಧಿಕಾರಿಗಳಿಗೂ ಸರ್ವ ಸದಸ್ಯರಿಗೂ ರಾಜ್ಯಾದ್ಯಕ್ಷರಾದ ಬಂಗ್ಲೆ ಮಲ್ಲಿಕಾರ್ಜುನ ರವರಿಗೂ ಅಭಿನಂದಿಸಿ ನೀವು ನನಗೆ ಕೊಟ್ಟಂತ ಜವಾಬ್ದಾರಿಯನ್ನು ಸರಿಯಾಗಿ ಕಾರ್ಯ ಸಲ್ಲಿಸುವೆ ಎಂದು ಮಾತನಾಡಿದರು.ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ, ಜಯಪ್ಪ ಚಿಗ–ಟೇರಿ, ಕನಾಕಟ್ಟೆ ಶಿವರಾಜ್, ರಮೇಶ್ ಅಂಬಳಿ, ಮಾರೇಶ್, ಮಂಜುನಾಥ್ ಮೋರಿಗೆರೆ, ಮಣಿಕಂಠ, ಮಾರುತಿ ಬಿ. ಮತ್ತು ಪ್ರದೀಪ್ ಕುಮಾರ್, ಇನ್ನಿತರರು ಪಾಲ್ಗೊಂಡಿದ್ದರು.

## ಕಡಿದ ಕೋಡಿಯಿಂದಾಗಿ ಜಲಾವೃತಗೊಂಡಿದ್ದ ಕೃಷಿ ಭೂಮಿಯಿಂದ ನಿರ್ಗಮಿಸಿದ ನೀರು 15 ರಿಂದ 20 ಜನರಿಂದ ಕೋಡಿ ಕಡೆಯುವಿಕೆ : ಕೃಷಿ ಭೂಮಿಯತ್ತ ರೈತರ ಚಿತ್ತ



ಪೂಜಗೇರಿ ಹಳ್ಳದ ನೀರು ಒಮ್ಮೆ ಸಮುದ್ರಕ್ಕೆ ಸೇರಿದರೆ ನಂತರ ಮತ್ತೆ ದೊಡ್ಡ ಮಟ್ಟದ ಸಮಸ್ಯೆಗಳಿಲ್ಲ. ನಾವು ಅನಾದಿ ಕಾಲದಿಂದಲೂ ಭತ್ತವನ್ನು ಬೆಳೆಯುತ್ತ ಬಂದಿದ್ದೇವೆ. ಈ ಭಾಗದಲ್ಲಿರುವವರು ಎಲ್ಲರೂ ಕೃಷಿಕರಾಗಿರುವುದರಿಂದ ಸಹಜವಾಗಿಯೇ ಈ ಭಾಗದಲ್ಲಿ ಕೃಷಿ ಚಟುವಟಿಕೆ ನಡೆಯುತ್ತದೆ.

– ರಾಜೇಶ ಮಿತ್ರಾ ನಾಯ್ಕ

ಕೃಷಿಕ, ತೆಂಕಣಕೇರಿ

ನಾಗರಾಜ ಮಂಜಗುಣಿ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಮಳೆಯಿಂದಾಗಿ ಪೂಜಗೇರಿ, ತೆಂಕಣಕೇರಿ, ನದಿಭಾಗ ಸೇರಿದಂತೆ ಸುಮಾರು ನೂರಾರು ಎಕರೆಯಷ್ಟು ಭೂಮಿ ಜಲಾವೃತಗೊಂಡಿದ್ದು, ಸಮುದ್ರ ಸಂಗಮ ಪ್ರದೇಶದಲ್ಲಿ ಕೋಡಿ ಕಡಿದ ಪರಿಣಾಮವಾಗಿ ಕೃಷಿಭೂಮಿಯಲ್ಲಿ ಆವರಿಸಿಕೊಂಡಿದ್ದ ಮಳೆನೀರು ಸರಾಗವಾಗಿ ಸಮುದ್ರ ಸೇರುವ ಮೂಲಕ ಕೃಷಿ ಕಾರ್ಯಕ್ಕೆ ಚಾಲನೆ ನೀಡಿದಂತಾಗಿದೆ.

ಕೋಡಿ ಕಡಿಯುವುದು : ಅನಾದಿ ಕಾಲದಿಂದಲೂ ಇಲ್ಲಿಯ ಪೂಜಗೇರಿ ಹಳ್ಳದ ನೀರು ಸಮುದ್ರ ಸೇರುತ್ತದೆ. ಆದರೆ ಪೂಜಗೇರಿ ಹಳ್ಳಕ್ಕೆ ಯಾವುದೇ ಮೂಲವಿಲ್ಲ. ಮಳೆಗಾಲದಲ್ಲಿ ಮಾತ್ರ ಈ ಹಳ್ಳದ ನೀರು ಸಮುದ್ರಕ್ಕೆ ಸೇರುತ್ತದೆ. ಆದರೆ ಹಳ್ಳದ ನೀರಿನ ಒತ್ತಡ ಕಡಿಮೆಯಾದ ನಂತರ ಬೇಸಿಗೆಯಲ್ಲಿ ಸಮುದ್ರದ ಉಪ್ಪು ನೀರು ಒಳನುಗ್ಗುತ್ತದೆ. ಹಾಗೇ ಕಡಲಬ್ಬರದಿಂದಾಗಿ ಸಮುದ್ರ ಮತ್ತು ಹಳ್ಳದ ಸಂಗಮ ಪ್ರದೇಶದಲ್ಲಿ ಉಸುಕಿನ ದಿಬ್ಬ ನಿರ್ಮಾಣಗೊಳ್ಳುತ್ತದೆ. ದಿಬ್ಬ ಕಡಿಯಲು ಸುಮಾರು 15 ರಿಂದ 20 ಜನರು ಇರುತ್ತಾರೆ.

ಹೀಗಾಗಿ ಪ್ರತಿ ಮಳೆಗಾಲದಲ್ಲಿ ಮಳೆ ಸುರಿದಾಗ ನೂರಾರು ಎಕರೆ ಕೃಷಿಭೂಮಿಯಲ್ಲಿ ನೀರು ಸಂಗ್ರಹಗೊಳ್ಳುತ್ತದೆ. ನೀರು ಎಷ್ಟೇ ಸಂಗ್ರಹಗೊಂಡರೂ ಉಸುಕಿನ ದಿಬ್ಬವನ್ನು ಕೊರೆದು ಹೋಗದಷ್ಟು ಗಟ್ಟಿಯಾಗಿರುತ್ತದೆ. ಹೀಗಾಗಿ ಮಳೆ ನೀರು ಕೃಷಿ ಭೂಮಿಯಲ್ಲಿ ಒಂದು ಹಂತದವರೆಗೆ ಏರಿಕೆಯಾದ ನಂತರ ಬೊಬ್ರುವಾಡ ಗ್ರಾ.ಪಂ. ವತಿಯಿಂದ ಆಳುಗಳ ಮೂಲಕ ಸಮುದ್ರ ಮತ್ತು ಹಳ್ಳದ ಸಂಗಮ ಪ್ರದೇಶದಲ್ಲಿನ ದಿಬ್ಬವನ್ನು ಗುದ್ದಲಿಯಿಂದ ಕಡೆಯಲಾಗುತ್ತದೆ. ಆ ಮೂಲಕ ನೀರು ನಿಧಾನವಾಗಿ ಬರಲು ಆರಂಭವಾಗುತ್ತದೆ. ನಂತರ ನೋಡು ನೋಡುತ್ತಿದ್ದಂತೆಯೇ ದಿಬ್ಬವನ್ನು ಪೂಜಗೇರಿ ಹಳ್ಳದ ನೀರು ವೇಗವಾಗಿ ಹರಿಯಲು ಆರಂಭಿಸುತ್ತದೆ.

ಹೀಗೆ ಒಮ್ಮೆ ಆರಂಭವಾದ ನೀರಿನ ಹರಿಯುವಿಕೆ ಮಳೆಗಾಲ ಕಳೆದು ಬೇಸಿಗೆಯಲ್ಲಿ ಹರಿವು ನಿಂತ ನಂತರವೇ ಉಪ್ಪು ನೀರು ಮತ್ತೆ ಒಳನುಗ್ಗಿ ನಿಧಾನವಾಗಿ ದಿಬ್ಬ ನಿರ್ಮಾಣವಾಗಲು ಕಾರಣವಾಗುತ್ತದೆ. ಇದರಿಂದಾಗಿ ಪ್ರತಿವರ್ಷ ಬೊಬ್ರುವಾಡ ಗ್ರಾ.ಪಂ. ವತಿಯಿಂದ ದಿಬ್ಬವನ್ನು ಕಡೆಯಲಾಗುತ್ತದೆ. ಇದಕ್ಕೆ ಸ್ಥಳೀಯವಾಗಿ ಕೋಡಿ ಕಡಿಯುವುದು ಎಂದು ಕರೆಯುತ್ತಾರೆ.

ಬುಧವಾರ ಕೋಡಿ ಕಡೆದಿದ್ದು, ಗುರುವಾರ ಕೃಷಿ ಭೂಮಿಯಲ್ಲಿನ ಎಲ್ಲ ನೀರು ಸಮುದ್ರ ಪಾಲಾಗಿ ಕೃಷಿ ಚಟುವಟಿಕೆಗೆ ಅನುಕೂಲ ಮಾಡಿಕೊಟ್ಟಿದೆ. ಕೃಷಿ ಭೂಮಿಯಲ್ಲಿ ಈಗ ಅಲ್ಲಲ್ಲಿ ಪವರ್ ಟಿಲ್ಲರ್‌ಗಳ ಸದ್ದು ಆರಂಭಗೊಂಡಿದೆ. ಇನ್ನು ಒಂದೆರಡು ದಿನಗಳಲ್ಲಿ ಅಲ್ಲಲ್ಲಿ ಕೃಷಿ ಚಟುವಟಿಕೆ ಕಂಡುಬರಲಿದೆ. ಎಷ್ಟೇ ಮಳೆ ಬಿದ್ದರೂ ಕೂಡ ಕೃಷಿ ಭೂಮಿಯಲ್ಲಿ ನೀರು ನಿಲ್ಲದೇ ಅದು ಪೂಜಗೇರಿ ಹಳ್ಳದ ಮೂಲಕವಾಗಿ ಸಮುದ್ರ ಸೇರುತ್ತದೆ.

## ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜೂ.25–2026–27ನೇಸಾಲಿನಮುಂಗಾರುಹಂಗಾಮಿಗಾಗಿ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (R-WCIS) ಅನುಷ್ಠಾನಕ್ಕೆ ಬಂದಿದ್ದು, ಜಿಲ್ಲೆಯ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ. ಜಿಲ್ಲೆಯ ಪಪ್ಪಾಯಿ, ಹಸಿರು ಮೆಣಸಿನಕಾಯಿ ಮತ್ತು ದ್ರಾಕ್ಷಿ ಬೆಳೆಗಳಿಗೆ ಜಿಲ್ಲೆಯ ಅಫಜಲಪೂರ 22, ಆಳಂದ 15, ಚಿಂಚೋಳಿ 2, ಚಿತ್ತಾಪುರ 1, ಕಲಬುರಗಿ 6, ಜೇವರ್ಗಿ 4 ಹಾಗೂ ಯಡ್ರಾಮಿ ತಾಲೂಕಿನ 10 ಗ್ರಾಮ ಪಂಚಾಯಿತಿ/ನಗರ ಮತ್ತು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ತಾಲೂಕುಗಳು ಬೆಳೆ ವಿಮೆ ಯೋಜನೆಯನ್ನು ಒಳಪಡಿಸಲಾಗಿರುತ್ತದೆ.ವಿಮಾ ಕಂತು ಮತ್ತು ವಿಮಾ ಮೊತ್ತದ ವಿವರ ಪ್ರತಿ ಹೆಕ್ಟೇರ್‌ಗೆ ಹಸಿರು ಮೆಣಸಿನಕಾಯಿ: ವಿಮಾ ಕಂತು 3,550ರೂ.ವಿಮಾ ಮೊತ್ತ 71,000 ರೂ.ಪಪ್ಪಾಯಿ: ವಿಮಾ ಕಂತು 6,700ರೂ.ವಿಮಾ ಮೊತ್ತ 1,34,000 ರೂ.ದ್ರಾಕ್ಷಿ: ವಿಮಾ ಕಂತು 14,000 ರೂ. ವಿಮಾ ಮೊತ್ತ 2,80,000 ರೂ. ಅರ್ಜಿ ಸಲ್ಲಿಸಲು 2026ರ ಜುಲೈ 31 ಕೊನೆಯ ದಿನವಾಗಿದೆ. ಆಸಕ್ತ ರೈತರು ತಮ್ಮ ಹತ್ತಿರದ ಬ್ಯಾಂಕ್, ಗ್ರಾಮ ಒನ್ ಕೇಂದ್ರ ಅಥವಾ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ (CSC)ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ರೈತರು ತಮ್ಮ ತಾಲೂಕಿನ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರನ್ನು, ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಅಥವಾ ಹತ್ತಿರದ ಬ್ಯಾಂಕ್ ಅಧಿಕಾರಿಗಳನ್ನು ಸಂಪರ್ಕಿಸಲು ಕೋರಲಾಗಿದೆ.

# ಕನ್ನಡ ಸಂಸ್ಕೃತಿಯ ವೈಭವ ಅನಾವರಣ ಜನಸಾಗರದ ನಡುವೆ ಸಾಂಸ್ಕೃತಿಕ ಸಂಭ್ರಮ



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೀದರ, ಕಲ್ಯಾಣ ನಾಡು ಗ್ರಾಮೀಣ ಜನಪದ ಕಲಾವೃಂದ ಸಂಘ (ರಿ),ಇವರ ಸಂಯುಕ್ತಾಶ್ರಯದಲ್ಲಿ 2026–27ನೇ ಸಾಲಿನ ಕಲಾನಡಿಗೆ ನಿಮ್ಮ ಬಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ಇಲ್ಲಿನ ಬಿಕೆಡಿಬಿ ರಥ ಮೈದಾನ ಆವರಣದಲ್ಲಿ ನಡೆದ ಕಾರ್ಯಕ್ರಮವನ್ನು ಸಹಾಯಕ ಆಯುಕ್ತರಾದ ಪ್ರಕಾಶ ಕುದರೆ ಉದ್ಘಾಟಿಸಿ ಮಾತನಾಡಿ ಕನ್ನಡ ನಾಡಿನ ಕಲೆ,ಸಾಹಿತ್ಯ ಹಾಗೂ ಜನಪದ ಸಂಸ್ಕೃತಿಯ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು,ಇಂತಹ ಕಾರ್ಯ ಕ್ರಮ ಗಳು ಯುವ ಪೀಳಿಗೆಗೆ ಕನ್ನಡ ಸಂಸ್ಕೃತಿಯ ಮಹತ್ವವನ್ನು ಪರಿಚಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿ ಶರಣ ಸಾಹಿತ್ಯ ಪರಿಷತ ಜಿಲ್ಲಾ ಅಧ್ಯಕ್ಷ ಶಂಭುಲಿಂಗ ಕಾಮಣ್ಣ ಮಾತನಾಡಿ ಸಂಗೀತ ಒಂದು ಅದ್ಭುತವಾದ ಕಲೆ ಈ ಕಲೆಯನ್ನು ನಶಿಸಿ ಹೋಗಲಾರದಂತೆ ಉಳಿಸಿ ಬೆಳೆಸಿಕೊಂಡು ಹೋಗುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಆಗಿದೆ ಎಂದರು. ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಸುಭಾಷಚಂದ್ರ ಎಸ. ನಾಗರಾಳೆ ಮಾತನಾಡಿ ವಿಶ್ವ ಸಂಗೀತ ದಿನಾಚರಣೆ ದಿನದಂದು ಕಲಾ ನಡಿಗೆ ನಿಮ್ಮ ಬಳಿಗೆ ಸಾಂಸ್ಕೃತಿಕ ಕಾರ್ಯ ಕ್ರಮ ಹಮ್ಮಿಕೊಂಡಿದು ನಿಜಕ್ಕೂ ಸಾರ್ಥಕತೆ ಯಾಗಿದೆ ಇಡೀ ಪರಿಸರವೇ ಸಂಗೀತ್ಮಯವಾಗಿದೆ ಗಾಳಿಯಲ್ಲಿ ನೀರಿನಲ್ಲಿ ಗಿಡಮರಗಳಲ್ಲಿ ಪಕ್ಷಿ ಪ್ರಾಣಿಗಳಲ್ಲಿ ಸಂಗೀತ ಅಡಗಿದೆ ಜಗತ್ತೆ ಸಂಗೀತ್ಮಯವಾಗಿದೆ ಅದಕ್ಕೆ ವಿಶ್ವ ಸಂಗೀತ ದಿನಾಚರಣೆ ಮಾಡುತ್ತಾರೆ ಎಂದರು. ಕಲ್ಯಾಣ ನಾಡು ಗ್ರಾಮೀಣ ಜನಪದ ಸಂಘದ ಅಧ್ಯಕ್ಷರಾದ ದಿಲೀಪ ದೇಸಾಯಿ ಸುರೇಕಾಂತ ಬಿರಾದಾರ ಒಳ್ಳೆ ಉತ್ತಮ ಕಲಾವಿದರಾಗಿದ್ದಾರೆ.ಸಂಸ್ಥೆಗೆ ಒಂದು ಹೆಸರು ತಂದಿದ್ದಾರೆ ಇಂತಹ ಸಂಸ್ಥೆ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಜಂಟಿಯಾಗಿ ಕಲಾ ನಡಿಗೆ ನಿಮ್ಮ ಬಳಿಗೆ ಎಂಬ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸಂತೋಷ ತಂದಿದೆ ಎಂದರು ಶರಣ ಸಾಹಿತ್ಯ ಪರಿಷತ ತಾ.ಅಧ್ಯಕ್ಷ ಗುರುನಾಥ ಗಡ್ಡೆ ಮಾತನಾಡಿದರು. ಬೀದರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಸಿದ್ರಾಮ ಸಿಂಧೆ. ಕಲ್ಯಾಣ ನಾಡು ಗ್ರಾಮೀಣ ಜನಪದ ಕಲಾವೃಂದ ಸಂಘದ ಅಧ್ಯಕ್ಷರಾದ ದೀಲಿಪ ದೇಸಾಯಿ. ಪ್ರಾಸ್ತಾವಿಕ ಪ್ರಧಾನ ಕಾರ್ಯದರ್ಶಿ ವೀರಶೆಟ್ಟಿ ಮಲಶೆಟ್ಟೆಯವರು ನೆರವೇರಿಸಿಕೊಟ್ಟರು. ಖಾನಾಪುರದ ಸುರೇಕಾಂತ ಬಿರಾದಾರ ಸುಗಮ ಸಂಗೀತ , ಲಕ್ಷೆಟ್ಟೆ ರೇಖಾ ಕಾಡಾದಿ. ಬಸವರಾಜ ಶಾಸ್ತ್ರಿ, ಶರಣಪ್ಪ ಜಮಾದಾರ, ವಿಠಲ ಡೋಮೇ ಹಾಗೂ ರಾಜಪ್ಪ ಹಲಿಂಗೆ ಸಂಗೀತ ನಡೆಸಿಕೊಟ್ಟರು. ಈಸಂದರ್ಭದಲ್ಲಿ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಕಲಾವಿದರು,ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಾಕ್ಷಿ ಯಾದರು.



**ಬಸವಕಲ್ಯಾಣ :– ಬಸವಾದಿ ಶಿವಶರಣರ ಹಿಂದೂ ಸಮಾವೇಶ ನಡೆಸಲು ಕಲಬುರ್ಗಿಯ ಹೈಕೋರ್ಟ್ ಪೀಠ ಅನುಮತಿ ನೀಡಿದ್ದು ಕನೇರಿ ಶ್ರೀ ಗಳು ಬಸವ ಕಲ್ಯಾಣಕ್ಕೆ ಬರಲು ಅವಕಾಶ ನೀಡಲಾಗಿದೆ ಎಂದು ನಮಗೆ ಸಂದ ಜಯ ಸಮಾವೇಶದ ಕಾರ್ಯಾಧ್ಯಕ್ಷರಾದ ಗುಂಡುರಡ್ಡಿ ಅವರು ಇಲ್ಲಿನ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪಟಾಕಿ ಸಿಡಿಸಿ. ಸಿಹಿ ಹಂಚಿ ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ ಸುನೀಲ ಪಾಟೀಲ. ದೀಪಕ ಗಾಯಕವಾಡ. ಶ್ರೀ ಕಾಂತ. ರಾಮ್ ಜಾದವ್. ದತ್ತು ಬೆಂಡೆ. ಶರಣು ಅಲಗೂಡ. ರವಿ ನೌದಗಿಕರ. ವಿನೋದ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.**

# ಡಿಗ್ಗಿ ಗ್ರಾಮದಲ್ಲಿ ಸೌಹಾರ್ದತೆಯ ಸಂಕೇತ ಪೀರ್ ನವಮಿ ಉತ್ಸವ: ಮನೆ-ಮನೆಯಲ್ಲಿ ವಿಶೇಷ ಪೂಜೆ, ನೈವೇದ್ಯ ಸಲ್ಲಿಕೆ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲೂಕಿನ ಡಿಗ್ಗಿ ಗ್ರಾಮದಲ್ಲಿ ಗುರುವಾರ ಸಾಂಪ್ರದಾಯಿಕ ಹಾಗೂ ಧಾರ್ಮಿಕ ಸೌಹಾರ್ದತೆಯ ಪ್ರತೀಕವಾದ ಒಂಬತ್ತು ದಿನಗಳ 'ಪೀರ್ ನವಮಿ ' (ಪೀರ ಸಾಹೇಬರ) ಉತ್ಸವವು ಅತ್ಯಂತ ಸಡಗರ–ಸಂಭ್ರಮದಿಂದ ಸಂಪನ್ನಗೊಂಡಿತು. ಉತ್ಸವದ ಒಂಬತ್ತನೇ ದಿನದ ಅಂಗವಾಗಿ ಗ್ರಾಮದ ಮನೆ–ಮನೆಗಳಲ್ಲಿ ವಿಶೇಷ ಪೂಜೆ ಮತ್ತು ನೈವೇದ್ಯ ಅರ್ಪಿಸುವ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ಜರುಗಿದವು.ಗ್ರಾಮದ ಪ್ರಮುಖ ಬೀದಿಗಳಲ್ಲಿ ಪೀರರ ಮೆರವಣಿಗೆ ಸಾಗುತ್ತಿದ್ದಂತೆ, ಭಕ್ತರು ತಮ್ಮ ಮನೆಗಳ ಮುಂದೆ ಸಾರಿಸಿ,ರಂಗೋಲಿ ಹಾಕಿ ಸ್ವಾಗತಿಸಿದರು. ಜಾತಿ–ಮತ ಭೇದವಿಲ್ಲದೆ ಗ್ರಾಮಸ್ಥರು ಒಟ್ಟಾಗಿ ಸೇರಿ ಪೀರರಿಗೆ ಧೂಪ–ದೀಪಗಳ ಆರತಿ ಬೆಳಗಿ, ಕಡುಬು, ಮಲಿಧಾ ಹಾಗೂ ವಿವಿಧ ಸಿಹಿ ಪದಾರ್ಥಗಳ ನೈವೇದ್ಯವನ್ನು ಭಕ್ತಿಯಿಂದ ಸಮರ್ಪಿಸಿದರು.ಈ ವೇಳೆ ಅರ್ಜುನ ಪಾಂಚಾಳ ಮಾತನಾಡಿ, ಒಂಬತ್ತು ದಿನಗಳ ಕಾಲ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಒಂಬತ್ತನೇ ದಿನದ ಈ ಪವಿತ್ರ ಮುಕ್ತಾಯದ ಸಂದರ್ಭದಲ್ಲಿ ಗ್ರಾಮಕ್ಕೆ ಯಾವುದೇ ಕಷ್ಟ–ಕಾರ್ಪಣ್ಯಗಳು ಬಾರದಿರಲಿ, ಮಳೆ–ಬೆಳೆ ಚನ್ನಾಗಿ ಆಗಲಿ ಮತ್ತು ಸಕಲ ಜೀವರಾಶಿಗಳಿಗೂ ಒಳಿತಾಗಲಿ ಎಂದು ಪೀರರಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು ಎಂದು ತಿಳಿಸಿದರು.ಗ್ರಾಮದ ಹಿರಿಯರು,ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಈ ಸೌಹಾರ್ದತಾ ಉತ್ಸವವನ್ನು ಯಶಸ್ವಿಗೊಳಿಸಿದರು. ಪರಸ್ಪರ ಪ್ರಸಾದ ವಿತರಿಸಿ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಕಾರ್ಯಕ್ರಮಕ್ಕೆ ತೆರೆಬಿದ್ದಿತು.

# ಸಾಹಿತಿ ದಿವಂಗತ ರುಕ್ಮೋದ್ದಿನ್ ಇಸ್ಲಾಂಪೂರ ಕುರಿತು ಕವನ ಕಳುಹಿಸಲು ಮನವಿ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಬೀದರ ಜಿಲ್ಲಾ ವಲಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕನ್ನಡ ಸಾರಸ್ವತ ಲೋಕಕ್ಕೆ ಅಮೂಲ್ಯವಾದಂತಹ 10 ಕೃತಿಗಳು ಅರ್ಪಿಸಿದ ದಿವಂಗತ ರುಕ್ಮೋದ್ದಿನ್ ಇಸ್ಲಾಂಪೂರ ದಿನಾಂಕ: 02–10–2025 ರಂದು ತುಳಜಾಪೂರಕ್ಕೆ ಪಾದಯಾತ್ರೆ ಮೂಲಕ ತೆರಳುವಾಗ ಪಘಾತಕ್ಕೆ ಇಡಾಗಿ ಸಾವನ್ನೋಪ್ಪಿದ್ದು, ಎಲ್ಲರಿಗೂ ತಿಳಿದಿರುವಂತಹ ವಿಷಯವಾಗಿದೆ ಎಂದು ಸಾಹಿತಿಯಾದ ರಮೇಶ ಬಿರಾದಾರ ತಿಳಿಸಿದ್ದಾರೆ. ಕಲೆ, ಲೇಖಕರು, ಕತೆ ಕಾದಂಬರಿಕಾರರು ಆಗಿರುವಂತಹ ಸ್ನೇಹಿತ ದಿವಂಗತ ರುಕ್ಮೋದ್ದಿನ್ ಇಸ್ಲಾಂಪೂರ ಕುರಿತು ಕವನ ಸಂಕಲನ ಹೊರತರಲು ನಿಚ್ಛೆಯಿಸಲಾಗಿದೆ. ಅವರ ಅಪ್ತಸ್ನೇಹಿತರಾದ ಮಾಣಿಕರೆಡ್ಡಿ,ಓಂಪ್ರಕಾಶ ದಡ್ಡೆ, ಶಕೀಲ್ ಐ.ಎಸ್. ಹಾಗೂ ಕುಟುಂಬಸ್ಥರು ಸೇರಿಕೊಂಡು ಹೀಗಾಗಿ ಬೀದರ ಜಿಲ್ಲೆಯ ನಾಡಿನ ಕವಿಗಳು ದಿವಂಗತ ರುಕ್ಮೋದ್ದಿನ್ ಇಸ್ಲಾಂಪೂರ ಕುರಿತು ಕವನಗಳು ಬರೆದು ಸಾಹಿತಿಗಳಾದ ರಮೇಶ ಬಿರಾದಾರ ರವರಿಗೆ ಜುಲೈ 15ರ ಒಳಗಾಗಿ ಕಳುಹಿಸಿಕೊಡಲು ಕೋರಲಾಗಿದೆ. ಅವರ ವಾಟ್ಸಾಪ್ ನಂಬರ 9241810862ಗೆ ಕಳುಹಿಸಬಹುದು. ಹಾಗೂ ಹೆಚ್ಚಿನ ಮಾಹಿತಿಗಾಗಿ 984451015ಗೆ ಸಂಪರ್ಕಿಸಲು ಸಾಹಿತಿ ರಮೇಶ ಬಿರಾದಾರ ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

# ನೂತನವಾಗಿ ಅಧ್ಯಕ್ಷರಾದ ಶ್ರೀಕಾಂತ ಸುಗಿಗೆ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ಪಟ್ಟಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹುಮನಾಬಾದ ಘಟಕಕ್ಕೆ ನೂತನವಾಗಿ ಅಧ್ಯಕ್ಷರಾದ ಶ್ರೀಕಾಂತ ಸುಗಿ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲ ಶಿಕ್ಷಕರ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಮುರಗೇಂದ್ರ ಸಜ್ಜನಶೆಟ್ಟಿ ಗೌರವಿಸಿ ಮಾತನಾಡಿ ಶ್ರೀಕಾಂತ ಸುಗಿಯವರು ಸುಮಾರು 30 ವರ್ಷಗಳಕಾಲ ಶೈಕ್ಷಣಿಕ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ ಅದರಲ್ಲೂ ಅವರು ಸಾಹಿತಿಗಳು ದಾಸ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಹ ಸೇವೆ ಸಲ್ಲಿಸಿದ್ದಾರೆ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿ, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ ಅತ್ಯಂತ ಶಾಂತ ಸ್ವಭಾವದ ವ್ಯಕ್ತಿತ್ವ ಕಸಾಪ ಅಧ್ಯಕ್ಷರಾಗಿರುವದು ಸಂತಸ ತಂದಿದೆ, ಅವರ ಎಲ್ಲಾ ಕಾರ್ಯಕ್ರಮಗಳಿಗೆ ವಯಕ್ತಿಕವಾಗಿ ಸಹಕಾರಿ ಯಾಗಿರುವೆ



ಎಂದು ನುಡಿದರು, ಅದರಂತೆ ಕಸಾಪ ನೀಕಟಪೂರ್ವ ಅಧ್ಯಕ್ಷರಾದ ಡಾ.ಸಿದ್ಧಲಿಂಗ ನಿರ್ಣಾ ಮಾತನಾಡಿ ನಾನು ಸುಮಾರು 4 ವರ್ಷಗಳ ಕಾಲ ಕಸಾಪ ಜವಾಬ್ದಾರಿ ವಹಿಸಿಕೊಂಡಿರುವೆ ನನ್ನ ಕಾಲಾವಧಿಯಲ್ಲಿ ಕನ್ನಡ ಕಟ್ಟುವ ಸಾಹಿತ್ಯ ಬೆಳೆಸುವ ಕಾರ್ಯ ಮಾಡಿರುವೆ ತಾಲ್ಲೂಕಿನ ಎಲ್ಲಾ ಕನ್ನಡಪರ ಮನಸುಗಳು, ಗೆಳೆಯರ ಬಳಗ, ಕಸಾಪ ಅಜೀವ ಸದಸ್ಯರು, ಅನೇಕ ಸಂಘಟನೆಯ ಅಧ್ಯಕ್ಷರು ಸದಸ್ಯರು, ಕಸಾಪ ಕಾರ್ಯಕಾರಿ ಸಮಿತಿಯ ಸದಸ್ಯರು, ನೀಕಟಪೂರ್ವ ಅಧ್ಯಕ್ಷರು, ಹಿರಿಯರು, ಎಲ್ಲಾ ವಲಯ ಅಧ್ಯಕ್ಷರು, ನಗರ ಘಟಕ,ಮಹಿಳಾ, ಯುವ ಘಟಕ ಅಧ್ಯಕ್ಷರು ನನಗೆ ಸಹಕಾರ ನೀಡಿದ್ದಾರಿ ಎಲ್ಲರಿಗೂ ರುಣಿಯಾಗಿರುವೆ ಹಾಗೆ ಪ್ರಸ್ತುತ ಅಧ್ಯಕ್ಷರಾದ ಶ್ರೀಕಾಂತ ಸುಗಿ ಅವರಿಗು ಸಮಸ್ತ ಕಸಾಪ ಸದಸ್ಯರು ಸಹಕಾರ ನೀಡಬೇಕು ಇನ್ನು ತಾಲ್ಲೂಕಿನಲ್ಲಿ ಕನ್ನಡ ಕಟ್ಟುವ ಹಾಗೂ ಅನೇಕ ಕಾರ್ಯ ಚಟುವಟಿಕೆಗಳು ಅವರಿಂದ ಆಗಲಿ, ನಾನು ಸಹ ಅವರ ಎಲ್ಲಾ ಕಾರ್ಯಗಳಿಗೆ ಕೈ ಜೋಡಿಸುವೆ ಎಂದು ಹೇಳುತ್ತ ನೂತನ ಅಧ್ಯಕ್ಷರಿಗೆ ಶುಭಕೋರಿದರು.

# ಬಡತನದ ಪ್ರತಿಭೆಗೆ ಒಲಿದ ಎಂಬಿಬಿಎಸ್ ಪದವಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಬಡತನದಲ್ಲಿ ಅರಳಿದ ಗ್ರಾಮೀಣ ಪ್ರತಿಭೆಗೆ ಡಾ. ಸಂಗಮೇಶ್ ಟಿ. ಬೇವೂರ್, ಎಂಬಿಬಿಎಸ್ ಪದವಿ ಪಡೆದು ಸಾಧನೆಯ ಶಿಖರವೇರಿದ್ದಾರೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ತರಲಕಟ್ಟಿ ಗ್ರಾಮದ ಬಡತನದ ಕುಟುಂಬದಿಂದ ಬಂದ ಯುವ ಪ್ರತಿಭೆ ಡಾ. ಸಂಗಮೇಶ್ ಟಿ. ಬೇವೂರ್ ಅವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು 1ನೇ ರಿಂದ 5ನೇ ತರಗತಿಯವರೆಗೆ ತರಲಕಟ್ಟಿಯಲ್ಲಿ ಮುಗಿಸಿ. ನಂತರ 6 ರಿಂದ 10ನೇ ತರಗತಿವರೆಗೆ ಬೇವೂರ್ ಮೊರಾರ್ಜಿ ಯಲ್ಲಿ ಮುಗಿಸಿ. ತದನಂತರ 11 ರಿಂದ 12ನೇ ತರಗತಿಯನ್ನು ಭಾಗ್ಯನಗರದ ವಿಜ್ಞಾನ ಸೈನ್ಸ್ ನವಚೇತನ ಕಾಲೇಜನಲ್ಲಿ ಮುಗಿಸಿದರು.

ನಂತರ 2020ರಲ್ಲಿ ನೀಟ್ ಪರೀಕ್ಷೆಯಲ್ಲಿ ಪಾಸಾಗಿ ಎಂಬಿಬಿಎಸ್ ಸೀಟ್ ಗಿಟ್ಟಿಸಿಕೊಂಡು ಬಳ್ಳಾರಿಯ ಮೆಡಿಕಲ್ ಕಾಲೇಜಿನಲ್ಲಿ ಸತತವಾಗಿ 5 ವರ್ಷಗಳ ಕಾಲ ಅಭ್ಯಾಸ ಮಾಡಿ 2026ನೇ ಸಾಲಿನಲ್ಲಿ ಎಂಬಿಬಿಎಸ್ ಪದವಿಯನ್ನು ಪಡೆದುಕೊಂಡಿ–ದ್ದಾರೆ. ಇದಕ್ಕೆ ಅವರ ತಂದೆಯ ತಾಯಿಯವರ ಪರಿಶ್ರಮ ಮುಖ್ಯವಾಗಿದ್ದು, ಪರಿಶ್ರಮ, ಛಲ ಹಾಗೂ ನಿರಂತರ ಪ್ರಯತ್ನದ ಫಲವಾಗಿ ಎಂಬಿಬಿಎಸ್ ವೈದ್ಯಕೀಯ ಪದವಿ ಪಡೆದು ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ.

ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದ ಸಂಗಮೇಶ್ ಅವರು ಬಾಲ್ಯದಿಂದಲೇ ಶಿಕ್ಷಣದ ಮೇಲೆ ಹೆಚ್ಚಿನ ಆಸಕ್ತಿ ಹೊಂದಿದ್ದು, ವೈದ್ಯನಾಗಬೇಕೆಂಬ ಕನಸನ್ನು ಸಾಕಾರಗೊಳಿಸಲು ಹಗಲಿರುಳು ಶ್ರಮಿಸಿದರು. ಹಲವು ಸವಾಲುಗಳನ್ನು ಎದುರಿಸಿ ವೈದ್ಯಕೀಯ ಶಿಕ್ಷಣ ಯಶಸ್ವಿಯಾಗಿ ಪೂರ್ಣಗೊಳಿಸಿ ಇದೀಗ ಡಾಕ್ಟರ್ ಆಗಿ ಹೊರಹೊಮ್ಮಿದ್ದಾರೆ.

ಬಳ್ಳಾರಿ ನಗರದ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಪದವಿ ಪ್ರಧಾನ ಸಮಾರಂಭದಲ್ಲಿ ಡಾ. ಸಂಗಮೇಶ್ ಟಿ. ಬೇವೂರ್ ಅವರಿಗೆ ಎಂಬಿಬಿಎಸ್ ಪದವಿ ಪ್ರಧಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಅವರು ಪದವಿ ಪ್ರಮಾಣ ಪತ್ರವನ್ನು ಸ್ವೀಕರಿಸಿ ತಮ್ಮ ಸಾಧನೆಯ ಕ್ಷಣವನ್ನು ಸಂಭ್ರಮಿಸಿದರು.

ತರಲಕಟ್ಟಿ ಗ್ರಾಮದ ಯುವಕನೊಬ್ಬ ಬಡತನವನ್ನು ಮೆಟ್ಟಿ ನಿಂತು ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವುದು ಗ್ರಾಮಸ್ಥರಲ್ಲಿ ಸಂತಸ ಮತ್ತು ಹೆಮ್ಮೆಯನ್ನು ಮೂಡಿಸಿದೆ. ಅವರ ಸಾಧನೆ ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದು, ಗ್ರಾಮೀಣ ಭಾಗದ ಯುವಕರು ಕೂಡ ದೊಡ್ಡ ಕನಸುಗಳನ್ನು ಕಂಡು ಸಾಧಿಸಬಹುದು ಎಂಬುದಕ್ಕೆ ಉದಾಹರಣೆಯಾಗಿದೆ.

ಡಾ. ಸಂಗಮೇಶ್ ಟಿ. ಬೇವೂರ್ ಅವರ ಮುಂದಿನ ವೈದ್ಯಕೀಯ ಸೇವಾ ಜೀವನ ಯಶಸ್ವಿಯಾಗಲಿ ಎಂದು ಕುಟುಂಬಸ್ಥರು, ಸ್ನೇಹಿತರು ಹಾಗೂ ಗ್ರಾಮಸ್ಥರು ಶುಭ ಹಾರೈಸಿದ್ದಾರೆ.

# ವಾರ್ತಾ ಇಲಾಖೆ ನೂತನ ಆಯುಕ್ತರಿಗೆ ಕೆಯುಡಬ್ಲ್ಯೂಜೆ ಪದಾಧಿಕಾರಿಗಳ ಭೇಟಿ



• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೂತನ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡಿರುವ ಎಂ.ಎನ್.ಅನುಚೇತ್ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ನೇತೃತ್ವದ ಪದಾಧಿಕಾರಿಗಳ ನಿಯೋಗ ಭೇಟಿ ಮಾಡಿ ಶುಭ ಹಾರೈಸಿತು.

ಈ ಸಂದರ್ಭದಲ್ಲಿ ಕೆಯುಡಬ್ಲ್ಯೂಜೆ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ, ರಾಜ್ಯ ಖಜಾಂಚಿ ವಾಸುದೇವ ಹೊಳ್ಳ, ರಾಜ್ಯ ಸಮಿತಿ ಸದಸ್ಯ ದೇವರಾಜು ಮತ್ತಿತರರು ಹಾಜರಿದ್ದರು. ಗ್ರಾಮೀಣ ಪತ್ರಕರ್ತರ ಬಸ್ ಪಾಸ್ ಮತ್ತು ಮಾಧ್ಯಮ ಸಂಜೀವಿನಿ ಯೋಜನೆಯ ಬಗ್ಗೆ ನೂತನ ಆಯುಕ್ತರಿಗೆ ಗಮನ ಸೆಳೆಯಲಾಯಿತು.

ಇದೇ ಸಂದರ್ಭದಲ್ಲಿ ಜುಲೈ 1ರಂದು ನಡೆಯುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.

ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ ಉಪಸ್ಥಿತರಿದ್ದರು.

# ಜು.6 ಶರಣ ಸಾಹಿತ್ಯ ಪರಿಷತ್ತು 32ನೇ ಸರ್ವ ಸದಸ್ಯರ ಸಭೆ

• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ 32ನೇ ಸರ್ವ ಸದಸ್ಯರ ಸಭೆಯನ್ನು ಜುಲೈ ತಿಂಗಳು 6 ಸೋಮವಾರದಂದು ಸಂಜೆ 6:30ಕ್ಕೆ ಬೆಂಗಳೂರಿನ ಶ್ರೀ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಪಟ್ಟಣದ ತಾಲೂಕಾ ಶರಣ ಸಾಹಿತ್ಯ ಪರಿಷತ್ ತಾಲೂಕಾಧ್ಯಕ್ಷರಾದ ನ್ಯಾ. ವೀರಣ್ಣ.ಬ ಮರ್ತುರ ತಿಳಿಸಿದ್ದಾರೆ.

ಪರಿಷತ್ತಿನ ಗೌರವಾಧ್ಯಕ್ಷರಾದ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ನಡೆಯುವ ಈ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆಯನ್ನು ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ ಸೋಮಶೇಖರವರು ವಹಿಸುತ್ತಾರೆ. ತಾಲೂಕಿನ ಗೌರವಾನ್ವಿತ ಸದಸ್ಯರಿಗೆ ಈಗಾಗಲೇ ಪರಿಷತ್ತು ಹೊರ ತರುವ ಮಹಾಮನೆ ಮಾಸಿಕ ಜೂನ್ ಸಂಚಿಕೆ ಮೂಲಕ ಆಮಂತ್ರಣ ನೀಡಲಾಗಿದ್ದು. ಪರಿಷತ್ತು ಅಂಚೆ ಮೂಲಕ ಸದಸ್ಯರಿಗೆ ಆಮಂತ್ರಣ ಪತ್ರಿಕೆ ಕೂಡ ಕಳುಹಿಸಲಿದ್ದಾರೆ. ಸಕಾಲಕ್ಕೆ ಆಮಂತ್ರಣ ಪತ್ರ ತಲುಪದೇ ಇದ್ದ ಪಕ್ಷದಲ್ಲಿ ಈ ಪ್ರಕಟಣೆಯನ್ನೇ ಆಮಂತ್ರಣವೆಂದು ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕೇಂದ್ರ ಪರಿಷತ್ತು ಪರವಾಗಿ ಈ ಮೂಲಕ ಕೋರಿದ್ದಾರೆ.

ಸಭೆಗೆ ಆಗಮಿಸುವವರು ಸೋಮಶೇಖರ ಶಿಗಾಂಜಿ(7019477190), ಶ್ರೀಶೈಲಪಟ್ಟಣಶೆಟ್ಟಿ(9448649522)ಹಾಗೂ ವಿ ಪುಟ್ಟರಾಜು(9972875878) ಇವರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

# ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್‌ರೆಡ್ಡಿ ಅವರಿಗೆ ಸ್ವಾಗತ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ತುಂಗಭದ್ರಾ ಅಣೆಕಟ್ಟಿನ ಎಲ್ಲಾ 33 ಹೊಸ ಕ್ರಸ್ಟ್ ಗೇಟ್‌ಗಳ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವ ನಿಮಿತ್ತ, ಮುನಿರಬಾದ್ ರಿಸರ್ವ್ ಪೊಲೀಸ್ ಕವಯಾತು ಮೈದಾನದಲ್ಲಿನ ಹೆಲಿಪ್ಯಾಡ್‌ಗೆ ಗುರುವಾರ (ಜೂ. 25ರಂದು) ಬಂದಿಳಿದ ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್‌ರೆಡ್ಡಿ ಅವರಿಗೆ ಕೊಪ್ಪಳ ಜಿಲ್ಲಾಡಳಿತ ವತಿಯಿಂದ ಸ್ವಾಗತಿಸಲಾಯಿತು.

ಎ.ರೇವಂತ್ ರೆಡ್ಡಿ ಅವರೊಂದಿಗೆ ತೆಲಂಗಾಣ ನೀರಾವರಿ ಇಲಾಖೆ ಸಚಿವ ಎನ್.ಉತ್ತಮ್ ಕುಮಾರ್ ರೆಡ್ಡಿ ಸಹ ಆಗಮಿಸಿದ್ದರು. ಈ ವೇಳೆ ಶಾಸಕರಾದ ಬಸವರಾಜ ರಾಯರೆಡ್ಡಿ, ವಿಧಾನ ಪರಿಷತ್ ಶಾಸಕರಾದ ಶರ–ಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪುರ, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಂ, ಕೊಪ್ಪಳ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಹೇಮಂತಕುಮಾರ್ ಸೇರಿದಂತೆ ಹಲವು ಜನಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಜೂ. 29, 30ರಂದು ಇಟಗಿ ಆದರ್ಶ ವಿದ್ಯಾಲಯದಲ್ಲಿ 6ನೇ ತರಗತಿ ಖಾಲಿ ಉಳಿದಿರುವ ಸೀಟುಗಳಿಗೆ ಕೌನ್ಸಿಲಿಂಗ್

• ಮಲ್ಲಮ್ಮ ನುಡಿ ವಾರ್ತೆ ಕುಕನೂರ




ತಾಲೂಕಿನ ಇಟಗಿ ಗ್ರಾಮದ ಪಿಎಂ ಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಇದೇ ತಿಂಗಳು ಜೂನ್ 29 ಹಾಗೂ 30 ರಂದು 6ನೇ ತರಗತಿ ಖಾಲಿ ಉಳಿದಿರುವ ಸೀಟುಗಳಿಗೆ ಕೌನ್ಸಿಲಿಂಗ್ ಮೂಲಕ ತುಂಬಿಕೊಳ್ಳಲಾಗುವುದು, ಈಗಾಗಲೇ 6ನೇ ತರಗತಿ ದಾಖಲಾತಿಗಳು ಮುಗಿದಿದ್ದು ಇನ್ನೂ 24 ಸೀಟುಗಳು ಖಾಲಿ ಉಳಿದಿರುತ್ತವೆ, ಅದರಿಂದಾಗಿ 1:30 ಅನುಪಾತದಲ್ಲಿ ಒಂದು ಸೀಟಿಗೆ 30 ವಿದ್ಯಾರ್ಥಿಗಳನ್ನು ಕೌನ್ಸಿಲಿಂಗ್ ಮಾಡಲಾಗುತ್ತದೆ, 29 –6– 2026 ರಂದು ಸಾಮಾನ್ಯ ವರ್ಗ ಕೌನ್ಸಿಲಿಂಗ್ ನಡೆಯುತ್ತದೆ ಹಾಗೂ 30–6–2026 ರಂದು ಎಸ್ ಸಿ, ಎಸ್ ಟಿ,ಪ್ರವರ್ಗ 1,2ಬಿ, ಎರಡು ದಿನ ಬೆಳಗ್ಗೆ 10 ರಿಂದ ಕೌನ್ಸಿಲಿಂಗ್ ಪ್ರಾರಂಭವಾಗುವುದು. ವಿದ್ಯಾರ್ಥಿಗಳು ಪಾಲಕರು, ಅರ್ಜಿ ಹಾಕಿರುವ ಪ್ರತಿಯ ಜೆರಾಕ್ಸ್, ಪರೀಕ್ಷೆ ಬರೆದಿರುವ ಪ್ರವೇಶ ಪತ್ರ, ಆಧಾರ ಕಾರ್ಡ್, ಜಾತಿ, ಹಾಗೂ ಆದಾಯ ಪ್ರಮಾಣ ಪತ್ರ, ಜೆರಾಕ್ಸ್ ಪ್ರತಿಗಳನ್ನು ದಾಖಲೆಗಳನ್ನು ತರಬೇಕು, ಬೇರೆ ತಾಲೂಕುಗಳಾಗಿದ್ದರೆ ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರವನ್ನು ತರತಕ್ಕದ್ದು.

1:30 ಅನುಪಾತದಲ್ಲಿ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯದಲ್ಲಿ ಮಾಹಿತಿ ಪ್ರಕಟಿಸಲಾಗುವುದೆಂದು. ಇಟಗಿ ಗ್ರಾಮದ ಪಿಎಂಶ್ರೀ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯ ರಾಮರಡ್ಡೆಪ್ಪ ಹಾಲಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಎಂಗೆ ಕಡಗ ಪ್ರಸಂಗ:ತೇಜೋವಧೆಯಲ್ಲಿ ತೊಡಗಿದ ಮಾಧ್ಯಮಗಳು ಆರೋಪ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕಡಗ ತೊಡಿಸಿದ ಪ್ರಸಂಗವನ್ನೇ ಮುಂದಿಟ್ಟುಕೊಂಡು ಕೆಲವು ಕೊಳಕು ಮನಸ್ಥಿತಿಗಳು ನನ್ನ ಕ್ಷೇತ್ರದಲ್ಲಿ ಒಕ್ಕಲಿಗರು ಮತ್ತು ಕುರುಬರ ನಡುವೆ ಎತ್ತಿ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಇದರ ಸುಪಾರಿ ಪಡೆದಿರುವ ಕೆಲ ಸಾಮಾಜಿಕ ಮಾಧ್ಯಮಗಳು ನನ್ನ ವೈಯಕ್ತಿಕ ತೇಜೋವಧೆಯಲ್ಲಿ ತೊಡಗಿವೆ ಎಂದು ಹುಣಸೂರಿನ ಮಾಜಿ ಶಾಸಕ ಸ್ನೇಹಜೀವಿ ಹೆಚ್.ಪಿ.ಮಂಜುನಾಥ್ ಆರೋಪಿಸಿದ್ದಾರೆ.

ನಗರದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಮತ್ತು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರಿಗೆ ಪ್ರೀತಿ ಪೂರ್ವಕವಾಗಿ ಚಿನ್ನ ಲೇಪಿತ ಬೆಳ್ಳಿ ಕಗಡವನ್ನು ತೊಡಿಸಿ ಶುಭಕೋರಿದ್ದೇನೆ ಎಂದು ಸ್ಪಷ್ಟಪಡಿಸಿದರು.

## ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ



**ಬಾಗಲಕೋಟೆ:** ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಬಾಯಿ ಆರೋಗ್ಯ ಕಾರ್ಯಕ್ರಮ , ಜಿಲ್ಲಾ ಎನ್‌ಸಿಡಿ ಹಾಗೂ ಎನ್‌ಟಿಸಿಪಿ ಘಟಕ ಮತ್ತು ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯ ಇವರ ಸಹಯೋಗದಲ್ಲಿ ತಂಬಾಕು ಪದಾರ್ಥ ಸೇವನೆಯ ದುಷ್ಪರಿಣಾಮಗಳ ಕುರಿತು ಅರಿವು ಕಾರ್ಯಕ್ರಮ ಹಾಗೂ ಆರೋಗ್ಯ ತಪಾಸಣೆ ಶಿಬಿರ ನವನಗರದ ನಗರಸಭೆ ಸಭಾಂಗಣದಲ್ಲಿ ಗುರುವಾರ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾ ಸಮೀಕ್ಷಣಾಧಿಕಾರಿ ಡಾ. ದಯಾನಂದ ಕರೆಯನ್ನವರ, ತಂಬಾಕು ಸೇವನೆ ದೈಹಿಕ ಹಾಗೂ ಮಾನಸಿಕ ಅವಲಂಬನೆಯನ್ನು ಉಂಟುಮಾಡಿ ವ್ಯಕ್ತಿಯನ್ನು ವ್ಯಸನಿಯಾಗಿಸುತ್ತದೆ ಎಂದು ಹೇಳಿದರು.

ತಂಬಾಕಿನಲ್ಲಿ ಸಾವಿರಾರು ವಿಷಕಾರಿ ರಾಸಾಯನಿಕಗಳಿದ್ದು ಅವು ಕ್ಯಾನ್ಸರ್ ಸೇರಿದಂತೆ ಹಲವು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತವೆ ಎಂದು ಅವರು ತಿಳಿಸಿದರು.

ನಗರಸಭೆ ನೋಡಲ್ ಅಧಿಕಾರಿ ಡಾ.ಜಯಂತ ಮಾತನಾಡಿ, ಬಾಯಿ ಆರೋಗ್ಯವು ದೇಹದ ಒಟ್ಟಾರೆ ಆರೋಗ್ಯದ ಪ್ರತಿಬಿಂಬವಾಗಿದೆ. ತಂಬಾಕು ಸೇವನೆಯಿಂದ ಬಾಯಿ ಕ್ಯಾನ್ಸರ್ ಸೇರಿದಂತೆ ವಿವಿಧ ರೀತಿಯ ಕ್ಯಾನ್ಸರ್‌ಗಳ ಅಪಾಯ ಹೆಚ್ಚಾಗುತ್ತದೆ. ಆರಂಭಿಕ ಹಂತದಲ್ಲೇ ತಪಾಸಣೆ ನಡೆಸಿದರೆ ಕ್ಯಾನ್ಸರ್‌ನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಶಿಬಿರದಲ್ಲಿ ನಗರಸಭೆಯ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು. ಎಲ್ಲಾ ದಂತ ವೈದ್ಯಾಧಿಕಾರಿಗಳು ಆರೋಗ್ಯ ತಪಾಸಣೆಯಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಡಾ.ಗೀತಾ, ಡಾ. ಎ.ವಿ. ಪಾಟೀಲ, ಜಿಲ್ಲಾ ತಂಬಾಕು ಸಲಹೆಗಾರ ಶಶಿಕಾಂತ ಕುಮಟಳ್ಳಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮಾರುತಿ ನಡುವಿನಕೇರಿ, ಎಚ್.ಪಿ. ನಾಯ್ಕರ ಹಾಗೂ ಆರೋಗ್ಯ ಇಲಾಖೆ ಮತ್ತು ನಗರಸಭೆಯ ಸಿಬ್ಬಂದಿ ಉಪಸ್ಥಿತರಿದ್ದರು.

## ಮಳೆ ಕೊರತೆ: ಒಣಗುತ್ತಿವೆ ಬೆಳೆಗಳು, ಕೃಷಿ ಸಂಕಷ್ಟ



**ಸಿಂಧನೂರು:** ಜೂ.25.2026ನೇ ಸಾಲಿನ ನೈರುತ್ಯ ಮುಂಗಾರು ರಾಜ್ಯದ ಪಾಲಿಗೆ ಮರೀಚಿಕೆಯಾಗಿದೆ. ಕರಾವಳಿ ಮತ್ತು ಮಲೆನಾಡು ಭಾಗಗಳನ್ನು ಹೊರತುಪಡಿಸಿದರೆ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯ ಕೊರತೆ ಎದ್ದು ಕಾಣುತ್ತಿದ್ದು, ರೈತರ ಬದುಕು ಅತಂತ್ರವಾಗಿದೆ. ಬಿತ್ತನೆ ಮಾಡಿದ ಬೆಳೆಗಳು ಮೊಳಕೆಯಲ್ಲೇ ಬಾಡುತ್ತಿರುವುದು ರೈತ ಸಮುದಾಯವನ್ನು ಆತಂಕಕ್ಕೆ ತಳ್ಳಿದೆ.

**ಜಲಾಶಯಗಳಲ್ಲಿ ತಳಸೇರಿದ ನೀರು**

ಮುಂಗಾರಿನ ವೈಫಲ್ಯದಿಂದಾಗಿ ರಾಜ್ಯದ ಜೀವನಾಡಿಗಳಾದ ತುಂಗಭದ್ರಾ, ಕೃಷ್ಣಾ ಮತ್ತು ಆಲಮಟ್ಟಿ ಸೇರಿದಂತೆ ಪ್ರಮುಖ ಜಲಾಶಯಗಳಲ್ಲಿ ನೀರಿನ ಸಂಗ್ರಹ ಮಟ್ಟ ಸಾಮಾನ್ಯ ವರ್ಷಗಳಿಗಿಂತ ಗಣನೀಯವಾಗಿ ಕುಸಿದಿದೆ. ಇದು ಮುಂಬರುವ ದಿನಗಳಲ್ಲಿ ಕುಡಿಯುವ ನೀರು ಮತ್ತು ನೀರಾವರಿ ಎರಡಕ್ಕೂ ಭೀಕರ ಬರಗಾಲದ ಭೀತಿಯನ್ನು ಹುಟ್ಟುಹಾಕಿದೆ.

**ಬೀಜ-ಗೊಬ್ಬರ ಹಾಕಿದ ರೈತ, ಕೈಗೆ ಬಾರದ ಬೆಳೆ**

ಹತ್ತಿ, ಭತ್ತ, ದ್ವಿದಳ ಧಾನ್ಯಗಳು ಮತ್ತು ಸಿರಿಧಾನ್ಯಗಳ ಬಿತ್ತನೆ ಪ್ರಕ್ರಿಯೆ ಈಗಾಗಲೇ ಹಿನ್ನಡೆಯನ್ನು ಕಂಡಿದೆ. ಉಳುಮೆ, ಬಿತ್ತನೆ ಬೀಜ, ರಸಗೊಬ್ಬರಕ್ಕಾಗಿ ಕೈಸಾಲ ಮಾಡಿ ಹಣ ಹೂಡಿಕೆ ಮಾಡಿದ್ದ ರೈತರು, ಈಗ ಬೆಳೆ ಒಣಗುತ್ತಿರುವುದನ್ನು ಕಂಡು ಕಂಗಾಲಾಗಿದ್ದಾರೆ. ಅಷ್ಟೇ ಅಲ್ಲದೆ, ತೇವಾಂಶದ ಕೊರತೆಯಿಂದ ಬೆಳೆಗಳಿಗೆ ಕೀಟಬಾಧೆಯೂ ಹೆಚ್ಚಾಗಿದ್ದು, ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಆರಂಭದಲ್ಲೇ ಬೆಳೆ ಒಣಗುತ್ತಿದ್ದು, ಬೆಳೆ ವಿಮೆಯ ಸೌಲಭ್ಯವೂ ಸಮರ್ಪಕವಾಗಿ ಸಿಗುವುದಿಲ್ಲ. ಮಾಡಿದ ಸಾಲವನ್ನು ತೀರಿಸುವುದು ಹೇಗೆ?" ಎಂದು ರೈತರು ಅಳಲು ತೋಡಿಕೊಳ್ಳುತ್ತಿದ್ದಾರೆ.

ತಾಲೂಕಿನ ರಾಗಲಪರ್ವಿ, ಗೊನ್ವಾರ್, ಹುಲಗುಂಚಿ, ಆಯನೂರ್, ರಾಮತ್ನಾಳ, ಯಾಪಲ್ಪರ್ವಿ, ವಲ್ಕಮಂದಿನ್ನಿ, ಪುಲದಿನ್ನಿ, ಹೆಡಗಿನಾಳ, ಯದ್ದಲದೊಡ್ಡಿ, ಬನ್ನಿಗನೂರು, ಬಳಗನೂರು, ದಿದ್ದಿಗಿ, ಕಲ್ಮಂಗಿ, ಉಮ್ಮಲೂಟಿ, ಒಳಬಳ್ಳಾರಿ, ಅಲಬನೂರು, ಬೆಳಗುರ್ಕಿ, ಗೋಮರ್ಸಿ, ಚಿಕ್ಕಲಪರ್ವಿ ಮತ್ತು ಮಾಡಿಸಿರವಾರ ಸೇರಿದಂತೆ ಥೈಲ್ಯಾಂಡ್ ಹೊಂದಿದ ಹಲವಾರು ಹಳ್ಳಿಗಳಲ್ಲಿ ಹತ್ತಿ, ಸೂರ್ಯಕಾಂತಿ, ಗುರೆಳ್ಳು ಮತ್ತು ಜೋಳದ ಬೆಳೆಗಳು ಸಂಪೂರ್ಣ ಒಣಗುವ ಹಂತ ತಲುಪಿವೆ.

ಕೃಷಿ ಚಟುವಟಿಕೆಗಳು ಕುಂಟುತ್ತಾ ಸಾಗುತ್ತಿರುವ ಈ ಸಂದರ್ಭದಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೃಷಿಯನ್ನು ಅತ್ಯಂತ ಆದ್ಯತೆಯ ವಿಷಯವನ್ನಾಗಿ ಪರಿಗಣಿಸಬೇಕಿದೆ. ಕೃಷಿ ಇಲಾಖೆ ಕೂಡಲೇ ಸಮೀಕ್ಷೆ ನಡೆಸಿ, ನಷ್ಟಕ್ಕೊಳಗಾದ ರೈತರಿಗೆ ತ್ವರಿತ ಪರಿಹಾರ ಒದಗಿಸಬೇಕು ಮತ್ತು ಸಾಲದ ಸುಳಿಯಲ್ಲಿ ಸಿಲುಕಿರುವ ಅನ್ನದಾತರಿಗೆ ಬೆಂಬಲ ನೀಡಬೇಕೆಂಬುದು ರೈತರ ಆಗ್ರಹವಾಗಿದೆ.

ಕೃಷಿ ಚಟುವಟಿಕೆಗಳು ಕುಂಠಿತಗೊಂಡಿರುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಿಲ್ಲದಂತಾಗಿದೆ. ಇನ್ನು, ಅಗತ್ಯ ವಸ್ತುಗಳ ಬೆಲೆ ಏರಿಕೆಯು ಬಡವರ ತಟ್ಟೆಯನ್ನು ಖಾಲಿ ಮಾಡುತ್ತಿದೆ. ಗಗನಕ್ಕೇರಿರುವ ಎಲ್.ಪಿ.ಜಿ ಗ್ಯಾಸ್ ಮತ್ತು ದಿನಬಳಕೆಯ ವಸ್ತುಗಳ ಬೆಲೆಯಿಂದಾಗಿ ಕೂಲಿ ಕಾರ್ಮಿಕರ ಕುಟುಂಬಗಳು ಹಸಿವಿನ ಅಂಚಿಗೆ ಬಂದು ತಲುಪಿವೆ. ದುಡಿಯುವ ಕೈಗಳಿಗೆ ಕೆಲಸವಿಲ್ಲ, ಕೈಯಲ್ಲಿದ್ದ ಹಣ ಮಾರುಕಟ್ಟೆಯ ಬೆಲೆ ಏರಿಕೆಗೆ ಬಲಿಯಾಗುತ್ತಿದ್ದು, ಸಕಾಲದಲ್ಲಿ ಸ್ಪಂದನೆ ಸಿಗದಿದ್ದರೆ, ರಾಜ್ಯದ ಗ್ರಾಮೀಣ ಆರ್ಥಿಕತೆ ಈ ವರ್ಷ ಭಾರಿ ಸಂಕಷ್ಟವನ್ನು ಎದುರಿಸಲಿದೆ ಎಂಬುದು ಪ್ರಜ್ಞಾವಂತರ ಅಭಿಪ್ರಾಯವಾಗಿದೆ.

# ದೌರ್ಜನ್ಯ ಪ್ರಕರಣ ತ್ವರಿತ ತನಿಖೆಗೆ ಡಿಸಿ ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಪ್ರಕರಣಗಳ ತನಿಖೆಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ, ತಪ್ಪಿತಸ್ಥರ ವಿರುದ್ದ ಕಾನೂನು ಕ್ರಮಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಜಾಗೃತಿ ನಿಯಂತ್ರಣ ಹಾಗೂ ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೌರ್ಜನ್ಯ ಪ್ರಕರಣದಡಿ ಪ್ರಾರಂಭದಿಂದ ಇಲ್ಲಿಯವರೆಗೆ ಒಟ್ಟು 196 ಪ್ರಕರಣಗಳ ಪೈಕಿ 46 ಬಿಡುಗಡೆಯಾಗಿದ್ದು, ಅದರಲ್ಲಿ 19 ಪ್ರಕರಣಗಳಿಗೆ ಶಿಕ್ಷೆಯಾಗಿತ್ತವೆ. 83 ಪ್ರಕರಣ ವಿಲೇವಾರಿಯಾಗಿದ್ದು, 113 ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಉಳಿದಿವೆ. ಪೊಲೀಸ್ ಠಾಣೆಯಲ್ಲಿ 2025-26ನೇ ಸಾಲಿನಲ್ಲಿ 73, 2026-27ನೇ ಸಾಲಿನಲ್ಲಿ25 ಪ್ರಕರಣಗಳು ದಾಖಲಾಗಿರುತ್ತವೆ ಎಂದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನಿಗಮದಲ್ಲಿ 2023-24ನೇ ಸಾಲಿನಿಂದ ಯಾವುದೇ ಬೋರವೆಲ್ ಕೊರೆಯಲು ಟೆಂಡರ್ ಆಗಿರುವದಿಲ್ಲವೆಂದು ಸಂಬಂಧಿಸಿದ ನಿಗಮದ ಅಧಿಕಾರಿಗಳು ಸಭೆಗೆ ತಿಳಿಸಿದಾಗ ಜಿಲ್ಲೆಯಲ್ಲಿ ಬೋರ್‌ವೆಲ್ ಕೊರೆಯುವ ಕೆಲಸವಾಗುತ್ತಿಲ್ಲ. ಕೇಳಿದರೆ ರಾಜ್ಯ ಮಟ್ಟದಲ್ಲಿ ಟೆಂಡರ್ ಆಗಲ್ಲವೆಂದು ಅಧಿಕಾರಿಗಳು ಹೇಳಿ ಕುಳಿತರೆ ಸಾಲದು. ಯೋಜನೆಗಳ ಅನುಷ್ಠಾನಕ್ಕೆ ನಿರಂತರ ಕೇಂದ್ರ ಕಚೇರಿ ಹಂತದಲ್ಲಿ ನಡೆಯುವ ವಿಷಯಗಳ ಬಗ್ಗೆ ಗಮನಹರಿಸಬೇಕು. ಅಂ-ದಾಗ ಮಾತ್ರ ಕೆಲಸಗಳು ಆಗಲು ಸಾಧ್ಯವಾಗುತ್ತವೆ ಎಂದು ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅಧಿಕಾರಿಗಳಿಗೆ ತಿಳಿಸಿದರು.



ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಸ್ಮಶಾನದ ಬಗ್ಗೆ ಸಭೆಗೆ ಸಮಿತಿ ಸದಸ್ಯರು ತಿಳಿಸಿದಾಗ ಈ ವಿಷಯದ ಬಗ್ಗೆ ಮಾತನಾಡಿದ ಬಾಗಲಕೋಟೆ ಶಾಸಕ ಉಮೇಶ ಮೇಟಿ ಅವರು, ಈ ಬಗ್ಗೆ ಪರಿಶೀಲಿಸುವುದಾಗಿ ಹೇಳುತ್ತಾರೆ ಹೊರತು ಯಾವುದೇ ಕೆಲಸಗಳು ಆಗುತ್ತಿಲ್ಲ. ಇದರಿಂದ ತುಂಬಾ ಸಮಸ್ಯೆಯಾಗಿತ್ತಿದೆ ಎಲ್ಲಿ ಸ್ಮಶಾನಗಳು ಇರುವದಿಲ್ಲ, ಅವುಗಳ ಪಟ್ಟಿಯನ್ನು ಪಡೆದು-ಕೊಂಡು ಸಮಾಜ ಕಲ್ಯಾಣ ಇಲಾಖೆ, ತಹಶೀಲ್ದಾರ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ನಗರ ಸ್ಥಳೀಯ ಸಂಸ್ಥೆ ಹಾಗೂ ಗ್ರಾಮ ಪಂಚಾಯತ ಮಟ್ಟದ ಅಧಿಕಾರಿಗಳ ಸಮನ್ವಯದೊಂದಿಗೆ ಸ್ಮಶಾನ ನಿರ್ಮಾಣಕ್ಕೆ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ನಗರ ಸ್ಥಳೀಯ ಸಂಸ್ಥೆ ಹಾಗೂ ವಿವಿಧ ಇಲಾಖೆಗಳಿಗೆ ಎಸ್‌ಸಿಪಿ, ಟಿಎಸ್‌ಪಿಗಳಿಗೆ ಮೀಸಲಿಟ್ಟ ಅನುದಾನ ಸಮರ್ಪಕ ಬಳಕೆಯಾಗಬೇಕು. ಬಳಕೆಯಾದ ಅನುದಾನ ಸದ್ಬಳಕೆಯಾಗುವಂತಹ ಕೆಲಸಗಳು ಆಗಬೇಕು ಎಂದು ತಿಳಿಸಿದರು.

ಸಮಿತಿ ಸದಸ್ಯರಿಂದ ಬಂದ ಅನುದಾನ ದುರ್ಬಳಕೆ, ಚರಂಡಿ ನೀರು ನಿಲ್ಲುವುದು, ಕುಂದು ಕೊರತೆ ಸಭೆ ಮಾಡದೇ ಇರುವುದು, ಡಕ್ಕಲಿಗ ಜನಾಂಗದವರಿಗೆ ನಿವೇಶನ ಮಂಜೂರು, ಜಮೀನುಗಳಿಗೆ ದಾರಿ, ಶಾಲೆಯಲ್ಲಿ ಶೌಚಾಲಯ ನಿರ್ಮಾಣ ಸೇರಿದಂತೆ ಇತರೆ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು. ಕಳೆದ 2025-26ನೇ ಸಾಲಿನಲ್ಲಿ 73 ದೌರ್ಜನ್ಯ ಪ್ರಕರಣಗಳಿಗೆ ಒಟ್ಟು 1.28 ಕೋಟಿ ರೂ.ಗಳ ಪರಿಹಾರ ನೀಡಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಜಿ.ಪಂ ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎ.ಜಿ.ಮನ್ನಿಕೇರಿ, ನಗರಾಭಿವೃದ್ದಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ ಸೇರಿದಂತೆ ಉಸ್ತುವಾರಿ ಸಮಿತಿಯ ಸದಸ್ಯರಾದ ಯಮನಪ್ಪ ಪೂಜಾರ, ಶಿವಾನಂದ ಮಾದರ, ಫಕೀರಪ್ಪ ಮಾದರ, ಬಸವರಾಜ ಪಾತ್ರೋಟ, ಗೋವಿಂದಪ್ಪ ಕೌಲಗಿ, ದ್ಯಾಮಣ್ಣ ಗಾಳಿ ಶ್ರೀಕಾಂತಗೌಡ ಗೌಡರ, ಅಕ್ಬರಸಾಬ ಹಾಗೂ ಇತರರು ಉಪಸ್ಥಿತರಿದ್ದರು.

# ತಾಯಿಯ ಹೆಸರಲ್ಲಿ ಸಸಿ ನೆಟ್ಟು ಪೋಷಿಸಬೇಕು: ಡಾ.ಶೇಖರ ಮಾನೆ

• **ಮಲ್ಲಮ್ಮ ನುಡಿ ವಾರ್ತೆ ಶಿರೂರು**

ಬಾಗಲಕೋಟೆ ತಾಲೂಕಿನ ಶಿರೂರು ಗ್ರಾಮದಲ್ಲಿ ಓಂಕಾರ್ ಮಾನೆ ಫೌಂಡೇಶನ್ ವತಿಯಿಂದ ಪ್ರಧಾನಿಗಳಾದ ನರೇಂದ್ರ ಮೋದಿ ಅವರ ಆಶಯದಂತೆ ಒಂದು ಮರ ತಾಯಿಯ ಹೆಸರಿನ ಮೇಲೆ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಅಭಿಯಾನದ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ ಅವರು ನೆರವೇರಿಸಿದರು, ಅವರು ಕೂಡಾ ಅಭಿಯಾನದಲ್ಲಿ ಸಸಿ ನೆಡುವ ಮೂಲಕ ಭಾಗವಹಿಸಿದರು, ನಂತರ ಮಾತನಾಡಿದ ಅವರು ಇಂದು ನಾವೆಲ್ಲರೂ ಮೊಬೈಲ್ ಯುಗದಲ್ಲಿ ಜೀವನ ನಡೆಸುತ್ತಿದ್ದೀವಿ ಆದರೆ ಪರಿಸರ ಸಂರಕ್ಷಣೆ ಮರೆಯುತ್ತಿದ್ದೇವೆ, ಹೆಮ್ಮೆಯ ಪ್ರಧಾನಿಗಳಾದ ನರೇಂದ್ರ ಮೋದಿ ಅವರ ಈ ಅಭಿಯಾನ ಪರಿಸರ ಸಂರಕ್ಷಣೆ ಜೊತೆಗೆ ಸಮಾಜವನ್ನು ಭಾವನಾತ್ಮಕ ಬೆಸೆಯುತ್ತಿದ್ದೆ ಈ ನಿಟ್ಟಿನಲ್ಲಿ ಓಂಕಾರ್ ಮಾನೆ ಫೌಂಡೇಶನ್ ಅವರು ಪ್ರತಿ ಗ್ರಾಮ ಗ್ರಾಮಗಳಿಗೆ ಈ ಅಭಿಯಾನವನ್ನು ತಲುಪಿಸುತ್ತಿರುವ ಈ ಕಾರ್ಯ ಶ್ಲಾಘನೀಯ ಎಂದರು.



ಓಂಕಾರ್ ಮಾನೆ ಫೌಂಡೇಶನ್ ಅದ್ಯಕ್ಷರಾದ ಡಾ.ಶೇಖರ್ ಮಾನೆ ಮಾತನಾಡಿ ಸಣ್ಣದಾಗಿ ಶುರುವಾದ ಈ ಅಭಿಯಾನಕ್ಕೆ ಸಿಕ್ಕ ಸ್ಪಂದನೆ ನಿಜಕ್ಕೂ ನಮಗೆ ಖುಷಿ ನೀಡಿದೆ, ಪ್ರತಿಯೊಬ್ಬರು ಪ್ರಧಾನಿಗಳಾದ ನರೇಂದ್ರ ಮೋದಿ ಅವರ ಆಶಯದಂತೆ ತಮ್ಮ ತಾಯಿಯ ಹೆಸರಿನಲ್ಲಿ ಸಸಿ ನೆಟ್ಟು ಅದನ್ನು ಪೋಷಿಸಿ ಬೆಳಸಬೇಕು, ಶಿರೂರು ಗ್ರಾಮದಲ್ಲಿ ನಡೆದ ಈ ಅಭಿಯಾನಕ್ಕೆ ಸಿಕ್ಕ ಈ ಜನಸ್ಪಂದನೆ ನೋಡಿ ಖುಷಿಯಾಗಿದೆ, ಇನ್ನೂ ಅನೇಕ ಜನರು ಈ ಅಭಿಯಾನದಲ್ಲಿ ಜೊತೆಯಾಗುವ ಇಂಗಿತವನ್ನು ವ್ಯಕ್ತಿಪಡಿಸುತ್ತಿದ್ದಾರೆ, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಈ ಅಭಿಯಾನವನ್ನು ಬಾಗಲಕೋಟೆ ತಾಲೂಕಿನಲ್ಲಿ ಹಮ್ಮಿಕೊಳ್ಳಲಾಗುವುದು ಎಂದರು.

ಏಕ್ ಪೇಡ್ ಮಾ ಕೇ ನಾಮ್ ಅಭಿಯಾನದಡಿ ಮನೆ ಮನೆಗಳಲ್ಲಿ ಸಸಿಗಳನ್ನು ನೆಟ್ಟು ಅದನ್ನು ಪೋಷಿಸಿ ಬೆಳೆಸುವ ಜವಾಬ್ದಾರಿಯನ್ನು ಅಭಿಯಾನದಲ್ಲಿ ಭಾಗವಹಿಸಿದ ಗ್ರಾಮಸ್ಥರು ವಹಿಸಿಕೊಂಡರು.

ಶಿರೂರು ಗ್ರಾಮದ ಸಿದ್ದಲಿಂಗೇಶ್ವರ ನಗರ, ಚೆನ್ನಯ್ಯ ನಗರ, ಇಂದಿರಾ ನಗರ, ಮಿನಿಚ್ ಮಡ್ಡಿ ನೀಲಾನಗರ ರೋಡ್ ಸೇರಿದಂತೆ ವಿವಿಧ ಕಡೆ ಈ ಅಭಿಯಾನ ನಡೆಯಿತು.

ಈ ಸಂದರ್ಭದಲ್ಲಿ ಕುಮಾರ ಗಿರ್ಜಾ, ಪಾಪು ರೆಡ್ಡಿ ಕೋಟಿಕಲ್, ಮುತ್ತು ಜಾಗಿರ್ದಾರ್, ಮಾಂತೇಶ್ ಗಿರಿಜಾ, ನಾಗೇಶ್ ಬಾಂಬೆ, ರಮೇಶ್ ಸೂಳಿಬಾವಿ, ನೀಲಪ್ಪ ಬಾರಟ್ಟಿ, ಯಮನಪ್ಪ ಹೂಗಾರ್, ಶೇಕಪ್ಪ ಅಂಗಡಿ, ದ್ಯಾವಪ್ಪ ಗಾಣಿಗೇರ್, ಮುದಿಯಪ್ಪ ಹೊಸ್ಮನಿ, ಸಿದ್ದು ಚೇತವಾಡಗಿ, ಪ್ರಶಾಂತ ಚಿತ್ತವಾಡಗಿ, ಪ್ರಭು ಪೆಟ್ ಶೆಟ್ರು, ಮಾಂತೇಶ್ ಕಲಗುಡಿ, ಮಂಜುನಾಥ್ ಮೇಣಸ್ಗಿ, ಸಿದ್ದು ಸಂಕೀನ್, ಭೀಮಪ್ಪ ಕೊರಟ್ಟಿ, ಮನೋಜ್ ಸಂಜನ್, ಸಾಯಿ ಕುಮಾರ್ ಸುಳಿಕೇರಿ, ಆಕಾಶ್ ಕುಂಬಾರ್, ಹನುಮಂತ್ ಬಸರಿಕಟ್ಟಿ, ಸಂತೋಷ ಹೂಗಾರ್, ನಿಂಗು ಲಂಕಾದ್, ಹಣಮಂತ ಹಾವರ್ಗಿ, ಸಿದ್ದಪ್ಪ ಪಲ್ಲೇದ್ ಸೇರಿದಂತೆ ಗ್ರಾಮದ ಪ್ರಮುಖರು, ಹಿರಿಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಎಸ್‌ಐಆರ್ ಜಾಗೃತಿ ಜಾಥಾಕ್ಕೆ ಡಿಸಿ, ಸಿಇಒ ಚಾಲನೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡ ಜಾಗೃತಿ ಜಾಥಾಕ್ಕೆ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ ಜಂಟಿಯಾಗಿ ಚಾಲನೆ ನೀಡಿದರು.

ನಗರದ ಶಕ್ತಿ ಟಾಕೀಜ ಹತ್ತಿರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಸ್ವೀಪ್, ಸರಕಾರಿ ಪದವಿ ಪೂರ್ವ ಕಾಲೇಜ ಹಾಗೂ ಸಕ್ರಿ ಪದವಿ ಪೂರ್ವ ಕಾಲೇಜ ಸಹಯೋಗದಲ್ಲಿ ಹಮ್ಮಿಕೊಂಡ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿಗಳು, ಮತದಾರರ ಪಟ್ಟಿಯಲ್ಲಿ ವಿಶೇಷ ಪರಿಷ್ಕರಣೆ ಹಾಗೂ ಪ್ಯಾಪಿಂಗ್ ಕಾರ್ಯದಲ್ಲಿ ಪ್ರತಿಯೊಬ್ಬ ಅರ್ಹ ಮತದಾರರು ಸಕ್ರಿಯವಾಗಿ ಭಾಗವಹಿಸಬೇಕು. ಮತದಾನ ಹಕ್ಕು ಪ್ರಜಾಪ್ರಭುತ್ವದ ಮೂಲ ಅಡಿಪಾಯವಾಗಿದ್ದು, ಅರ್ಹ ನಾಗರಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಪರಿಶೀಲಿಸಿ ಅಗತ್ಯ ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದರು.




ಜಾಗೃತಿ ಜಾಥಾ ಶಕ್ತಿ ಟಾಕೀಸ್ ರಸ್ತೆಯಿಂದ ಪ್ರಾರಂಭವಾಗಿ ಕೆನರಾ ಬ್ಯಾಂಕ್, ಹಳೆ ಸಿಂಡಿ-ಕೇಟ್ ಬ್ಯಾಂಕ್ ಹೊಳೆ ಆಂಜನೇಯ ದೇವಾಸ್ಥಾನ, ಬಸವೇಶ್ವರ ಸರ್ಕಲ್, ಮೆಳ್ಳಿಗೇರಿ ಕಾಂಪ್ಲೇಕ್ಸ್, ಕೆರೂಡಿ ಆಸ್ಪತ್ರೆ, ಲಯನ್ಸ್ ಕ್ಲಬ್, ಸೆಟಲ್‌ಮೆಂಟರ್ ಏರಿಯಾ ಕಾಲೋನಿ, ಹಳೆ ಐಬಿ ಸರ್ಕಲ್ ಮಾರ್ಗವಾಗಿ ಸಕ್ರಿ ಪದವಿ ಪೂರ್ವ ಕಾಲೇಜಗೆ ಮುಕ್ತಾಯಗೊಂಡಿತು.

ಜಾಥಾದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜ ಹಾಗೂ ಸಕ್ರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಜಾಗೃತಿ ಘೋಷಣೆಗಳನ್ನು ಕೂಗುತ್ತಾ ಫಲಕಗಳನ್ನು ಪ್ರದರ್ಶಿಸಿದರು.

ಜಿ.ಪಂ ಉಪಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಜಿ.ಪಂ ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು, ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ, ತಹಶೀಲ್ದಾರ ವಾಸುದೇವ ಸ್ವಾಮಿ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ, ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪನಿರ್ದೇಶಕ ಕೆ.ಪ್ರಭಾಕರ, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಮಹಾಂತೇಶ, ಜಿ.ಪಂ ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ, ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಗೋಪಾಲ, ಸಕ್ರಿ ಪಿಯು ಕಾಲೇಜಿನ ಪ್ರಾಚಾರ್ಯ ಕಂದಗಲ್ಲ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿದ ಸಿಇಒ ಬಾಲೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಶಿಕ್ಷಣದ ಗುಣಮಟ್ಟ ಸುಧಾರಣೆ ಹಾಗೂ ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಜಾನನ ಬಾಲೆ ಹುನಗುಂದ ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳು ಹಾಗೂ ಸಾರ್ವಜನಿಕ ಸೇವಾ ಸಂಸ್ಥೆಗಳಿಗೆ ಭೇಟಿ ನೀಡಿ ಸಮಗ್ರ ಪರಿಶೀಲನೆ ನಡೆಸಿದರು.

ಕ್ಷೇತ್ರ ಭೇಟಿಯ ಸಂದರ್ಭದಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳನ್ನು ವೀಕ್ಷಿಸಿದ ಅವರು, ಕಾಮಗಾರಿಗಳ ಗುಣಮಟ್ಟ, ಪ್ರಗತಿ ಹಾಗೂ ಸಾರ್ವಜನಿಕರಿಗೆ ದೊರೆಯುವ ಪ್ರಯೋಜನಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಗ್ರಾಮೀಣ ಜನತೆಗೆ ನಿರಂತರ ಹಾಗೂ ಗುಣಮಟ್ಟದ ಕುಡಿಯುವ ನೀರು ಒದಗಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು. ನಂತರ ಬಿಡಿಓಟಿ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ 3 ಎಂಬಿಟಿ ಹಾಗೂ ಹಿರೇಕೆಡಗಲಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳನ್ನು ಪರಿಶೀಲಿಸಿದರು. ಕಾಮಗಾರಿಗಳ ಪ್ರಗತಿ, ತಾಂತ್ರಿಕ ಗುಣಮಟ್ಟ ಹಾಗೂ ನಿರ್ವಹಣಾ ಕ್ರಮಗಳನ್ನು ಪರಿಶೀಲಿಸಿದ ಅವರು, ಯೋಜನೆಯಿಂದ ಪ್ರಯೋಜನ ಪಡೆಯಲಿರುವ ಗ್ರಾಮಗಳ ಜನತೆಗೆ ಶೀಘ್ರದಲ್ಲಿ ಸೌಲಭ್ಯ ದೊರಕುವಂತೆ ಅಧಿಕಾರಿಗಳು ಕ್ರಮವಹಿಸಬೇಕು ಎಂದು ನಿರ್ದೇಶಿಸಿದರು.




ಬಳಿಕ ಹುನಗುಂದ ಪಟ್ಟಣದ ವಿದ್ಯಾನಗರದಲ್ಲಿರುವ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ, ನಿರ್ಮಾಣ ಹಂತದಲ್ಲಿರುವ ಮೂರು ನೂತನ ತರಗತಿ ಕೊಠಡಿಗಳ ಕಾಮಗಾರಿ ಹಾಗೂ ನಿರ್ಮಿಸಲಾಗುತ್ತಿರುವ ಗ್ರಂಥಾಲಯ ಕೊಠಡಿಯನ್ನು ವೀಕ್ಷಿಸಿದರು. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಅಗತ್ಯವಿರುವ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಅತ್ಯಂತ ಮುಖ್ಯವಾಗಿದ್ದು, ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಪೂರ್ಣಗೊಳಿಸುವಂತೆ ತಿಳಿಸಿದರು.

ಶಾಲೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಅವರು, ಶೈಕ್ಷಣಿಕ ಚಟುವಟಿಕೆಗಳು, ಕಲಿಕಾ ವಾತಾವರಣ ಹಾಗೂ ಶಾಲೆಯಲ್ಲಿನ ವಿವಿಧ ಸೌಲಭ್ಯಗಳ ಕುರಿತು ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ಪರಿಶೀಲಿಸಿದ ಅವರು, ಆಹಾರದ ಗುಣಮಟ್ಟ, ರುಚಿ ಹಾಗೂ ಪೌಷ್ಟಿಕಾಂಶವನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಸ್ವತಃ ಬಿಸಿಯೂಟ ಸೇವಿಸಿ ಪರಿಶೀಲನೆ ನಡೆಸಿದರು. ಅಲ್ಲದೆ ಆಹಾರ ತಯಾರಿಕೆ ಮತ್ತು ವಿತರಣೆಯಲ್ಲಿ ಸ್ವಚ್ಛತೆ, ಗುಣಮಟ್ಟ ಹಾಗೂ ಪೌಷ್ಟಿಕಾಂಶದ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಶಾಲಾ ಸಿಬ್ಬಂದಿಗೆ ಸೂಚಿಸಿದರು.

ಜಾಲಕಮಲದಿನ್ನಿ ಗ್ರಾಮದ ಅಂಗನವಾಡಿ ಕೇಂದ್ರ ಸಂಖ್ಯೆ-1 ಗೆ ಭೇಟಿ ನೀಡಿ, ಮಕ್ಕಳಿಗೆ ನೀಡಲಾಗುತ್ತಿರುವ ಪೌಷ್ಟಿಕ ಆಹಾರ, ಆರೋಗ್ಯ ಸೇವೆಗಳು, ಪೂರ್ವ ಪ್ರಾಥಮಿಕ ಶಿಕ್ಷಣ ಚಟುವಟಿಕೆಗಳು ಹಾಗೂ ಹಾಜರಾತಿ ವ್ಯವಸ್ಥೆಯನ್ನು ಪರಿಶೀಲಿಸಿದರು. ಮಕ್ಕಳ ಸಮಗ್ರ ಬೆಳವಣಿಗೆಗೆ ಅಂಗನವಾಡಿ ಕೇಂದ್ರಗಳ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಮಕ್ಕಳಿಗೆ ಗುಣಮಟ್ಟದ ಸೇವೆಗಳನ್ನು ಒದಗಿಸಲು ವಿಶೇಷ ಗಮನ ಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮದ ಜಲಶುದ್ಧೀಕರಣ ಘಟಕ ಕಾಮಗಾರಿಯನ್ನು ವೀಕ್ಷಿಸಿ, ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಸಂಬಂಧಿಸಿದ ತಾಂತ್ರಿಕ ಅಂಶಗಳು ಹಾಗೂ ನಿರ್ವಹಣಾ ವ್ಯವಸ್ಥೆಯ ಕುರಿತು ಮಾಹಿತಿ ಪಡೆದರು. ಗ್ರಾಮೀಣ ಜನತೆಗೆ ಸುರಕ್ಷಿತ ಹಾಗೂ ಶುದ್ಧ ಕುಡಿಯುವ ನೀರು ನಿರಂತರವಾಗಿ ದೊರೆಯುವಂತೆ ಅಧಿಕಾರಿಗಳು ಕ್ರಮವಹಿಸಬೇಕು ಎಂದು ನಿರ್ದೇಶಿಸಿದರು.

ಪರಿಶೀಲನೆ ವೇಳೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಜಿ.ಪಂ ಸಿಇಓ ಗಜಾನನ ಬಾಲೆ ಅವರು, ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ಗುಣಮಟ್ಟ, ಪಾರದರ್ಶಕತೆ ಹಾಗೂ ಸಮಯಪಾಲನೆಗೆ ಹೆಚ್ಚಿನ ಒತ್ತು ನೀಡುವಂತೆ ಸೂಚಿಸಿದರು. ಸರ್ಕಾರದ ಯೋಜನೆಗಳ ಸೌಲಭ್ಯಗಳು ನೇರವಾಗಿ ಸಾರ್ವಜನಿಕರಿಗೆ ತಲುಪುವಂತೆ ಕಾರ್ಯನಿರ್ವಹಿಸುವುದು ಪ್ರತಿಯೊಬ್ಬ ಅಧಿಕಾರಿಯ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ಇಂಜಿನಿಯರ್, ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ವಾರ್ತಾ ಇಲಾಖೆ ಆಯುಕ್ತರಿಗೆ ಕೆಯುಡಬ್ಲ್ಯೂಜೆ ಶುಭ ಹಾರೈಕೆ



**ಬೆಂಗಳೂರು:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೂತನ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡಿರುವ ಎಂ.ಎನ್. ಅನುಚೇತ್ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ನೇತೃತ್ವದ ಪದಾಧಿಕಾರಿಗಳ ನಿಯೋಗ ಭೇಟಿ ಮಾಡಿ ಶುಭ ಹಾರೈಸಿತು. ಈ ಸಂದರ್ಭದಲ್ಲಿ ಕೆಯುಡಬ್ಲ್ಯೂಜೆ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ, ರಾಜ್ಯ ಖಜಾಂಚಿ ವಾಸುದೇವ ಹೊಳ್ಳ, ರಾಜ್ಯ ಸಮಿತಿ ಸದಸ್ಯ ದೇವರಾಜು ಮತ್ತಿತರರು ಹಾಜರಿದ್ದರು. ಗ್ರಾಮೀಣ ಪತ್ರಕರ್ತರ ಬಸ್ ಪಾಸ್ ಮತ್ತು ಮಾಧ್ಯಮ ಸಂಜೀವಿನಿ ಯೋಜನೆಯ ಬಗ್ಗೆ ನೂತನ ಆಯುಕ್ತರಿಗೆ ಗಮನ ಸೆಳೆಯಲಾಯಿತು. ಇದೇ ಸಂದರ್ಭದಲ್ಲಿ ಜುಲೈ 1ರಂದು ನಡೆಯುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು. ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾಖಾನಂ ಉಪಸ್ಥಿತರಿದ್ದರು.

## ಬಸ್–ಬೈಕ್ ನಡುವೆ ಭೀಕರ ಅಪಘಾತ; ಮೂವರ ದುರ್ಮರಣ

**ಕಲಬುರಗಿ:** ಚಿತ್ತಾಪುರದಿಂದ ಸನ್ನತಿಗೆ ಹೊರಟಿದ್ದ ಕೆಕೆಆರ್‌ಟಿಸಿ ಬಸ್‌ಗೆ ಬೊಮ್ಮನಳ್ಳಿ ಕಡೆಯಿಂದ ಚಿತ್ತಾಪುರ ಕಡೆಗೆ ಹೋಗುತ್ತಿದ್ದ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್‌ನಲ್ಲಿ ತೆರಳುತ್ತಿದ್ದ ಮೂವರ ಮೇಲೆ ಬಸ್ ಚಕ್ರಗಳು ಹರಿದ ಸ್ಥಳದಲ್ಲೇ ಯುವಕರು ಮೃತಪಟ್ಟಿದ್ದಾರೆ.

ಬೊಮ್ಮನಹಳ್ಳಿ ಗ್ರಾಮದ ದೇವರಾಜ ತಂ. ಅಯ್ಯಪ್ಪ (19), ಮುಡಬೂಳ ಗ್ರಾಮದ ಲಕ್ಷ್ಮಿಕಾಂತ (20) ಹಾಗೂ ಸೇಡಂ ತಾಲ್ಲೂಕಿನ ಬಿಜನಳ್ಳಿ ಗ್ರಾಮದ ಪ್ರಕಾಶ ತಂ. ಬಸಪ್ಪ (23) ಮೃತ ದುರ್ದೈವಿಗಳಾಗಿದ್ದಾರೆ. ಸದ್ಯ ಪೊಲೀಸರ ಕಲೆಹಾಕಿರುವ ಮಾಹಿತಿ ಪ್ರಕಾರ ಕೆಕೆಆರ್‌ಟಿಸಿ ಬಸ್‌ಗೆ ಮುಂಬದಿಯಿಂದ ಬೈಕ್ ರಭಸವಾಗಿ ಡಿಕ್ಕಿ ಹೊಡೆದಿದೆ. ಘಟನಾ ಸ್ಥಳಕ್ಕೆ ಶಹಾಬಾದ ಡಿವೈಎಸ್ಪಿ ಶಂಕರಗೌಡ ಪಾಟೀಲ್, ಚಿತ್ತಾಪುರ ಸಿಪಿಐ ಎಸ್.ಬಿ ಪಾಟೀಲ್ ಮತ್ತು ಪಿಎಸ್ಐ ಮಂಜುನಾಥರೆಡ್ಡಿ ಭೇಟಿ ನೀಡಿ ಪರಿಶೀಲನೆ ನಡೆಸಿ ಮೃತದೇಹಗಳನ್ನು ಚಿತ್ತಾಪುರ ತಾಲ್ಲೂಕು ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ್ದಾರೆ.

## ರಾಷ್ಟ್ರ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಬೆಂಗಳೂರು:** ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯವು 2026–27ನೇ ಸಾಲಿನಲ್ಲಿ ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಗೆ ರಾಷ್ಟ್ರ ಪ್ರಶಸ್ತಿಗಳನ್ನು ನೀಡಲು ಆನ್ಲೈನ್ ಮೂಲಕ ಅರ್ಜಿಗಳನ್ನು ಆಹ್ವಾಸಲಾಗಿದೆ. ಆಸಕ್ತರು ಅರ್ಜಿಗಳನ್ನು www.awards.gov.in ವೆಬ್ಸೈಟ್ ಆನ್ಲೈನ್ ಮೂಲಕ ಜುಲೈ 31 ರೊಳಗಾಗಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಹೊಸೂರು ರಸ್ತೆ, ಬೆಂಗಳೂರು ನಗರ ಜಿಲ್ಲೆ –560029 ಅಥವಾ ದೂರವಾಣಿ ಸಂಖ್ಯೆ: 080–29752324 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಾಯು ವಿಹಾರ ಸಮಿತಿಯಲ್ಲಿ ಹುಟ್ಟುಹಬ್ಬಗಳು ಮಾದರಿ



**ಹುಮನಾಬಾದ್:** ಶ್ರೀ ಮಾಣಿಕ ಪ್ರಭು ವಾಯು ವಿಹಾರ ಸಮಿತಿಯ ವತಿಯಿಂದ ಸದಸ್ಯರ ಹುಟ್ಟುಹಬ್ಬಗಳನ್ನು ಸರಳ, ಸಾರ್ಥಕ ಹಾಗೂ ಸಮಾಜಮುಖಿ ರೀತಿಯಲ್ಲಿ ಆಚರಿಸಲಾಗುತ್ತಿದ್ದು, ಈ ಕಾರ್ಯಕ್ರಮಗಳು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿ ಮಾದರಿಯಾಗುತ್ತಿವೆ. ಎಂದು ಸಮಿತಿಯ ಅಧ್ಯಕ್ಷ ಸುರೇಶ ಸೀಗಿ ತಿಳಿಸಿದ್ದಾರೆ.

ಗುರುವಾರ ಮಲ್ಲಿಕಾರ್ಜುನ ರೊಗನ, ಶ್ರೀಕಾಂತ ಕುಲಕರಣಿ, ಮಾಣಿಕಪ್ಪ ಬಕ್ಕನ್ ಇವರುಗಳ ಹುಟ್ಟುಹಬ್ಬವನ್ನುದ್ದೇಶಿಸಿ ಮಾತನಾಡಿದರು.

ಸಮಿತಿಯ ಸದಸ್ಯರ ಹುಟ್ಟುಹಬ್ಬದ ಅಂಗವಾಗಿ ಪರಸ್ಪರ ಶುಭಾಶಯ ವಿನಿಮಯ, ಸಮಾಜದ ಹಿರಿಯರ ಸನ್ಮಾನ, ಪರಿಸರ ಜಾಗೃತಿ ಸಂದೇಶ ಹಾಗೂ ಸಾಮಾಜಿಕ ಮೌಲ್ಯಗಳ ಕುರಿತು ಚರ್ಚೆಗಳು ನಡೆಯುತ್ತಿವೆ. ಇದರಿಂದ ಸದಸ್ಯರಲ್ಲಿ ಪರಸ್ಪರ ಸ್ನೇಹ, ಸೌಹಾರ್ದತೆ ಮತ್ತು ಒಗ್ಗಟ್ಟು ಹೆಚ್ಚಾಗುತ್ತಿದೆ ಎಂದು ಸದಸ್ಯರು ಅಭಿಪ್ರಾಯಪಟ್ಟರು.

ಇತ್ತೀಚಿನ ದಿನಗಳಲ್ಲಿ ಆಡಂಬರದ ಹುಟ್ಟುಹಬ್ಬ ಆಚರಣೆಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ, ವಾಯು ವಿಹಾರ ಸಮಿತಿಯು ಸರಳತೆಯೊಂದಿಗೆ ಆಚರಿಸುತ್ತಿರುವ ಹುಟ್ಟುಹಬ್ಬಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿವೆ. ಹುಟ್ಟುಹಬ್ಬವನ್ನು ಕೇವಲ ವೈಯಕ್ತಿಕ ಸಂಭ್ರಮಕ್ಕೆ ಸೀಮಿತಗೊಳಿಸದೆ, ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಶ್ಲಾಘನೀಯವಾಗಿದೆ.

ಸಮಿತಿಯ ಪದಾಧಿಕಾರಿಗಳು ಮಾತನಾಡಿ, ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜದಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ವಾಯು ವಿಹಾರ ಸಮಿತಿಯ ಈ ಕಾರ್ಯ ವೈಖರಿ ಇತರ ಸಂಘ–ಸಂಸ್ಥೆಗಳಿಗೂ ಮಾದರಿಯಾಗಿದೆ. ಈ ಸಂದರ್ಬದಲ್ಲಿ, ಭೀಮೇಶ್ ಪಂಚಾಳ, ಶಂಕರ ಅವಳಿ, ಸಿದ್ದು ಸ್ವಾಮಿ, ರಮೇಶರಡ್ಡಿ, ಬಸವರಾಜ ಮಜಕೂರಿ, ಶ್ರೀನಾಥ ದೇವಣಿ, ಮನೋಜ ಬುನ್ನಾ, ಮಲ್ಲಿಕಾರ್ಜುನ ಮಠಪತಿ, ಮಡಿವಾಳಯ್ಯ ಸ್ವಾಮಿ, ಸುಭಾಷ ಪಾಟೀಲ, ಅಣ್ಣೆಪ್ಪಾ ಕೆಜಿಬಿ, ಹಣಮಂತರಾವ ಕಾಂಬ್ಳೆ, ವೈಜಿನಾಥ ಪಾಟೀಲ, ಬಸವರಾಜ ಕನಕಟ್ಟಾ, ಆರ್.ಎನ್.ಚನ್ನಶಟ್ಟಿ. ಸೇರಿದಂತೆ ಇತರರಿದ್ದರು.

# ರಾಜಕೀಯದಿಂದ ಅಭಿವೃದ್ಧಿವರೆಗೆ ಹಲವು ಸವಾಲುಗಳು

• ಎಂ. ಜಂಬುನಾಥ, ವರದಿಗಾರ



ಬಳ್ಳಾರಿ ಜಿಲ್ಲೆಯ ನೂತನ ಉಸ್ತುವಾರಿ ಸಚಿವರಾಗಿ ನೇಮಕಗೊಂಡಿರುವ ಕೆ.ಎಚ್.ಮುನಿಯಪ್ಪ ಅವರಿಗೆ ರಾಜಕೀಯ ಹಾಗೂ ಆಡಳಿತಾತ್ಮಕವಾಗಿ ಹಲವು ಪ್ರಮುಖ ಸವಾಲುಗಳು ಎದುರಾಗುವ ಸಾಧ್ಯತೆ ಇದೆ. ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ವಿವಿಧ ಇಲಾಖೆಗಳ ಸಮನ್ವಯ ಹಾಗೂ ಜನರ ಸಮಸ್ಯೆಗಳ ತ್ವರಿತ ಪರಿಹಾರ ಉಸ್ತುವಾರಿ ಸಚಿವರ ಪ್ರಮುಖ ಜವಾಬ್ದಾರಿಗಳಾಗಿದ್ದು, ಈ ನಿಟ್ಟಿನಲ್ಲಿ ಮುನಿಯಪ್ಪ ಅವರ ಕಾರ್ಯವೈಖರಿ ಗಮನ ಸೆಳೆಯಲಿದೆ.

ಜಿಲ್ಲೆಯ ರಾಜಕೀಯ ವಲಯದಲ್ಲಿ ಕಾಂಗ್ರೆಸ್ ಪಕ್ಷದ ವಿವಿಧ ಗುಂಪುಗಳ ನಡುವೆ ಸಮನ್ವಯ ಸಾಧಿಸುವುದು ಪ್ರಮುಖ ಸವಾಲಾಗಿದೆ. ಸ್ಥಳೀಯ ಶಾಸಕರು, ಸಂಸದರು ಹಾಗೂ ಪಕ್ಷದ ಮುಖಂಡರೊಂದಿಗೆ ಹೊಂದಾಣಿಕೆ ಕಾಪಾಡುವುದರ ಜೊತೆಗೆ ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್‌ನ ಟೀಕೆಗಳಿಗೆ ರಾಜಕೀಯವಾಗಿ ಸಮರ್ಥ ಉತ್ತರ ನೀಡಬೇಕಾದ ಪರಿಸ್ಥಿತಿ ಎದುರಾಗಲಿದೆ. ಇದೇ ವೇಳೆ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಮಟ್ಟದ ಚುನಾವಣೆಗಳ ಹಿನ್ನೆಲೆಯಲ್ಲಿ ಪಕ್ಷದ ಸಂಘಟನೆ ಬಲಪಡಿಸುವ ಒತ್ತಡವೂ ಇರಲಿದೆ. ಅಭಿವೃದ್ಧಿ ಕ್ಷೇತ್ರದಲ್ಲಿ ರಸ್ತೆ, ಸಾರಿಗೆ ಮತ್ತು ಕುಡಿಯುವ ನೀರಿನ ಸಮಸ್ಯೆಗಳು ಪ್ರಮುಖವಾಗಿವೆ. ಗ್ರಾಮೀಣ ರಸ್ತೆಗಳ ದುರಸ್ತಿ, ಹೊಸ ರಸ್ತೆ ನಿರ್ಮಾಣ, ರಾಷ್ಟ್ರೀಯ ಹೆದ್ದಾರಿಗಳ ಸಂಪರ್ಕ ಸುಧಾರಣೆ ಹಾಗೂ ನಗರ ಪ್ರದೇಶಗಳ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕಿದೆ. ಬೇಸಿಗೆ ಸಂದರ್ಭದಲ್ಲಿ ಗ್ರಾಮೀಣ ಭಾಗಗಳಲ್ಲಿ ಉಂಟಾಗುವ ಕುಡಿಯುವ ನೀರಿನ ಕೊರತೆಗೆ ಶಾಶ್ವತ ಪರಿಹಾರ ಕಂಡುಹಿಡಿಯುವ ಅಗತ್ಯವಿದ್ದು, ನೀರಾವರಿ ಮೂಲಗಳ ಸಮರ್ಪಕ ಬಳಕೆಯ ಮೇಲೂ ಗಮನ ಹರಿಸಬೇಕಾಗಿದೆ.

ಆರೋಗ್ಯ ಕ್ಷೇತ್ರದಲ್ಲೂ ಹಲವು ಸವಾಲುಗಳಿವೆ. ಜಿಲ್ಲಾ ಆಸ್ಪತ್ರೆಗಳ ಸುಧಾರಣೆ, ಗ್ರಾಮೀಣ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ ನಿವಾರಣೆ ಹಾಗೂ ತಾಯಿ–ಮಗು ಆರೋಗ್ಯ ಸೇವೆಗಳ ವಿಸ್ತರಣೆಗೆ ಆದ್ಯತೆ ನೀಡಬೇಕಿದೆ.

ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಕೊರತೆ, ಕಟ್ಟಡಗಳ ದುರವಸ್ಥೆ, ಶೌಚಾಲಯ ಮತ್ತು ಡಿಜಿಟಲ್ ಸೌಲಭ್ಯಗಳ ಅಭಾವ ಪ್ರಮುಖ ಸಮಸ್ಯೆಗಳಾಗಿವೆ. ಪದವಿ ಕಾಲೇಜುಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ, ವಿದ್ಯಾರ್ಥಿ ವಸತಿ ನಿಲಯಗಳ ನಿರ್ಮಾಣ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರಗಳ ಸ್ಥಾಪನೆ ಹಾಗೂ ಉದ್ಯೋಗಮುಖಿ ಶಿಕ್ಷಣಕ್ಕೆ ಉತ್ತೇಜನ ನೀಡುವ ನಿರೀಕ್ಷೆ ಇದೆ.

ಗಣಿಗಾರಿಕೆ ಮತ್ತು ಉಕ್ಕು ಕೈಗಾರಿಕೆಗಳಿಗೆ ಹೆಸರಾದ ಬಳ್ಳಾರಿ ಜಿಲ್ಲೆಯಲ್ಲಿ ಸ್ಥಳೀಯ ಯುವಕರಿಗೆ ಉದ್ಯೋಗ ಸೃಷ್ಟಿ ಮತ್ತೊಂದು ಪ್ರಮುಖ ಸವಾಲಾಗಿದೆ. ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವುದು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದು ಹಾಗೂ ಗಣಿಗಾರಿಕೆಯಿಂದ ಪರಿಸರದ ಮೇಲೆ ಉಂಟಾಗಿರುವ ಪರಿಣಾಮಗಳನ್ನು ನಿಯಂತ್ರಿಸುವುದು ಅಗತ್ಯವಾಗಿದೆ. ಕೃಷಿ ಕ್ಷೇತ್ರದಲ್ಲಿ ನೀರಾವರಿ ಸೌಲಭ್ಯ ವಿಸ್ತರಣೆ, ಬೆಳೆ ವಿಮೆ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ, ಬೆಂಬಲ ಬೆಲೆ ಸಮಸ್ಯೆಗಳ ಪರಿಹಾರ ಹಾಗೂ ನಿರಂತರ ವಿದ್ಯುತ್ ಪೂರೈಕೆ ಒದಗಿಸುವುದು ರೈತರ ಪ್ರಮುಖ ಬೇಡಿಕೆಗಳಾಗಿವೆ. ಬರ ಪರಿಸ್ಥಿತಿಗೆ ಶಾಶ್ವತ ಪರಿಹಾರ ಕಂಡುಹಿಡಿಯುವ ಜವಾಬ್ದಾರಿಯೂ ಸರ್ಕಾರದ ಮೇಲಿದೆ.

ನಗರಾಭಿವೃದ್ಧಿ ದೃಷ್ಟಿಯಿಂದ ಬಳ್ಳಾರಿ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಸುಧಾರಣೆ, ಕಸದ ನಿರ್ವಹಣೆ, ಕುಡಿಯುವ ನೀರಿನ ವಿತರಣಾ ವ್ಯವಸ್ಥೆ ಬಲಪಡಿಸುವುದು ಹಾಗೂ ಆಧುನಿಕ ನಗರಾಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಅಗತ್ಯವಿದೆ.

ಇದರ ಜೊತೆಗೆ ಅಕ್ರಮ ಗಣಿಗಾರಿಕೆ ನಿಯಂತ್ರಣ, ಭೂ ಕಬಳಿಕೆ ಪ್ರಕರಣಗಳ ತಡೆ, ಮಹಿಳಾ ಸುರಕ್ಷತೆ ಹಾಗೂ ಸೈಬರ್ ಅಪರಾಧಗಳ ನಿಯಂತ್ರಣದಂತಹ ಕಾನೂನು ಮತ್ತು ಸುವ್ಯವಸ್ಥೆಯ ಸವಾಲುಗಳನ್ನೂ ಮುನಿಯಪ್ಪ ಅವರು ಎದುರಿಸಬೇಕಾಗಿದೆ.

ರಾಜಕೀಯ ವಿಶ್ಲೇಷಕರ ಅಭಿಪ್ರಾಯದಂತೆ, ಈ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಿದರೆ ಬಳ್ಳಾರಿ ಜಿಲ್ಲೆಗೆ ಹೆಚ್ಚಿನ ಅಭಿವೃದ್ಧಿ ಅನುದಾನ ತರುವುದರ ಜೊತೆಗೆ ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಹಾಗೂ ಕೈಗಾರಿಕಾ ವಲಯದ ವಿಶ್ವಾಸ ಗಳಿಸಲು ಸಾಧ್ಯವಾಗಲಿದೆ. ಅಲ್ಲದೆ ಜಿಲ್ಲೆಯ ರಾಜಕೀಯ ಸಮೀಕರಣಗಳ ಮೇಲೂ ಅವರ ಪ್ರಭಾವ ಹೆಚ್ಚಾಗುವ ಸಾಧ್ಯತೆ ಇದೆ.

ಒಟ್ಟಾರೆ, ರಾಜಕೀಯ ಸಮನ್ವಯ, ಮೂಲಸೌಕರ್ಯ ಅಭಿವೃದ್ಧಿ, ಶಿಕ್ಷಣ, ಉದ್ಯೋಗ ಸೃಷ್ಟಿ, ಕೃಷಿ ಮತ್ತು ನಗರಾಭಿವೃದ್ಧಿ ಕ್ಷೇತ್ರಗಳಲ್ಲಿ ಪರಿಣಾಮಕಾರಿ ನಾಯಕತ್ವ ಪ್ರದರ್ಶಿಸುವುದು ಬಳ್ಳಾರಿ ಜಿಲ್ಲೆಯ ನೂತನ ಉಸ್ತುವಾರಿ ಸಚಿವ ಕೆ.ಹೆಚ್. ಮುನಿಯಪ್ಪ ಅವರ ಮುಂದಿರುವ ಪ್ರಮುಖ ಸವಾಲುಗಳಾಗಿವೆ.

## ರಮೇಶ ಜಿಗಜಿಣಗಿ ಕಚೇರಿಗೆ ಮುತ್ತಿಗೆ ಯತ್ನ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ



ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಕುರಿತು ಸಂಸದ ರಮೇಶ ಜಿಗಜಿಣಗಿ ಅವರು ನೀಡಿದ್ದಾರೆನ್ನಲಾದ ಹೇಳಿಕೆಯನ್ನು ಖಂಡಿಸಿ, ವಿಜಯಪುರದಲ್ಲಿ ದಲಿತ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ಸಂಸದರ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಘಟನೆ ನಡೆದಿದೆ.

ಹೌದು, ಇತ್ತೀಚೆಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ನೋಂದಣಿ ಕುರಿತು ಪ್ರಶ್ನೆಯೊಂದನ್ನು ಎತ್ತಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಸಂಸದ ರಮೇಶ ಜಿಗಜಿಣಗಿ, ಪ್ರಿಯಾಂಕ್ ಖರ್ಗೆ ಒಬ್ಬ ದಲಿತ ಮನುಷ್ಯ, ಅವನಿಗೇಕೆ ಬೇಕು ಆರ್‌ಎಸ್‌ಎಸ್ ವಿಚಾರ? ಎಂಬ ಅರ್ಥದಲ್ಲಿ ಹೇಳಿಕೆ ನೀಡಿದ್ದರು ಎನ್ನಲಾಗಿದೆ. ಸಂಸದರ ಈ ಹೇಳಿಕೆಯು ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಸಂಸದ ರಮೇಶ ಜಿಗಜಿಣಗಿ ಅವರ ಹೇಳಿಕೆಯನ್ನು ಖಂಡಿಸಿ, ದಲಿತ ವಿದ್ಯಾರ್ಥಿ ಪರಿಷತ್‌ನ ಸಂಸ್ಥಾಪಕ ಅಧ್ಯಕ್ಷ ಶ್ರೀನಾಥ್ ಪೂಜಾರಿ ಹಾಗೂ ಇತರ ಹೋರಾಟಗಾರರ ನೇತೃತ್ವದಲ್ಲಿ ವಿಜಯಪುರ ನಗರದ ಅಂಬೇಡ್ಕರ್ ಸರ್ಕಲ್ ಬಳಿಯ ಹಳೆ ಪ್ರವಾಸಿ ಮಂದಿರದಲ್ಲಿರುವ ಸಂಸದರ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಲಾಯಿತು.

ಹೋರಾಟಗಾರರು ಕಚೇರಿಯತ್ತ ನುಗ್ಗಲು ಯತ್ನಿಸುತ್ತಿದ್ದಂತೆ ಎಚ್ಚೆತ್ತ ಗಾಂಧಿ ಚೌಕ ಪೊಲೀಸ್ ಠಾಣೆಯ ಸಿಬ್ಬಂದಿ, ಹಳೆ ಪ್ರವಾಸಿ ಮಂದಿರದ ಮುಖ್ಯ ದ್ವಾರದಲ್ಲೇ ಅವರನ್ನು ತಡೆದು ನಿಲ್ಲಿಸಿದರು. ಪರಿಸ್ಥಿತಿ ಕೈಮೀರದಂತೆ ಮುಂಜಾಗ್ರತಾ ಕ್ರಮವಾಗಿ ಶ್ರೀನಾಥ್ ಪೂಜಾರಿ ಸೇರಿದಂತೆ ಹಲವು ಹೋರಾಟಗಾರರನ್ನು ಪೊಲೀಸರು ತಮ್ಮ ವಶಕ್ಕೆ ಪಡೆದಿದ್ದಾರೆ.


ಕರ್ನಾಟಕ ಸರ್ಕಾರ

**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ಉಪ ವಿಭಾಗ ರವರ ಕಛೇರಿ ಚಿಂಚೋಳಿ** ಮಿಂಚಂಚೆ ವಿಳಾಸ : acfkalaburgit@gmail.com, ದೂ. 08472–256601

ಸಂಖ್ಯೆ: ಸಅಸಂ/ಉವಿಚಿಂ/ಇ–ಟೆಂಡರ್/ಸಿಆರ್–/2026–27 ದಿನಾಂಕ : 25–06–2026

**:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಟೆಂಡರ್ ಟೆಂಡರ್ ) ::**

2026–27ನೇ ಸಾಲಿನಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಪ್ರಾದೇಶಿಕ ಅರಣ್ಯ ಉಪ ವಿಭಾಗ ಚಿಂಚೊಳಿ ರವರ ವ್ಯಾಪ್ತಿಯಲ್ಲಿ ಬರುವ ಚಿಂಚೊಳಿ ಹಾಗೂ ಚಿತ್ತಾಪೂರ ವಲಯಗಳಲ್ಲಿ ವಿವಿಧ ಯೋಜನೆಗಳಡಿ ಮುಂಗಡ ಕಾಮಗಾರಿ ಹಾಗೂ ಸಸಿ ಬೆಳೆಸುವ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಅಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ಕಾಮಗಾರಿಯ ವಿವರ : **ಚಿಂಚೊಳಿ ಪ್ರಾದೇಶಿಕ ಅರಣ್ಯ ಉಪ ವಿಭಾಗದಲ್ಲಿ ಪ್ರತ್ಯಕವಾಗಿ ಟೆಂಡರ್ ಅಹ್ವಾನಿಸಲಾಗಿದೆ.** 1) ಟೆಂಡರ್ ಮೊತ್ತ: ಕನಿಷ್ಠ (ರೂ.ಲಕ್ಷಗಳಲ್ಲಿ) **4.740,** ಗರಿಷ್ಠ (ರೂ.ಲಕ್ಷಗಳಲ್ಲಿ) **10.650,** 2) ಲೆಕ್ಕ ಶೀರ್ಷಿಕೆ: ವಿವಿಧ ಯೋಜನೆ, 3) ಏರಡನೇ ಅವಧಿ: ತಾಂತ್ರಿಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ : **06.07.2026 ಅಪರಾಹ್ನ 4.00 ಗಂಟೆ ವರೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **07.07.2026 ಅಪರಾಹ್ನ 4:00 ಗಂಟೆಯ ನಂತರ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **8.07.2026 ಅಪರಾಹ್ನ 5.00 ಗಂಟೆಯ ನಂತರ,** 4) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ಅರಣ್ಯ ಉಪ–ವಿಭಾಗ ಚಿಂಚೊಳಿ, ಕಛೇರಿ ದೂ.:08472–256601, ಮಿಂಚಂಚೆ ವಿಳಾಸ : acfkalaburgit@gmail.com 5) ಅಂತರಜಾಲ ತಾಣದ ವಿಳಾಸ : https://kppp.karnataka.gov.in

**ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು**

ವಾ.ಸಾ.ಸಂ.ಇ/ಕಲಬುರಗಿ/256/ಕೆ.ಎಸ್.ಎಂ.ಸಿ.&ಎ/2026–27 **ಪ್ರಾದೇಶಿಕ ಅರಣ್ಯ ಉಪ ವಿಭಾಗ, ಚಿಂಚೋಳಿ**


## ಸೌಹಾರ್ದ ಸಾಮರಸ್ಯದ ಕನ್ನಡ ಸಾಹಿತ್ಯ: ರಾಜೇಂದ್ರ ಕೊರಬ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ




ಕನ್ನಡ ಸಾಹಿತ್ಯವು ಬಹು ವಿಶಾಲವಾಗಿದೆ. ಜನಪದ ಕಾವ್ಯದಿಂದ ಹಿಡಿದು ಮೊದಲ ಸಾಹಿತ್ಯಕ್ಕೆ ನಾಂದಿ ಹಾಡಿದ ಶ್ರೀವಿಜಯನ ಕವಿರಾಜ ಮಾರ್ಗ, ವಡ್ಡಾರಾಧನೆ, ಪಂಪ, ಪೊನ್ನ, ನಾಗಚಂದ್ರ, ಲಕ್ಷ್ಮೀಶ, ಅಂಬಲಗಿ ಚನ್ನಮಲ್ಲ, ವಚನಕಾರರು, ದಾಸರು, ತತ್ವಪದಕಾರರು, ಸೂಫಿಗಳು ಹೊಂದಿದ ಸಾಮರಸ್ಯ– ಸೌಹಾರ್ದ ಸಾಹಿತ್ಯ ಕನ್ನಡ ಸಾಹಿತ್ಯವೆಂದು ಹಿರಿಯ ಸಾಹಿತಿ ರಾಜೇಂದ್ರ ಎಂ.ಕೊರಬ ನುಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಚಕೋರ ಸಾಹಿತ್ಯ ವಿಚಾರ ವೇದಿಕೆ, ಕಲಬುರಗಿ ಸಹಯೋಗದೊಂದಿಗೆ ಸರಕಾರಿ ಉರ್ದು ಪ್ರೌಢ ಶಾಲೆ ರೋಜಾ ಟೈನ್ ಪಾಚಾಪೂರ, ಕಲಬುರಗಿಯಲ್ಲಿ ಕನ್ನಡ ಸಾಹಿತ್ಯ ಪರಿಚಯ ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಅವರು ಸ್ವಾರಸ್ಯ ಜಿವನೋತ್ಸಾಹ ತುಂಬಿ, ಕನ್ನಡ ಭಾಷೆ ಕಲಿತು ಪ್ರೀತಿ, ಮಮತೆ, ವಾತ್ಸಲ್ಯ ಹೊಂದಿ ಇತರ ಭಾಷೆ– ಸಾಹಿತ್ಯ ಅಧ್ಯಯನ ಅವಶ್ಯ. ಹಾಗೇ ಕನ್ನಡ ಭಾಷೆ, ಸಾಹಿತ್ಯದ ಮೂಲಕ ಸಾಮಾಜಿಕ ಬದಲಾವಣೆ ಹೊಂದಲು ಸಾಧ್ಯವೆಂದರು.

ಅಧ್ಯಕ್ಷತೆವಹಿಸಿದ ಮುಖ್ಯಗುರುಗಳಾದ ಕರಬಸಯ್ಯ ಮಠ ಮಾತನಾಡಿ ನಮ್ಮ ಭಾಷೆ ಸಾಹಿತ್ಯ ಅರಿತರೆ ನಮ್ಮ ನಾಲಿಗೆ ಶುದ್ಧವಾಗುತ್ತದೆ. ಸಾಹಿತ್ಯದ ಮೂಲಕ ಕನ್ನಡೇತರ ವಿದ್ಯಾರ್ಥಿಗಳಿಗೆ ಜೀವ ತುಂಬುವ ಕೆಲಸ ಅಕಾಡೆಮಿ ಮತ್ತು ಚಕೋರ ವೇದಿಕೆಯ ಕಾರ್ಯ ಶ್ಲಾಘನೀಯ ಎಂದರು.

ನಿವೃತ್ತ ಶಿಕ್ಷಕ ಅಜೀಜ್ ಅವರು ಮಾತನಾಡಿ ನಮ್ಮ ಮನೆಯೊಳಗೆ ಮಾತೃಭಾಷೆ ಆಡಿ ಅದರೊಂದಿಗೆ ವ್ಯವಹಾರ ಮಾಡಲು, ಅಧ್ಯಯನ ಮಾಡಲು ಮೂರು ಭಾಷೆ ಅಗತ್ಯ. ಕನ್ನಡ ಭಾಷೆಗೆ ಒತ್ತುನೀಡಲು ಕರೆ ನೀಡಿದರು. ಕನ್ನಡ ಉಪನ್ಯಾಸಕರಾದ ಡಾ.ರಾಜಕುಮಾರ ಮಾಳಗೆ, ಡಾ.ಶೀಲಾದೇವಿ ಬಿರಾದಾರ ಮಾತನಾಡಿ ಸಾಹಿತ್ಯ ಓದು, ಅಧ್ಯಯನ ಅವಶ್ಯವೆಂದರು.

ಚಕೋರ ವೇದಿಕೆ ಸಂಚಾಲಕ ಡಾ.ಗವಿಸಿದ್ಧಪ್ಪ ಪಾಟೀಲ ಸ್ವಾಗತಿಸಿ ಅಕಾಡೆಮಿಯ ಕಾರ್ಯ ಯೋಜನೆ, ಚಕೋರದ ಮಹತ್ವ ಹೇಳಿ ಸಾವಿರಾರು ವರ್ಷಗಳ ಪರಂಪರೆ ಹೊಂದಿರುವ ಕನ್ನಡ ಭಾಷೆ– ಸಾಹಿತ್ಯ ಇಂದಿಗೂ ಅನ್ಯ ಭಾಷೆಗಳ ಸ್ವೀಕರಿಸಿ ತನ್ನದೇ ಆದ ಹೊಸ ಭಾಷೆ ಗಟ್ಟಿಗೊಳಿಸಿ ಕೊಂಡಿದೆ. ನಮ್ಮ ಚಕೋರ ವೇದಿಕೆ ಕನ್ನಡೇತರ ವಿದ್ಯಾರ್ಥಿ ಗಳಲ್ಲಿ ಕನ್ನಡ ಸಾಹಿತ್ಯದ ಓದು, ಅಧ್ಯಯನ, ಆಸಕ್ತಿ ಹುಟ್ಟಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ. ಎಂಟು ಜ್ಞಾನಪೀಠ ಪ್ರಶಸ್ತಿ ಲಭಿಸಿವೆ. ಕನ್ನಡ ಉದ್ಯೋಗದ ಭಾಷೆಯಾಗಲು ಸಾಹಿತ್ಯ ಅಗತ್ಯತೆ ಇದೆ ಪ್ರಾಸ್ತಾವಿಕ ನುಡಿಯಲ್ಲಿ ವಿವರಿಸಿದರು.

ಸಂಜೀವ ಸರ್ ದೈಹಿಕ ಶಿಕ್ಷಕರು, ವಿಜಯಕುಮಾರ ಕಂಚಾಗಾರ, ತಲಾತ್ ಸುಲ್ತಾನ್, ನಾಜಿಯಾ ಸಹೇರ, ಸೈಯದಾ ಶಕೀಬಾ ಫಾತಿಮಾ, ರುಕ್ಸಾನಾ ಬೇಗಂ ನಸೀಮಾ ಬಾನು, ಆಕಾಶ ತೆಗನೂರು ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಯಾಗಿ ನಡೆಸಿಕೊಟ್ಟರು. ತಾಹೇರಿ ಪ್ರಾರ್ಥನೆ ಗೀತೆ ಹಾಡಿದರು. ಡಾ.ಸಿದ್ಧಪ್ಪ ಹೊಸಮನಿ ನಿರೂಪಿಸಿದರು, ಡಾ.ಶೀರಪ್ಪ ಸಜ್ಜನ ವಂದಿಸಿದರು.

# ಬಲಿದಾನದ ಭಾವೈಕ್ಯತೆ ಬೆಸೆಯುವ ಮೊಹರಂ



ಸಂಸ್ಕೃತಿ–ಸಂಪ್ರದಾಯ

• ಸುರೇಶ ಕೆ.ವಿ ಮುದಗಲ್

ಇಸ್ಲಾಮಿಕ್ ಕ್ಯಾಲೆಂಡರ್ನ ಮೊದಲ ತಿಂಗಳಾದ ಮೊಹರಂ ಅನ್ನು ಪ್ರವಾದಿ ಮುಹಮ್ಮದ್ ಅವರ ಮೊಮ್ಮಗ ಇಮಾಮ್ ಹುಸೇನ್ ಅವರ ಬಲಿದಾನದ ಸ್ಮರಣಾರ್ಥವಾಗಿ ಮತ್ತು ಹೊಸ ವರ್ಷದ ಆರಂಭವಾಗಿ ಆಚರಿಸಲಾಗುತ್ತದೆ. ಕರ್ನಾಟಕದಲ್ಲಿ ಈ ಹಬ್ಬವನ್ನು ಜಾತಿ–ಮತ ಭೇದವಿಲ್ಲದೆ, ವಿಶೇಷವಾಗಿ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ 'ಅಲಾಬಿ ದೇವರು/ಪೀರು'ಗಳನ್ನು ಪ್ರತಿಷ್ಠಾಪಿಸಿ ಸೌಹಾರ್ದತೆಯಿಂದ ಆಚರಿಸಲಾಗುತ್ತದೆ.

ಲಕ್ಷಾಂತರ ಭಕ್ತಗಣದ ಮಧ್ಯೆ ಹಿಂದೂ ಮುಸ್ಲಿಂ ಭಾಂದವ್ಯ ಬೆಸೆಯುವ ಭಾವೈಕ್ಯತೆಯ ಮೊಹರಂ ಕೂಡಾ ಪ್ರಮುಖವಾದ ಆಚರಣೆಯಾಗಿದೆ. ಪಟ್ಟಣ ವ್ಯಾಪ್ತಿಗೆ ಸಂಬಂಧಪಟ್ಟಂತೆ ವಿವಿಧ ಗ್ರಾಮೀಣ ಭಾಗಗಳಲ್ಲಿಯೂ ಕೂಡ ಮೊಹರಂ ಆಚರಿಸಲಾಗುತ್ತಿದೆ. ಹಿಂದೂ ಮುಸ್ಲಿಂ ಸೇರಿದಂತೆ ಎಲ್ಲರು ಸೇರಿ ಭಕ್ತಿ ಭಾವ ದಿಂದ ಆಚರಿಸುವ ಮೂಲಕ ಸಾಮರಸ್ಯಕ್ಕೆ ಸಾಕ್ಷಿಯಾಗುವ ಈ ಮೊಹರಂ ಆಚರಣೆ ಮುದಗಲ್ ಪಿಕಲಿಹಾಳ, ನಾಗಲಾಪುರ, ಹುನೂರು, ಕಾಚಪುರ ಸೇರಿದಂತೆ ಬಹುತೇಕ ಗ್ರಾಮಗಳಲ್ಲಿ ಹಸನ್ ಹುಸೇನ್ ಹಾಗೂ ಕಾಸಿಮ್ ಪೀರಾಗಳ ಕತ್ತಲ್ ರಾತ್ರಿ ಮಾಡುವ ಮೂಲಕ ಮೊಹರಂ ಆಚರಿಸುವರು. ಮುದಗಲ್ ಮೊಹರಂ ಆಚರಣೆ ಅಲ್ಲೈ ದೇವರುಗಳನ್ನು ಹಳೇಪೇಟೆ, ನೀರ್ದೋಡ್ಡಿ, ವೆಂಕಟರಾಯನ ಪೇಟೆ, ಚಾವಡಿಕಟ್ಟೆ, ಬೇಗಂಪುರ್ ಪೇಟೆ ಹಾಗೂ ಕಿಲ್ಲಾ ಮತ್ತು ಮೇಗಳಪೇಟೆಯಲ್ಲಿ ಪೀರಾಗಳನ್ನು ಪ್ರತಿಷ್ಠಾಪಿಸಿದ್ದಾರೆ. ಹಬ್ಬದಲ್ಲಿ ಶ್ರೀಮಂತ, ಬಡವ ಎಂಬ ಭೇದಭಾವವಿಲ್ಲದೇ ಸರ್ವ ಧರ್ಮದವರು ಭಾಗವಹಿಸುವುದು ವಿಶೇಷ. ಭಕ್ತರು ತಮ್ಮ ಭಕ್ತಿ ಭಾವದೊಂದಿಗೆ ಅಲ್ಲಲ್ಲಿ ದೇವರುಗಳಿಗೆ ಸಕ್ಕರೆ, ಬೆಲ್ಲ, ಮಾದಲಿ, ಚೋಗ್ಯಾ, ನೆವೇದ್ಯವನ್ನು ಅರ್ಪಿಸುತ್ತಿರುವುದು ಸಾಮಾನ್ಯವಾಗಿ ಕಂಡು ಬಂತು. ಭಕ್ತರು ಕೊಬ್ರಿ, ಉತ್ತತ್ತಿ, ಹರಕೆ ಕುದುರೆ, ಶರಬತ್, ಮುಡುಪು, ಲೋಬಾನ ಸೇರಿದಂತೆ ಇತರೆ ವಸ್ತುಗಳನ್ನು ಆರಾಧ್ಯ ದೇವರಿಗೆ ಸಮರ್ಪಿಸುವರು.

ರಂಜಿಸುವ ಹೆಜ್ಜೆ ಕುಣಿತ, ಹುಲಿ ವೇಷ ಕುಣಿತ, ಹಳ್ಳಳ್ಳಿ ಬಳ್ಳೊಳ್ಳಿ ವೇಷ ಕಾಣುತ್ತವೆ. ಮೊಹರಂ ಆಚರಣೆ ಪ್ರಾರಂಭವಾಯಿತೆಂದರೆ ಪಟ್ಟಣದ ದೇವರ ಬಾವಿಯಲ್ಲಿ ರಾಜ್ಯದ ವಿವಿಧ ಮೂಲೆಗಳಿಂದ ಆಗಮಿಸಿದ ದೇವರುಗಳನ್ನು ತೊಳೆಯುವುದು ನೋಡಲು ಕಣ್ಣು ಸಾಲದಂತಾಗುತ್ತದೆ. ಸಾಕಷ್ಟು ಹಲಗೆ ಬಾರಿಸುವ ಸಪ್ಪಳ ಅತ್ಯಂತ ಸದ್ದು ಮಾಡುವ ಹಲಗೆ ಕುಣಿತ ಸಂಭ್ರಮ. ಇದರ ಜತೆ ಜತೆಯಲ್ಲಿ ಜಾನಪದ ಶೈಲಿಯ ಸಂಭ್ರಮಿಸುವ ಹೆಜ್ಜೆ ಕುಣಿತ(ಕೊಳಾಟ) ಸೇರಿ ಹುಲಿ ವೇಷದಾರಿ ಸೇರಿದಂತೆ ವಿವಿಧ ವೇಷದಾರಿಗಳನ್ನು ಈ ಮೊಹರಂನಲ್ಲಿ ವಿಶಿಷ್ಟವಾಗಿ ಕಾಣಬಹುದು. ಮನುಷ್ಯನಿಗೆ



ಹುಲಿವೇಶ ಬಣ್ಣ ಹಚ್ಚಿಕೊಂಡು ದೇವರ ಮುಂದೆ ಕುಣಿಯುವುದು, ಜನರನ್ನು ರಂಜಿಸಲು ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿ ಸುತ್ತಾಡಿ. ಹುಲಿವೇಷದೊಂದಿಗೆ ಜನರನ್ನು ರಂಜಿಸುವ ಮೂಲಕ ಹುಲಿ ಯಂತೆ ತಮ್ಮ ಹೆಜ್ಜೆ ಹೆಜ್ಜೆಗಳನ್ನು ಹಲಗೆ ಬಾರಿಸುವ ತಾಳ ತಕ್ಕಂತೆ ಕುಣಿಯುವ ಮೂಲಕ ಹುಲಿ ವೇಷದಾರಿಗಳು ತಮ್ಮ ಹರಕೆ 'ಗಳನ್ನು ಈ ಮೊಹರಂ ಹಬ್ಬದಲ್ಲಿ ಕಂಡು ಬರುತ್ತಿರುವ ದೃಶ್ಯವಾದರೆ, ಇನ್ನು ಕೆಲವರು ಹೆಜ್ಜೆ ತಕ್ಕಂತೆ ಕೊಲಾಟ ಆಡುವ ಮೂಲಕ ಜನರನ್ನು ರಂಜಿಸುವ ದೃಶ್ಯ ಸರ್ವ ಸಾಮಾನ್ಯವಾಗಿ ಈ ಹಬ್ಬದಲ್ಲಿ ಕಂಡು ಬರುತ್ತಿರುವ ಜನಪದ ಶೈಲಿ ಹೆಜ್ಜೆ ಕುಣಿತ ಕಾಣಬಹುದು. ಭಾವೈಕ್ಯತೆಯ ಪ್ರತೀಕವಾಗಿರುವ ಪ್ರತಿ ವರ್ಷವೂ ಮೊಹರಂ ಕಳೇದ ಮೂರು ನಾಲ್ಕು ದಿನದಿಂದ ತಾಲೂಕಿನಲ್ಲಿ ಬಹುತೇಕ ಗ್ರಾಮದಲ್ಲಿ ಮೊಹರಂ ಹಬ್ಬದ ನಿಮಿತ್ಯ ಅಲೆದೇವರುಗಳನ್ನು ಪ್ರತಿಷ್ಠಾಪಿಸಿದ್ದು. ಭಕ್ತರು ತಮ್ಮ ಭಕ್ತಿಭಾವದೊಂದಿಗೆ ಹಬ್ಬವನ್ನು ಸಂಭ್ರಮಿಸುತ್ತಿರುವ ದೃಶ್ಯ ಸಾಮಾನ್ಯವಾಗಿ ಕಂಡು ಬಂತು. ಹಿಂದೂ ಮುಸ್ಲಿಂ ಸಮಾಜದೊಂದಿಗೆ ಸಾಮಾರಸ್ಯದ ಸಂಕೇತವಾಗಿರುವ ಮೊಹರಂ ಹಬ್ಬ ನಿಮಿತ್ಯ ಜೂ:25 ಹಸನ್ ಹುಸೇನರ ಕತ್ತಲ ರಾತ್ರಿಯ ದಿನದಂದು ಅಣ್ಣ ತಮ್ಮಂದಿರ ಮಿಲನ ಸಮಯ ನೋಡುವ ದೃಶ್ಯ ಬಹು ವಿಶಿಷ್ಟದ ಸಂಕೇತವಾಗಿದೆ ಎನ್ನಬಹುದು. ಬೆಳಿಗ್ಗೆಯಿಂದಲೇ ಭಕ್ತರು ವಿವಿಧ ವಾದ್ಯ' ಮೇಳದೊಂದಿಗೆ ಅಲೈ ದೇವರುಗಳಲ್ಲಿ ದರ್ಶನ ಪಡೆದು ತಮ್ಮ ಹರಕೆ ತಿರುಸುವರು. ಧಿರ್ಘದಂಡ ನಮಸ್ಕಾರ ಸೇರಿದಂತೆ ವಿವಿಧ ಹರಕೆಗಳನ್ನು ಸಲ್ಲಿಸುವರು. ಅಲ್ಲದೇ ಜೂ:26 ರಂದು ಸಂಜೆ ಅಲೇದೇವರನ್ನುಗಳನ್ನು ಧಪನ್ ಕಾರ್ಯಕ್ರಮ ಜರಗಲಿದ್ದರಿಂದ ರಾಜ್ಯ ಸೇರಿದಂತೆ ವಿವಿಧ ರಾಜ್ಯಗಳಿಂದ ಆಗಮಿಸಿದ ಭಕ್ತರಗಣದ ಮದ್ಯೆ ಗಣ್ಯರ ವೇದಿಕೆ ಮಾಡಲಾಗಿರುತ್ತದೆ. ಮೊಹರಂ ಹಬ್ಬವನ್ನು ಸಂಭ್ರಮದೊಂದಿಗೆ ಭಾಗವಹಿಸುವ ಈ ಮೊಹರಂ ಹಬ್ಬ ಹಿಂದೂ ಮುಸ್ಲಿಂರೊಂದಿಗೆ ಸಾಮರಸ್ಯವನ್ನು ಬೆಸೆಯುವ ಸಂದರ್ಭ ಕಣ್ಮನ ಸೆಳೆಯುವಂತಿರುತ್ತದೆ. ಮೊಹರಂ ಆಚರಣೆ ಹಿನ್ನೆಲೆಯಲ್ಲಿ, ಭಕ್ತರಿಗೆ ತೊಂದರೆಯಾಗದಂತೆ ಪುರಸಭೆಯಿಂದ ಮೂಲಭೂತ ಸೌಕರ್ಯ, ಕಾನೂನು ಸುವ್ಯವಸ್ಥೆ ಕಾಪಾಡಲು ರಾಯಚೂರು ಜಿಲ್ಲೆ ಪೊಲೀಸ್ ಇಲಾಖೆಯಿಂದ ಕಟ್ಟುನಿಟ್ಟಿನ ಭದ್ರತಾ ಕ್ರಮಗಳನ್ನು ಕೈಗೊಂಡಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಶಗಿರಿ ನೇತೃತ್ವದಲ್ಲಿ ಪೊಲೀಸ್ ಬಿಗಿ ಭದ್ರತೆ ಮಾಡಲಾಗಿತ್ತು. ಹುಸೇನಿ ಆಲಂ ದರ್ಗಾ ಕಮಿಟಿಯಿಂದ ದರ್ಗಾದಲ್ಲಿ ಭಕ್ತಾದಿಗಳಿಗೆ ಬೇಕಾಗುವ ಸಕಲ ಸಿದ್ಧತೆಗಳು ಕೂಡ ಮಾಡಲಾಗಿತ್ತು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200215

PRGI NO. 120927
(RNINO:KARKAN/2011/48371)